Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–20 ಮೇ 15–21, 2023 ಪುಟ 16 ರೂ. 10/–
Volume-17 Issue-20 May 15-21, 2023 Pages:16 Price: 10/-




ಕರ್ನಾಟಕ: ಬಿಜೆಪಿ ಔಟ್

ಕೋಮುವಾದದ ನಂಜು
ದುರಾಡಳಿತ
ಭ್ರಷ್ಟಾಚಾರಗಳ ತಿರಸ್ಕಾರ
ನಿರ್ಣಾಯಕ ಸೋಲುಣಿಸಿದ
ಮತದಾರ



ಪತ್ರಿಕಾ ಸ್ವಾತಂತ್ರ್ಯ ಬಿಕ್ಕಟ್ಟಿನಲ್ಲಿ



'ದಿ ಕೇರಳ ಸ್ಟೋರಿ' : ಕೇರಳ ಮತ್ತು ಮುಸಲ್ಮಾನರೇ ಅವರ ಗುರಿ

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–29

ಡಾ.ಶಮ್ಸುಲ್‌ಇಸ್ಲಾಂ
ಅನು:ಟಿ.ಸುರೇಂದ್ರರಾವ್

ಇದುವರೆಗೆ ಆರು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ_

ಮಿಥ್ಯೆ 1: 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?

ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?

ಮಿಥ್ಯೆ 3: ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?

ಮಿಥ್ಯೆ 4: ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು !?

ಮಿಥ್ಯೆ 5: ಸಾವರ್ಕರ್ ಒಬ್ಬ ವಿಚಾರವಾದಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು !?

ಮಿಥ್ಯೆ 6: ಗಾಂಧಿ ಹತ್ಯೆಯ ಪ್ರಕರಣದಲ್ಲಿ ಆರೋಪಗಳು ಸಾಬೀತಾಗಲೇ ಇಲ್ಲ!?

ಈಗ ಮಿಥ್ಯೆ 7.. ಸಾವರ್ಕರ್‌ರ 'ಹಿಂದುತ್ವ': ಭಾರತ ದೇಶಕ್ಕೆ ವೈಜ್ಞಾನಿಕ ಆಧಾರ !?

ಇದರ ಮೊದಲ ಭಾಗದಲ್ಲಿ, ಹಿಂದುತ್ವ ಮತ್ತು ಹಿಂದೂಧರ್ಮದ ನಡುವೆ ಸ್ಪಷ್ಟ ವ್ಯತ್ಯಾಸ ಇದೆ ಎಂಬುದನ್ನು ಅವರು ಹೇಗೆ ಮಂಡಿಸಿದ್ದರು ಎಂಬುದರ ಬಗ್ಗೆ ಓದಿದ್ದೀರಿ. ಮುಂದೆ ಓದಿ..

'ದ್ವಿರಾಷ್ಟ್ರ' ಸಿದ್ಧಾಂತದ ನೆಲೆ..

ತಮ್ಮ ಹಿಂದುತ್ವ ಸಿದ್ಧಾಂತ ಹಾಗೂ ಹಿಂದೂಯಿಸಂ(ಹಿಂದೂವಾದ) ನಡುವೆ ಒಂದು ಸ್ಪಷ್ಟ ವ್ಯತ್ಯಾಸವನ್ನು ತೋರುವ ಪ್ರಯತ್ನದ ಮೂಲಕ ಆರಂಭಿಸುವ ಸಾವರ್ಕರರಿಗೆ ತಮ್ಮ ಮಂಡನೆಯನ್ನು ಸಮಾಪ್ತಗೊಳಿಸುವ ವೇಳೆಗೆ ಅದು ಮರೆತು ಹೋದಂತಿತ್ತು. ಅವರ ಈ ಮಾತುಗಳನ್ನು ನೋಡಿ: ಸಾವರ್ಕರರಿಗೆ ತಮ್ಮ ಮಂಡನೆಯನ್ನು ಸಮಾಪ್ತಗೊಳಿಸುವ ವೇಳೆಗೆ ಅದು ಮರೆತು ಹೋದಂತಿತ್ತು. ಅವರ ಈ ಮಾತುಗಳನ್ನು ನೋಡಿ:

"ನಿರ್ಣಯಕ್ಕೆ ಬಂದ ನಂತರದ ಒಟ್ಟು ಸಾರಾಂಶವನ್ನು ಹೇಳಬೇಕೆಂದರೆ, ಸಿಂಧೂವಿನಿಂದ ಸಿಂಧೂವಿಗೆ, ಅಂದರೆ ಸಿಂಧೂ ನದಿಯಿಂದ ಸಮುದ್ರದವರೆಗೆ ವ್ಯಾಪಿಸಿರುವ ಭೂಮಿಯನ್ನು ಪೂಜ್ಯ ಭಾವದಿಂದ ಕಂಡು ತನ್ನ ಪೂರ್ವಜರ ಭೂಮಿ, ಪಿತೃಭೂ ಎಂದು ಯಾರು ಪರಿಗಣಿಸುತ್ತಾನೋ, ತನ್ನನ್ನು ವೈದಿಕ ಸಪ್ತಸಿಂಧೂವಿನ ಮೊದಲ ಗ್ರಹೀತ ಮೂಲದಿಂದ ಬಂದ ಮತ್ತು ತನ್ನ ಮುಂದುವರಿದ ನಡೆಯಲ್ಲಿ ಸಂಘಟಿತ ಸಂಸ್ಥೆಯಾಗಿ ಮೈಗೂಡಿಸಿಕೊಂಡು ಹಾಗೂ ಹಾಗೆ ಮೈಗೂಡಿಸಿಕೊಂಡಿದ್ದನ್ನು ಉದಾತ್ತೀಕರಿಸಿದ, ಹಿಂದೂ ಜನರು ಎಂದು ಹೆಸರಾದ ಜನಾಂಗದ ರಕ್ತಸಂಬಂಧಿಯೆಂದು ತಿಳಿಯುತ್ತಾನೋ, ಬಹಳ ಮುಖ್ಯವಾಗಿ ಅವರ ಸಮಾನ ಭಾಷೆಯಾದ ಸಂಸ್ಕೃತ ದಿಂದ ವ್ಯಕ್ತಗೊಂಡ ಮತ್ತು ಸಮಾನ ಚರಿತ್ರೆ, ಸಮಾನ ಸಾಹಿತ್ಯ,, ಕಲೆ ಹಾಗೂ ವಾಸ್ತುಶೈಲಿ, ಕಾನೂನು ಹಾಗೂ ನ್ಯಾಯಶಾಸ್ತ್ರ, ಧಾರ್ಮಿಕ ವಿಧಿ ಹಾಗೂ ಮತಾಚರಣೆಗಳು, ಸಮಾರಂಭಗಳು ಹಾಗೂ ಮತಸಂಸ್ಕಾರಗಳು, ಹಬ್ಬ ಹರಿದಿನಗಳನ್ನು ಪ್ರತಿನಿಧಿಸುವ ಆ ಜನಾಂಗದ ಸಂಸ್ಕೃತಿಯ ವಾರಸುದಾರ ಎಂದು ತಿಳಿಯುತ್ತಾನೋ, ಮತ್ತು ಎಲ್ಲಕ್ಕೂ ಮಿಗಿಲಾಗಿ ಈ ಭೂಮಿಯನ್ನು – ಸಿಂಧೂಸ್ತಾನ ವನ್ನು – ಧರ್ಮಪ್ರವರ್ತಕರು ಹಾಗೂ ಋಷಿಗಳು, ದೈವಪುರುಷರು ಹಾಗೂ ಗುರುಗಳ ಮತ್ತು ಧರ್ಮಶ್ರದ್ಧೆ ಹಾಗೂ ತೀರ್ಥಯಾತ್ರೆಗಳ ನಾಡನ್ನು ತನ್ನ ಪುಣ್ಯಭೂಮಿ ಅಥವಾ ಪವಿತ್ರಭೂಮಿ ಎಂದು ಕರೆಯುತ್ತಾನೋ ಅವನನ್ನು ಹಿಂದೂ ಎನ್ನಬಹುದು.

ಒಂದು ಸಮಾನ ರಾಷ್ಟ್ರ (ದೇಶ) ಒಂದು ಸಮಾನ ಜಾತಿ (ಜನಾಂಗ) ಮತ್ತು ಒಂದು ಸಮಾನ ಸಂಸ್ಕೃತಿ [ನಂತರದ ಮುದ್ರಣಗಳಲ್ಲಿ ನಾಗರೀಕತೆ ಎಂದು ಭಾಷಾಂತರಿಸಲಾಗಿದೆ] ಇವು ಹಿಂದುತ್ವ ದ ಅತ್ಯಗತ್ಯ ಅಂಶಗಳು. ಈ ಎಲ್ಲಾ ಅತ್ಯಗತ್ಯ ಅಂಶಗಳನ್ನು ಸಾರಾಂಶ ರೂಪದಲ್ಲಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಯಾವನಿಗೆ ಸಿಂಧೂಸ್ತಾನ ವು ಪಿತೃಭೂಮಿ ಮಾತ್ರವಾಗಿರದೆ ಪುಣ್ಯಭೂಮಿ ಯೂ ಆಗಿರುತ್ತದೆಯೋ ಅವನು ಒಬ್ಬ ಹಿಂದೂ ಎನ್ನಬಹುದು. ಹಿಂದುತ್ವ ದ ಮೊದಲ ಎರಡು ಅತ್ಯಗತ್ಯ ಅಂಶಗಳು – ರಾಷ್ಟ್ರ ಮತ್ತು ಜಾತಿ ಗಳು ಪಿತೃಭೂಮಿ ಪದದ ಮೂಲಕ ಗುರುತಿಸಲ್ಪಡುತ್ತವೆ ಮತ್ತು ಸೂಚಿಸಲ್ಪಡುತ್ತವೆ; ಮೂರನೇ ಅತ್ಯಗತ್ಯ ಅಂಶವಾದ ಸಂಸ್ಕೃತಿ ಯು ಸರ್ವಶ್ರೇಷ್ಠವಾಗಿ ಪುಣ್ಯಭೂಮಿ ಎಂಬ ಅರ್ಥ ಕೊಡುತ್ತದೆ; ಏಕೆಂದರೆ ಅದು ಕರಾರುವಾಕ್ಕಾಗಿ ಧಾರ್ಮಿಕ ವಿಧಿ ಹಾಗೂ ಮತಾಚರಣೆಗಳು, ಸಮಾರಂಭಗಳು ಹಾಗೂ ಮತಸಂಸ್ಕಾರಗಳನ್ನು ಒಳಗೊಂಡ ಸಂಸ್ಕೃತಿ ಯಿಂದಾಗಿ ಪವಿತ್ರಭೂಮಿ ಎಂದು ಪರಿಗಣಿಸಲ್ಪಡುತ್ತದೆ.

ಹೀಗಾಗಿ ಹಿಂದುತ್ವದ ಅಥವಾ ಹಿಂದೂ ಆಗುವುದರ ಅತ್ಯಗತ್ಯ ಅಂಶಗಳು ಒಂದೇ ಎಂದು ಅಂತಿಮವಾಗಿ ಘೋಷಿಸಲಾಗಿದೆ. ಹಿಂದೂಗಳು ಒಂದು ಸಮಾನ ದೇಶಕ್ಕೆ ಸೇರಿದವರಾಗಿದ್ದಾರೆ ಏಕೆಂದರೆ ಅವರು ಅದೇ ಆರ್ಯ ಜನಾಂಗದಿಂದ ಬಂದವರಾಗಿದ್ದಾರೆ, ಸಮಾನ ನಾಗರೀಕತೆಗೆ ಸೇರಿದವರಾಗಿದ್ದಾರೆ ಮತ್ತು 'ಹಿಂದೂಸ್ತಾನ'ವನ್ನು ಪಿತೃಭೂಮಿ ಮತ್ತು ಪವಿತ್ರಭೂಮಿ ಎಂದು ಆರಾಧಿಸುತ್ತಾರೆ. ಮುಸ್ಲಿಮರು ಮತ್ತು ಕ್ರಿಶ್ಚಿಯನರು ಈ ರಾಷ್ಟ್ರತ್ವದಿಂದ ಹೊರಗೆ ಉಳಿಯುತ್ತಾರೆ ಏಕೆಂದರೆ ಅವರು ಹಿಂದೂ ಸಾಂಸ್ಕೃತಿಕ ಪರಂಪರೆಯನ್ನು ಮೈಗೂಡಿಸಿಕೊಂಡಿಲ್ಲ ಅಥವಾ ಹಿಂದೂ ಧರ್ಮವನ್ನು ಸ್ವೀಕರಿಸಿಲ್ಲ. ಸಾವರ್ಕರ್ ಅವರ ವಾದಸರಣಿಯ ಪ್ರಕಾರ,

"ಕ್ರಿಶ್ಚಿಯನ್ ಮತ್ತು ಮಹಮ್ಮದೀಯ ಸಮುದಾಯದವರು, ಯಾರು ತೀರ ಇತ್ತೀಚೆನವರೆಗೂ ಹಿಂದೂಗಳಾಗಿದ್ದರು ಮತ್ತು ಬಹುಪಾಲು ಪ್ರಕರಣಗಳಲ್ಲಿ ಅವರ ಮೊದಲ ತಲೆಮಾರಿನವರು ತಮ್ಮ ಹೊಸ ಶ್ರದ್ಧೆಗೆ ವಿದೇಶೀಯ ನಂಬಿಕೆಗಳಿಗೆ ಇಷ್ಟಪಟ್ಟು ಒಳಗಾದವರು ಸಮಾನ ಪಿತೃಭೂಮಿ, ಬಹುಪಾಲು ಅಪ್ಪಟ ಹಿಂದೂ ರಕ್ತದವರು ಮತ್ತು ವಂಶಾವಳಿಯವರು ಎಂದು ಹೇಳಿಕೊಳ್ಳುವವರನ್ನು ಹಿಂದೂಗಳೆಂದು ಮಾನ್ಯ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅವರು ಹೊಸ ಪಂಥವನ್ನು ಸ್ವೀಕರಿಸಿದ ನಂತರ ಇಡಿಯಾಗಿ ಹಿಂದೂ ಸಂಸ್ಕೃತಿಯನ್ನು ತಮ್ಮದೆಂದು ಹೇಳಿಕೊಳ್ಳಲಾಗದು. ಅವರು ಸಂಪೂರ್ಣವಾಗಿ ಹಿಂದೂ ಸಂಸ್ಕೃತಿಗೆ ಭಿನ್ನವಾದ ಸಾಂಸ್ಕೃತಿಕ ಘಟಕಕ್ಕೆ ಸೇರಿದವರಾಗುತ್ತಾರೆ. ಅವರ ದೇವದೇವತೆಗಳು ಮತ್ತು ದೈವಾರಾಧನೆ, ಅವರ ಹಬ್ಬ ಹರಿದಿನಗಳು, ಬದುಕಿನ ಬಗೆಗಿನ ಅವರ ಆದರ್ಶಗಳು ಮತ್ತು ಚಿಂತನೆಗಳು ಈಗ ನಮ್ಮವುಗಳಂತಾಗಿ ಉಳಿದಿಲ್ಲ."

ಮುಸ್ಲಿಮರು ಒಂದು ಏಕಶಿಲ್ಪ ಸಮಷ್ಠಿಯಲ್ಲ ಮತ್ತು ಒಂದು ಸಮುದಾಯವಾಗಿ ಅವರು ಸಂಸ್ಕೃತಿ, ಆಚರಣೆಗಳು, ನಂಬಿಕೆಗಳು ಮತ್ತು ಭಾಷೆಯಲ್ಲಿ ಹಲವು ವೈವಿಧ್ಯತೆಗಳಿಂದ ತುಂಬಿದ ಬದುಕನ್ನು ನಡೆಸುತ್ತಾರೆ ಎಂಬುದು ಸಾವರ್ಕರರಿಗೆ ಗೊತ್ತಿತ್ತು. ಅಷ್ಟೇ ಅಲ್ಲದೆ, ಒಂದು ಧರ್ಮವಾಗಿ ಇಸ್ಲಾಂ ಬಗ್ಗೆ ಅವರ ಪರಿಕಲ್ಪನೆಗಳಲ್ಲೂ ವೈವಿಧ್ಯತೆಯಿದೆ.. ಅಲ್ಲದೇ, ಬೋಹ್ರಾ ಅಥವಾ ಖೋಜಾರಂತಹ ದೇಶಪ್ರೇಮಿ ಮುಸ್ಲಿಮರೂ ನಮ್ಮ ದೇಶದಲ್ಲಿ ಇದ್ದಾರೆ ಮತ್ತು ಅವರು ಭಾರತವನ್ನು ತಮ್ಮ ಪಿತೃಭೂಮಿಯೆಂದು ಪ್ರೀತಿಸುತ್ತಾರೆ ಹಾಗೂ ಅಪ್ಪಟ ಹಿಂದೂ ರಕ್ತವನ್ನು ಕೂಡ ಅವರು ಉಳ್ಳವರಾಗಿದ್ದಾರೆ ಎಂಬುದನ್ನು ಸಾವರ್ಕರ್ ಒಪಿಕೊಳ್ಳುತ್ತಾರೆ. ಇದಕ್ಕೂ ಮಿಗಿಲಾಗಿ, ಅವರು ವಿವೇಕಯುತರಾದವರು ಮತ್ತು

"ನಮ್ಮ ಇತಿಹಾಸ ಹಾಗೂ ದೇವಾನುದೇವತೆಗಳನ್ನು ಪ್ರೀತಿಸುತ್ತಾರೆ, ನಿಜ ಹೇಳಬೇಕೆಂದರೆ ಬೋಹ್ರಾ ಮತ್ತು ಖೋಜಾಗಳು ನಮ್ಮ ದೇವಾನುದೇವತೆಗಳನ್ನು ಆರಾಧಿಸುತ್ತಾರೆ ಹಾಗೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹತ್ತು ಅವತಾರಗಳಿಗೆ ಮಹಮ್ಮದನನ್ನು ಸೇರಿಸಿ ಹನ್ನೊಂದನೇ ಅವತಾರವೆಂದೂ ಪೂಜಿಸುತ್ತಾರೆ. ವಾಸ್ತವವಾಗಿ ಅವನು ನಿಜವಾಗಿಯೂ ಅವನ ಸಮುದಾಯದವರೊಂದಿಗೆ ಹಿಂದೂ ವಿಧಿನಿಯಮಗಳನ್ನು ತನ್ನ ಪೂರ್ವಜರ ವಿಧಿನಿಯಮವೆಂದು ಪರಿಗಣಿಸುತ್ತಾನೆ. ಮೂರು ಅತ್ಯಗತ್ಯ ಅಂಶಗಳಾದ ರಾಷ್ಟ್ರ, ಜಾತಿ ಮತ್ತು ಸಂಸ್ಕೃತಿಗಳಿಗೆ ಸಂಬಂಧಪಟ್ಟಂತೆ ಅವನು ಒಬ್ಬ ಹಿಂದೂವೇ ಆಗುತ್ತಾನೆ."

ಎನ್ನುತ್ತಾರೆ ಸಾವರ್ಕರ್.

ಆದರೆ ಈ 'ದೇಶಪ್ರೇಮಿ' ಬೊಹ್ರಾಗಳು ಅಥವಾ ಖೋಜಾಗಳನ್ನು ಕೂಡ ಭಾರತೀಯರಾಗುವುದಕ್ಕೆ ಪೂರ್ವಭಾವಿ ಷರತ್ತಾಗಿ ಅವರನ್ನು ಹಿಂದೂಗಳೆಂದು ಪರಿಗಣಿಸಬಹುದೆ? ಅದಕ್ಕೆ ಸಾವರ್ಕರ್ ಅವರ ದೃಢವಾದ ಉತ್ತರ ಬಹಳ ಸರಳವಾಗಿ 'ಇಲ್ಲ'.

"ಬೊಹ್ರಾನನ್ನು ಖಂಡಿತವಾಗಿಯೂ ಹಾಗೆ ಪರಿಗಣಿಸಬಹುದಾಗಿತ್ತು ಆದರೆ ಸಂಸ್ಕೃತಿಯನ್ನು ಒಳಗೊಂಡಿದ್ದಾಗ್ಯೂ,, ಇತರ ಎಲ್ಲಾ ಗುಣ ಲಕ್ಷಣಗಳ ಜತೆ ಒಂದು ಒಂದು ವಿಷಯದಲ್ಲಿ ಮಾತ್ರ, ವಿಶೇಷ ಪರಿಗಣನೆ ಹಾಗೂ ವಿಶ್ಲೇಷಣೆಯ ಅಗತ್ಯವಿದೆ; ಹಿಂದುತ್ವದ ಧಾರ್ಮಿಕ ಅಂಶವನ್ನು ಮರೆಯಲಾಗದು. ನಾವು ಸಾಮಾನ್ಯವಾಗಿ ಆ ಅಂಶವನ್ನು ಮರೆತುಬಿಡುತ್ತೇವೆ, ಆ ಕುರಿತು ಹೋರಾಡಲು ಹಿಂಜರಿಯುತ್ತೇವೆ ಎಂದಲ್ಲ, ಆದರೆ ಅದನ್ನು ಇನ್ನೂ ಆಮೂಲಾಗ್ರವಾಗಿ ಮತ್ತೂ ಪರಿಣಾಮಕಾರಿಯಾಗಿ ಹೋರಾಡಬೇಕಿದೆ."

ಎನ್ನುತ್ತಾರೆ ಸಾವರ್ಕರ್.

ಸಾವರ್ಕರರ ಈ 'ಆಮೂಲಾಗ್ರ ಹಾಗೂ ಪರಿಣಾಮಕಾರಿ' ಅಧ್ಯಯನವು ಇತರ ಮುಸ್ಲಿಮರು ಮತ್ತು ಕ್ರಿಶ್ಚಿಯನರಂತೆ ಬೊಹ್ರಾರವರನ್ನು ಕೂಡ ಹಿಂದೂಗಳೆಂದು ಮತ್ತು ಹಿಂದೂ ರಾಷ್ಟ್ರದ ಭಾಗವೆಂದು ಪರಿಗಣಿಸಲಾಗುವುದಿಲ್ಲ ಎಂಬ ತೀರ್ಮಾನಕ್ಕೆ ಅವರನ್ನು ತಂದು ನಿಲ್ಲಿಸುತ್ತದೆ. ಏಕೆಂದರೆ ಅವರ ಪ್ರಕಾರ

ಅವರ ಪುಣ್ಯಭೂಮಿ ವಿದೇಶಗಳಲ್ಲಿದೆ. ಸಾವರ್ಕರ್ ಪ್ರಕಾರ ಮುಸ್ಲಿಮರು ಮತ್ತು ಕ್ರಿಶ್ಚಿಯನರು ಸಮಾನ ಪಿತೃಭೂಮಿ ಮತ್ತು ಸಮಾನ ಸಾಂಸ್ಕೃತಿಕ ಸಂಪತ್ತಿನ ಬಹುಭಾಗವನ್ನು – ಭಾಷೆ, ಕಾನೂನು, ಆಚರಣೆಗಳು, ಜನಪದೀಯ ನಂಬಿಕೆಗಳು ಮತ್ತು ಇತಿಹಾಸವನ್ನು – ಅನುವಂಶಿಕವಾಗಿ ಪಡೆದಿದ್ದರೂ ಅವರು ಹಿಂದೂಗಳಲ್ಲ ಮತ್ತು ಅವರನ್ನು ಹಿಂದೂಗಳೆಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ ಅವರಿಗೆ ಇತರ ಹಿಂದೂಗಳಂತೆ ಹಿಂದೂಸ್ತಾನವು ಪಿತೃಭೂಮಿಯಾಗಿದ್ದರೂ ಅದು ಅವರ ಪುಣ್ಯಭೂಮಿಯಂತೂ ಅಲ್ಲ. ಅವರ ಪವಿತ್ರಭೂಮಿಯು ಬಹಳ ದೂರದ ಅರೇಬಿಯಾ ಅಥವಾ ಪ್ಯಾಲೆಸ್ತೇನಿನಲ್ಲಿ ಇದೆ. ಅವರ ಪುರಾಣ ಮತ್ತು ದೇವಾನುದೇವತೆಗಳು, ಚಿಂತನೆಗಳು ಮತ್ತು ದೈವಾಂಶ ಸಂಭೂತರು ಯಾರೂ ಈ ನೆಲದ ಮಕ್ಕಳಲ್ಲ. ಆ ಪರಿಣಾಮವಾಗಿ, ಅವರ ಹೆಸರುಗಳು ಹಾಗೂ ಅವರ ದೃಷ್ಟಿಕೋನಗಳು ವಿದೇಶಿ ಮೂಲದ ವಾಸನೆ ಪಡೆದಿರುತ್ತವೆ. ಅವರ ಪ್ರೇಮ ಹಂಚಿಹೋಗಿರುತ್ತದೆ .. .. ನಾವು ಇದನ್ನು ಖಂಡಿಸುವುದಿಲ್ಲ ಅಥವಾ ಇದಕ್ಕೆ ದುಃಖಿಸುವುದಿಲ್ಲ. ನಾವು ವಾಸ್ತವಾಂಶವನ್ನು ಹೇಗಿದೆಯೋ ಹಾಗೆ ಹೇಳುತ್ತಿದ್ದೇವಷ್ಟೆ. ನಾವು ಹಿಂದುತ್ವದ ಅತ್ಯಗತ್ಯ ಅಂಶಗಳನ್ನು ನಿರ್ಧರಿಸಲು ಪ್ರಯತ್ನಿಸಿದ್ದೇವೆ ಮತ್ತು ಹಾಗೆ ಮಾಡುವಾಗ ಬೋಹ್ರಾಗಳು ಮತ್ತು ಅಂತಹ ಮಹಮ್ಮದೀಯ ಅಥವಾ ಕ್ರಿಶ್ಚಿಯನ್ ಸಮುದಾಯದವರು ಹಿಂದುತ್ವದ ಎಲ್ಲ ಅತ್ಯಗತ್ಯ ಅರ್ಹತೆಗಳನ್ನು ಹೊಂದಿದ್ದಾರೆ ಆದರೆ ಒಂದು ವಿಷಯದಲ್ಲಿ ಮಾತ್ರ, ಅವರು ಭಾರತವನ್ನು ತಮ್ಮ ಪವಿತ್ರಭೂಮಿಯೆಂದು ಪರಿಗಣಿಸುವುದಿಲ್ಲ ಎಂಬುದನ್ನು ಕಂಡುಕೊಂಡೆವು.

ತಾನು 'ಹಿಂದೂಸ್ತಾನ'ದ ಅಥವಾ ಹಿಂದೂ ರಾಷ್ಟ್ರದ ಭಾಗ ಎಂದು ಸಿಸ್ಟರ್ ನಿವೇದಿತಾ ಅವರು ಸಮರ್ಥಿಸಿಕೊಂಡಾಗ, ಅವರ ಅರ್ಹತೆಯ ಬಗ್ಗೆ ಸಾವರ್ಕರರು ಮೌಲ್ಯಮಾಪನ ಮಾಡಿದಾಗ ಮತ್ತು ತೀರ್ಮಾನ ಕೊಟ್ಟಾಗ ಅವರ ಹಿಂದೂ ಪ್ರತ್ಯೇಕತಾ ಮನೋಭಾವ ಮತ್ತು ಪುಡಾರಿತನವು ಹಿಂದುತ್ವ ವೇಷದಡಿಯಲ್ಲಿ ಪರಾಕಾಷ್ಠೆಯನ್ನು ತಲುಪಿತು. ಸಾವರ್ಕರ್ ಅವರ ನಿರ್ವಚನೆಯ ಪ್ರಕಾರ ಸಿಸ್ಟರ್ ನಿವೇದಿತಾ ಹಿಂದೂವಾಗಿದ್ದಾರೆಯೇ ಎಂಬುದು ಅತಿ ಮುಖ್ಯವಾದ ಪ್ರಶ್ನೆಯಾಗಿತ್ತು. ಸಾವರ್ಕರ್ ಅವರ ತೀರ್ಮಾನ ಹೀಗಿತ್ತು:

"ನಮ್ಮ ದೇಶಪ್ರೇಮಿ ಹಾಗೂ ಉದಾತ್ತ ಮನಸ್ಸಿನ ಸಿಸ್ಟರ್ ನಮ್ಮ ನೆಲವನ್ನು ತಮ್ಮ ಪಿತೃಭೂಮಿಯನ್ನಾಗಿ ಸ್ವೀಕರಿಸಿದ್ದಾರೆ .. .. ಹಾಗಾಗಿ ಮೊದಲ ಅತ್ಯಗತ್ಯ ಅಂಶ ಅವರ ವಿಷಯದಲ್ಲಿ ಬಹುಮಟ್ಟಿಗೆ ಅನ್ವಯಿಸುತ್ತದೆ. ಎರಡನೆಯ ಅತ್ಯಗತ್ಯ ಅಂಶವಾದ ಹಿಂದೂ ವಂಶಾವಳಿಯ ಸಮಾನ ರಕ್ತದ ಪ್ರಶ್ನೆ ಬಂದಾಗ, ಅದು ಇಂತಹ ಪ್ರಕರಣಗಳಲ್ಲಿ ಅನ್ವಯಿಸುವುದಿಲ್ಲ. ಹಿಂದೂವಿನೊಡನೆ ಮದುವೆಯಂತಹ ಮತಸಂಸ್ಕಾರ ಬೆಸೆಯುತ್ತದೆ ಮತ್ತು ಸಾರ್ವತ್ರಿಕವಾಗಿ ಹಾಗೆ ಮಾಡಬಹುದೆಂದು ಒಪ್ಪಿಕೊಂಡಾಗ, ಈ ಅನರ್ಹತೆಯನ್ನು ತೆಗೆದುಹಾಕಬಹುದೆಂದು ಹೇಳಬಹುದು. ಎರಡನೆಯ ಅತ್ಯಗತ್ಯ ಆಂಶವು ಎಲ್ಲಾ ವಿಧಾನದಿಂದಲೂ ಅವರ ಪ್ರಕರಣದಲ್ಲಿ ವಿಫಲವಾಗಿರುವಾಗ, ಈ ಮೂರನೇ ಪ್ರಮುಖ ಅರ್ಹತೆಯಾದ ಹಿಂದುತ್ವ ಅವರನ್ನು ಹಿಂದೂ ಎಂದು ಪರಿಗಣಿಸುತ್ತದೆ. ಏಕೆಂದರೆ ಅವರು ನಮ್ಮ ಸಂಸ್ಕೃತಿಯನ್ನು ಅಳವಡಿಸಿಕೊಂಡಿಸಿದ್ದಾರೆ ಮತ್ತು ನಮ್ಮ ನೆಲವನ್ನು ತಮ್ಮ ಪಿತೃಭೂಮಿಯೆಂದು ಸ್ವೀಕರಿಸಿದ್ದಾರೆ. ತಾನ್ನೊಬ್ಬ ಹಿಂದೂ ಎಂದು ಅವರು

ಪುಟ 4 ಕ್ಕೆ

ಸಂಪಾದಕೀಯ

ಜನಾದೇಶ ಮತ್ತು ಜನತೆಯ ನಿರೀಕ್ಷೆಗಳು

2023 ರ ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರದಲ್ಲಿದ್ದ ಬಿ.ಜೆ.ಪಿ ಪಕ್ಷವನ್ನು ಜನತೆ ನಿರ್ಣಾಯಕವಾಗಿ ಸೋಲಿಸಿ ಸ್ಪಷ್ಟ ಸಂದೇಶವನ್ನು ನೀಡಿದ್ದಾರೆ. ಕರ್ನಾಟಕದಲ್ಲಿ ಕೋಮುದ್ವೇಷದ ವಿಭಜನಾಕಾರಿ ದುಷ್ಟ ಆಟಗಳನ್ನು, ನಾಡಿನ ಸೌಹಾರ್ದತೆ, ಶಾಂತಿ ಸಾಮರಸ್ಯವನ್ನು ಕದಡುವ ಹಿಂಸಾ ರಾಜಕಾರಣವನ್ನು ತಿರಸ್ಕರಿಸಿದ್ದಾರೆ. ಈ ಮೂಲಕ ಕರ್ನಾಟಕದ ವೈವಿಧ್ಯಮಯ ಸಂಸ್ಕೃತಿ, ಭಾಷೆ, ಆರ್ಥಿಕ–ಸಾಮಾಜಿಕ ಅನನ್ಯತೆ, ಅಸ್ಮಿತೆಗಳಿಗೆ ಧಕ್ಕೆ ತರುವುದನ್ನು ಸಹಿಸುವುದಿಲ್ಲ ಎಂದು ಸಾರಿದ್ದಾರೆ. ಈ ನಿಚ್ಚಳ ಜನಾದೇಶ ಅತ್ಯಂತ ಸ್ವಾಗತಾರ್ಹ.


ತಮಗೆ ಜನಾದೇಶವಿಲ್ಲದಿದ್ದರೂ 'ಆಪರೇಷನ್ ಕಮಲ' ಎಂಬ ಅನೈತಿಕ, ಅಕ್ರಮ ಮಾರ್ಗದಿಂದ ಅಧಿಕಾರ ಹಿಡಿದಿದ್ದ ಬಿಜೆಪಿ ಪಕ್ಷದ ದುರಾಡಳಿತವನ್ನು ಜನತೆ ಸಹಿಸಿಲ್ಲ. ಒಟ್ಟು 223 ಸ್ಥಾನಗಳ ಪೈಕಿ ಕಾಂಗ್ರೆಸ್ ಪಕ್ಷಕ್ಕೆ 135 ಸ್ಥಾನಗಳನ್ನು, ಬಿಜೆಪಿ ಗೆ 66, ಜೆ.ಡಿ.ಎಸ್. ಪಕ್ಷಕ್ಕೆ 19 ಹಾಗೂ ಕೆ.ಕೆ.ಆರ್. ಎಸ್. 1, ದರ್ಶನ್ ಪುಟ್ಟಣ್ಣಯ್ಯ ಒಳಗೊಂಡು 2 ಪಕ್ಷೇತರ ರನ್ನು ಆಯ್ಕೆ ಮಾಡಿದ್ದಾರೆ. 9 ಜಿಲ್ಲೆಗಳಲ್ಲಿ ಬಿಜೆಪಿ ಪಕ್ಷಕ್ಕೆ ಒಂದೂ ಸ್ಥಾನವನ್ನೂ ನೀಡಿಲ್ಲದಿರುವುದು ಗಮನಾರ್ಹ. ಮತ್ತೊಮ್ಮೆ ಅತಂತ್ರ ವಿಧಾನ ಸಭೆ ಬರಲಿದೆ ಎಂಬ ಊಹೆ, ಗೊಂದಲಗಳಿಗೆ ತೆರೆ ಎಳೆದ ಮತದಾರರು ಒಂದು ಪಕ್ಷಕ್ಕೆ ಭಾರೀ ಬಹುಮತ ನೀಡಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ಮೂರನೆಯ ಪರ್ಯಾಯ ರಾಜಕೀಯ ಶಕ್ತಿಗಳಲ್ಲಿ ಒಂದು ಆಗಿದ್ದ ಜೆ.ಡಿ.ಎಸ್. ಪಕ್ಷ ಮಾಡಿದ್ದ ಅತಂತ್ರ ಸ್ಥಿತಿಯ ಲಾಭ ಪಡೆಯಬಹುದು ಎಂಬ ಲೆಕ್ಕಾಚಾರಕ್ಕೂ ಸ್ಪಷ್ಟ ಉತ್ತರ ನೀಡಿದ್ದಾರೆ. ಸನ್ನಿವೇಶದ ಲಾಭ ಪಡೆಯಬಹುದು ಎಂಬ ಅದರ ತರ್ಕವನ್ನೇ ಜನತೆ ಪುರಸ್ಕರಿಸಿಲ್ಲ. ಹಾಗಾಗಿ ಐದು ವರ್ಷಗಳ ಕಾಲ ಸುಸ್ಥಿರ, ದೃಢ ಆಡಳಿತ ನೀಡಲು ಒಂದು ಪಕ್ಷಕ್ಕೇ ಬಹುಮತ ನೀಡಿ ಶಕ್ತಿಯನ್ನೂ ತುಂಬಿದ್ದಾರೆ. ಇದು ಅಭಿನಂದನೀಯ.

ಕಳೆದ ಐದು ವರ್ಷಗಳ ಅವಧಿಯ ಉದ್ದಕ್ಕೂ ತಮ್ಮ ಬದುಕಿನ ಬವಣೆಗಳಲ್ಲಿ ಬೆಂದು, ಆಳುವವರ ನಿರ್ಲಕ್ಷತನಕ್ಕೆ ನೊಂದು, ಕೋವಿಡ್ ನಂತಹ ಸಂದರ್ಭಗಳಲ್ಲಿ ಅಪಾರ ಸಾವು ನೋವು, ನಷ್ಟ ಅನುಭವಿಸಿ, ಬದುಕಿನ ತಮ್ಮ ಹಕ್ಕಿಗಾಗಿ, ನಾಡಿನ ರಕ್ಷಣೆಗಾಗಿ, ಪ್ರಜಾಪ್ರಭುತ್ವದ ಉಳಿವಿಗಾಗಿ ದಮನ ದಬ್ಬಾಳಿಕೆಗಳ ಎದುರು ಪ್ರತಿರೋಧದ ಹೋರಾಟದ ಅಲೆಗಳನ್ನು ಎಬ್ಬಿಸಿದ ಕಾರ್ಮಿಕ, ರೈತ–ಕೂಲಿಕಾರ ಮುಂ. ದುಡಿಯುವ ವರ್ಗದ ಕೊಡುಗೆಯೂ ಅಪಾರ ಎನ್ನುವುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಜಾತಿ, ಮತಧರ್ಮಗಳ ಸಮೀಕರಣಗಳಲ್ಲಿ ಮರೆಯಬಾರದು. ಹಾಗೆಯೇ ದಲಿತ, ಆದಿವಾಸಿ, ಮಹಿಳೆ, ಮುಂತಾದ ಸಾಮಾಜಿಕ ಸ್ತರಗಳ ವಿಭಾಗಗಳು ಅಸಹಿಷ್ಣುತೆ, ವಿಭಿನ್ನ ಸ್ವರೂಪದ ಧಾಳಿಗಳಲ್ಲಿ ನಲುಗಿದ ಧಾರ್ಮಿಕ ಅಲ್ಪಸಂಖ್ಯಾತರ ಪಾತ್ರವೂ ಉಲ್ಲೇಖನೀಯ.

ಮೂರುವರೆ ದಶಕಗಳ ನಂತರ ಮತ್ತೇ ಕಾಂಗ್ರೆಸ್ ಪಕ್ಷಕ್ಕೆ ಇಷ್ಟು ಸಂಖ್ಯೆಯ ಶಾಸಕರನ್ನು ಆಯ್ಕೆ ಮಾಡಿರುವುದು. ಈ ಮೂಲಕ ಅಧಿಕಾರ ನಡೆಸಲಿರುವ ಕಾಂಗ್ರೆಸ್ ಪಕ್ಷದ ಮೇಲೆ ಹೆಚ್ಚಿನ ನಿರೀಕ್ಷೆ ಮತ್ತು ಅತ್ಯಂತ ಹೊಣೆಗಾರಿಕೆಯ ಭಾರವನ್ನು ಜನತೆ ಹೊರಿಸಿದ್ದಾರೆ ಎನ್ನುವುದನ್ನು ಮರೆಯಬಾರದು.

ಬಿಜೆಪಿಯ ನಾಯಕರೇನೋ ಜನಾದೇಶಕ್ಕೆ ಮನ್ನಣೆ ಕೊಡುವುದಾಗಿ ಈ ತಕ್ಷಣ ಹೇಳಿದ್ದಾರೆ. ಆದರೆ ಮತದಾನದ ಬಳಿಕ ಬಂದ ಸಮೀಕ್ಷೆಯಲ್ಲಿ ಬಹುಮತ ತಮಗೆ ಸಿಗಲಾರದು ಎನ್ನುವ ಮುನ್ಸೂಚನೆಗೆ

ಪುಟ 4 ಕ್ಕೆ



Karnataka Result Status			
Status Known For 224 out of 224 Constituencies			
Party	Won	Leading	Total
Bharatiya Janata Party	66	0	66
Independent	2	0	2
Indian National Congress	135	0	135
Janata Dal (Secular)	19	0	19
Kalyana Rajya Pragathi Paksha	1	0	1
Sarvodaya Karnataka Paksha	1	0	1
Total	224	0	224

ಚುನಾವಣೆ: ಕೆಲವು ತುಣುಕು ನೋಟದಲ್ಲಿ

ಬಸವನಗುಡಿ ಮತದಾನ ಕೇಂದ್ರದಲ್ಲಿ ಮತದಾನ ನಡೆಯುತ್ತಿದೆ. ಮತ ಹಾಕಲೆಂದು ಬಂದ ಇಳಿ ವಯಸ್ಸಿನ ಮಹಿಳೆ ಮತ ಪೆಟ್ಟಿಗೆಯ ಕಡೆಗೆ ಹೋಗುತ್ತಿಲ್ಲ. ಅಲ್ಲಿದ್ದ ಮತಕೇಂದ್ರದ ಮಹಿಳಾ ಅಧಿಕಾರಿಗಳಿಗೆ ದೂರು ನೀಡುತ್ತಾಳೆ ಆಕೆ. 'ಮೇಡಮ್, ನಾನು ಓಟು ಹಾಕಬೇಕು ಅಂತಾ ಬಂದಿದ್ದೀನಿ. ಆದರೆ ಯಾರೂ ನನಗೆ ದುಡ್ಡು ಕೊಟ್ಟಿಲ್ಲ. ಪಕ್ಕದ ಬೀದಿಯಲ್ಲಿ ಕೊಟ್ಟಿದ್ದಾರಂತೆ. ಆದರೆ ನನಗೆ ಯಾರೂ ಕೊಟ್ಟಿಲ್ಲ. ನೀವಾದರೂ ಕೊಡಿಸಿ. ಓಟು ಹಾಕ್ತೀನಿ'

ಈ ಮಾತು ಕೇಳಿ ಸ್ವಲ್ಪ ಚಕಿತರಾದ ಮಹಿಳಾ ಮತಗಟ್ಟೆ ಅಧಿಕಾರಿ 'ನೋಡಮ್ಮಾ, ಕಾಸು ತೊಗೊಂಡು ಓಟು ಹಾಕೋದು ಅಪರಾಧ. ನಿನಗೆ ಇಷ್ಟ ಬಂದವರಿಗೆ ಓಟು ಹಾಕು. ನಾವು ಎಲ್ಲಿಂದ ಕೊಡಿಸೋದು. ನೀವು ಓಟು ಹಾಕಿ ಹೋಗಿ'

ಆ ಮಹಿಳೆ ಒಪ್ಪುತ್ತಿಲ್ಲ.

ಏನೂ ಕೊಡದೇ ವೋಟು ಹಾಕೋದಾದ್ರು ಹೇಗೆ? ಎಲ್ಲರ ಮನೆಗಳಿಗೆ ವೋಟುಗಳನ್ನು ಎಣಿಸಿ ನೋಟು ಕೊಟ್ಟು ಹೋಗಿದ್ದಾರಂತೆ. ಅವರು ಬಂದಾಗ ಈಕೆ ಮನೆಯಲ್ಲಿ ಇರಲಿಲ್ಲವಂತೆ. ಅವರಿಗೆ ಕಾಸು ಕೊಟ್ಟಿದ್ದಾರೆ. ನಗೆ ಬರಬೇಕಾದ್ದು ಬರದೇ ತಾನೇಕೆ ಪುಕ್ಕಟೆ ಹಾಗೆ ಹಾಕಬೇಕು? ಎಂಬುದು ಆಕೆಯ ಪ್ರಶ್ನೆ!

ಕೊನೆಗೆ 'ಹೋಗಲಿ ಮೇಡಮ್, ನಾನು ಓಟು ಹಾಕ್ತೀನಿ, ನೀವಾದರೂ ನನಗೆ ಕಾಸು ಕೊಡಿ' ಎಂದು ದುಂಬಾಲು ಬೀಳುತ್ತಾಳೆ.

ದಾರಿ ಕಾಣದ ಅಧಿಕಾರಿ ಎಷ್ಟು ಹೇಳಿದರೂ ಕೇಳದ ಮಹಿಳೆಗೆ ಕೊನೆಗೆ 'ನೋಡಮ್ಮ, ನಮ್ಮ ಹತ್ರ ಊಟದ ಪಾಕೆಟ್ ಗಳಿವೆ. ನಮಗೆ ಊಟ ಮಾಡಲು ಕೊಟ್ಟಿರುವವು. ಹೆಚ್ಚಿಗೆ ಇವೆ. ಈ ಎರಡು ಪಾಕೆಟ್ ತೊಗೊಂಡು ಊಟ ಮಾಡು' ಎನ್ನುತ್ತಾರೆ.

ಓಟು ಹಾಕಿದ ಮಹಿಳೆ 'ನಾನು ಕೂಲಿ ಬಿಟ್ಟು ಬಂದಿದೀನಿ' ಅನ್ನುತ್ತಾ ಆ ಊಟದ ಪೊಟ್ಟಣಗಳನ್ನು ತೊಗೊಂಡು ಮನೆಯತ್ತ ಹೋಗುತ್ತಾಳೆ.

ಮತ ಅತ್ಯಮೂಲ್ಯ! ಮೌಲ್ಯವಿಲ್ಲದೇ ಕೊಡುವುದಾದರೂ ಹೇಗೆ?

'ನಾವು ನಿಮಗೆ ಏನಾದರೂ ಕೊಡಬೇಕೆಂದಿದ್ದರೆ, ನೀವು ನಮಗೆ ಏನಾದರೂ ಕೊಟ್ಟರೆ ಮಾತ್ರ' ಇದು ಇಂದು ಸಾರ್ವಜನಿಕವಾಗಿ ಚಾಲ್ತಿಯಲ್ಲಿರುವ ನೀತಿ ಸಂಹಿತೆಯ ರೀತಿ.

* * *

ಈ ವಾರ

ಎಸ್.ವೈ. ಗುರುಶಾಂತ್

ಬೆಂಗಳೂರು ಬಹಳಷ್ಟು ಜನ ಬುದ್ಧಿವಂತರು ವಿದ್ಯಾವಂತರು ಇರುವ ಮಹಾನಗರ. ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕೆಂದರೆ ಅಥವಾ ಉತ್ತಮ ಜನಪ್ರತಿನಿಧಿ ಆಗಬೇಕು, ಆರಿಸಬೇಕೆಂದರೆ ವಿದ್ಯಾವಂತರು ಆಗಿರಬೇಕು ಎನ್ನುವ ವಾದ ಹೊಸದೇನಲ್ಲ. ಇನ್ನೂ ಕೆಲವರು ಮತ್ತಷ್ಟು ಮುಂದೆ ಹೋಗಿ ಓಟಿನ ಹಕ್ಕು, ಸ್ಪರ್ಧಿಸುವ ಅವಕಾಶ ಕೇವಲ ಓದು ಕಲಿತ 'ಎಜುಕೇಟೆಡ್' ಗೇ ಇರಬೇಕು, ಅಲ್ಲದವರಿಗೆ ಕೂಡದು' ಎಂದು ಅತಿರೇಕದಲ್ಲಿ ವಾದಿಸುವವರೂ ಇದ್ದಾರೆ!

ಇದ್ದುದ್ದರಲ್ಲಿ ಬೆಂಗಳೂರು ಹೆಚ್ಚು ವಿದ್ಯಾವಂತರು ಇರುವ ನಗರ ಎನ್ನುವುದರಲ್ಲಿ ಅನುಮಾನವಿಲ್ಲ. ಈ ಬೆಂಗಳೂರು ಮಹಾನಗರದಲ್ಲಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಒಟ್ಟಾರೆ ಮತದಾನ ಶೇ.54. ಕೆಲವೆಡೆ ಶೇ. 55.50, ಕೆಲವೆಡೆ 51, ಶೇ. 52.33, ಶೇ.49.5. ಬೊಮ್ಮನಹಳ್ಳಿ ಶೇ.47.36. ಅಂದರೆ ಸರಿ ಸುಮಾರು ಅರ್ಧದಷ್ಟು ಜನ ಮತದಾನಕ್ಕೆ ಬಂದಿಲ್ಲ, ಬದಲಾಗಿ ಪರೋಕ್ಷವಾಗಿ ತಿರಸ್ಕರಿಸಿದ್ದಾರೆ, ಮತದಾನದ ಮಹತ್ವವನ್ನು ನಿರ್ಲಕ್ಷಿಸಿದ್ದಾರೆ ಅಥವಾ ನಿರಾಕರಿಸಿದ್ದಾರೆ ಎಂದು ವ್ಯಾಖ್ಯಾನಿಸಬಹುದು. ಈಗ ಸ್ಪರ್ಧಿಸುವ ಯಾವ ಅಭ್ಯರ್ಥಿಗಳ ಬಗ್ಗೆ ಒಲವು ಇಲ್ಲವಾದಲ್ಲಿ 'ನೋಟಾ' ಚಲಾವಣೆಯ ಮೂಲಕವಾದರೂ ಮತದಾನದಲ್ಲಿ ಭಾಗವಹಿಸುವ ಅವಕಾಶ ಇದ್ದೆ ಇದೆ. ಅದನ್ನೂ ಜನ ಬಳಸಿದ್ದು ತೀರಾ ಕಡಿಮೆ. 2018ರ ಚುನಾವಣೆಯಲ್ಲಿ ಬಹುತೇಕ ಇದೇ ರೀತಿಯ ವಾತಾವರಣ ಇತ್ತು.

ಈ ಬಾರಿಯ ಮತದಾನದಲ್ಲಿ ಅತಿ ಹೆಚ್ಚು ನಿರಾಸಕ್ತಿ ತಳೆದವರಲ್ಲಿ ಯುವಜನರು ಪ್ರಮುಖ ಎಂಬುದು ಕಾಣುತ್ತದೆ. ಕಳೆದ ಚುನಾವಣೆಗಳಲ್ಲೂ ಇಂತಹದೇ ಟ್ರೆಂಡ್ ಕಂಡಿತ್ತು. ಚುನಾವಣಾ ಆಯೋಗ ಸಾರ್ವಜನಿಕ ಸ್ವಯಂ ಸೇವಾ ಸಂಸ್ಥೆಗಳು ಎಷ್ಟೆಲ್ಲಾ ಪ್ರಚಾರಿಸಿದರೂ ಅದರ ಪರಿಣಾಮದಲ್ಲಿ ಪ್ರಗತಿ ಅಷ್ಟಾಗಿ ಕಾಣಲಿಲ್ಲ. ಮುಖ್ಯವಾಗಿ ಮತದಾರರು ಮತಗಟ್ಟೆಗೆ ಬಂದು ಮತ ಚಲಾಯಿಸುವಂತೆ ಪ್ರೇರೇಪಿಸುವುದು ರಾಜಕೀಯ ಪಕ್ಷಗಳ ಮೇಲಿರುವ ಒಂದು ಬಹುಮುಖ್ಯ ಜವಾಬ್ದಾರಿ ಕೂಡ. ಏಕೆಂದರೆ ಈ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ನಮ್ಮ ರಾಜಕೀಯ ಪಕ್ಷಗಳಿಗೆ ಅತಿ ಮಹತ್ವದ ಪಾತ್ರವಿದೆ. ಜನತೆಯನ್ನು ಅವರ ಆಶೋತ್ತರಗಳನ್ನು ಪ್ರತಿನಿಧಿಸುವ ಸಂಸ್ಥೆಗಳು ರಾಜಕೀಯ ಪಕ್ಷಗಳು. ಆದರೆ ಮತದಾರರು ಯಾಕೆ ನಿರಾಸಕ್ತರಾಗುತ್ತಿದ್ದಾರೆ ಎನ್ನುವ ಕುರಿತು ಯಾವುದೇ ರಾಜಕೀಯ ಪಕ್ಷ ಅಷ್ಟಾಗಿ ಗಂಭೀರವಾಗಿ ಚಿಂತಿಸಿ ಅದಕ್ಕೊಂದು ಪರಿಹಾರ ರೂಪಿಸಲು ಮುಂದಾಗುತ್ತಿಲ್ಲ. ಕಡಿಮೆ ಮತದಾನವಾದಾಗ ಇದರಿಂದ ತಮಗೆಷ್ಟು ಲಾಭ ಎನ್ನುವುದನ್ನು ಮಾತ್ರವೇ ಬಹಳಷ್ಟು ಸಲ ಚರ್ಚೆಯಾಗುತ್ತದೆ ಹೊರತು ಮತದಾರರನ್ನು ಜಾಗೃತಗೊಳಿಸಿ ಕ್ರಿಯಶೀಲವಾಗಿ ಬಂದು ಮತ ಹಾಕಲು ಮಾಡಬೇಕಾದ ಕೆಲಸಗಳ ನಿರ್ದಿಷ್ಟತೆ ಕುರಿತು ಇಲ್ಲ. ಈಗಿನ ಚುನಾವಣೆ ಅದರಲ್ಲಿ ಇಡೀ ಜನರ ಭಾಗವಹಿಸುವಿಕೆ ನೋಡಿದರೆ ಈಗಿರುವ ಯಾವ ರಾಜಕೀಯ ಪಕ್ಷಗಳ ಮೇಲೂ ಪೂರ್ಣವಿಶ್ವಾಸ ಇಡದೆ ಇರುವ ಬಹುದೊಡ್ಡ ಮತದಾರರ ಸಂಖ್ಯೆ ಇದೆ. ಚುನಾವಣೆ ಬಳಿಕ ಹೊಸ ಸರ್ಕಾರ ರಚನೆಯಾದ ಬಳಿಕ 'ಆ ಕೆಲಸ ಆಗಲಿಲ್ಲ, ಈ ಕೆಲಸ ಆಗಲಿಲ್ಲ' ಎಂದು ದೂರುತ್ತಾ ಕೊಡುವ ಹಕ್ಕಾದರೂ ಇರುತ್ತದೆಯೇ ಯೋಚಿಸಬೇಕು.

ಹೊಸ ಸರ್ಕಾರ ಮತ್ತು ಜನತೆಯ ನಿರೀಕ್ಷೆಗಳು...... ಪುಟ 3 ರಿಂದ


ಪುಟ 3 ರಿಂದ

ಹೇಗಾದರೂ ಮಾಡಿ ತಾವೇ ಅಧಿಕಾರ ಹಿಡಿಯುವ ಅಕ್ರಮ, ಅನೈತಿಕ ಮಾರ್ಗಗಳ ಬಗ್ಗೆ ಮಾತನಾಡಿದ್ದು ಜನಾದೇಶವನ್ನು ತಿರಸ್ಕರಿಸುವ, ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದೆ. ಬಿಜೆಪಿಯನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರದೇ ಇದ್ದಲ್ಲಿ ಕೇಂದ್ರದ ಅನುದಾನಗಳನ್ನು ಕಡಿತ ಮಾಡುವ ಬೆದರಿಕೆಗಳನ್ನು . ಚುನಾವಣಾ ಪ್ರಚಾರದಲ್ಲೇ

ರಾಷ್ಟ್ರೀಯ ನಾಯಕರು ಒಡ್ಡಿದ್ದರು ಎನ್ನುವುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ತಮ್ಮದಲ್ಲದ ಇತರೆ ಪಕ್ಷಗಳನ್ನು ಸಾಂವಿಧಾನಿಕವಾಗಿ ಗೌರವಿಸಬೇಕು ಎನ್ನುವ ಕನಿಷ್ಠ ಪ್ರಜಾಸತಾತ್ಮಕ ನೀತಿಯನ್ನು ಹೊಂದಿರದ ಈ ನಾಯಕರಲ್ಲಿ ಸರ್ವಾಧಿಕಾರತ್ವ ಹೇರುವ ಮತ್ತು ದ್ವೇಷ ಖಾರುವ ಮನೋಭಾವವನ್ನೇ ತೋರಿಸುತ್ತದೆ. ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರಕ್ಕೆ ಭಾರತ ಸರ್ಕಾರದಿಂದ ಸಿಗಬೇಕಾದ ಸಹಕಾರ ಸಿಕ್ಕದೆ ಸೇಡನ್ನು ತೀರಿಸಿಕೊಳ್ಳುವ, ದಂಡಿಸುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ ಹೀಗಾಗಿ ಮುಂದಿನ ದಿನಗಳಲ್ಲೂ ಇದು ಕಠಿಣವಾದ ಆದರೆ ಎದುರಿಸಲೇಬೇಕಾದ ಒಂದು ಪ್ರಮುಖ ರಾಜಕೀಯ ಹೋರಾಟ ಎನ್ನುವುದು ಮುಖ್ಯ.

ಜನತೆ ನೀಡಿದ ಸ್ಪಷ್ಟ ತೀರ್ಪಿನಿಂದಾಗಿ ಕರ್ನಾಟಕವನ್ನು ದೆಹಲಿಯಿಂದಲೇ ಆಳಬೇಕೆನ್ನುವ ಮೋದಿ ಮತ್ತು ಅಮಿತ್ ಶಾ ರವರ ಕನಸು ಭಗ್ನವಾಗಿದೆ. ತಾವು ಬಯಸಿದ್ದನ್ನೆಲ್ಲಾ ಮಾಡುವ ಸರ್ವ ಶಕ್ತರು ಎನ್ನುವ ದುರಂಹಕಾರಕ್ಕೂ ಪೆಟ್ಟು ಬಿದ್ದಿದೆ. ಅಭಿವೃದ್ಧಿ ಮತ್ತು ರಾಷ್ಟ್ರದ ಪ್ರಗತಿಯ ಹೆಸರಿನಲ್ಲಿ ಒಕ್ಕೂಟದ ವ್ಯವಸ್ಥೆಯನ್ನು, ರಾಜ್ಯಗಳ ಅಭಿವೃದ್ಧಿಯ ಹಕ್ಕುಗಳನ್ನು ನಿರ್ನಾಮ ಮಾಡಿ ಸರ್ವಾಧಿಕಾರತ್ವ ಸ್ಥಾಪಿಸುವ ಮೋ–ಶಾ ಹಾಗೂ ಕಾರ್ಪೋರೇಟ್ ಗಳ ಬಯಕೆಗೆ ಮತದಾರರು ತಡೆಯೊಡ್ಡಿದ್ದಾರೆ. ಒಕ್ಕೂಟ ಸರ್ಕಾರ ವಿಶೇಷವಾಗಿ ಬಿಜೆಪಿ ಪಕ್ಷ ರಾಜ್ಯದ ಅಸ್ಮಿತತೆ ಮತ್ತು ವೈವಿಧ್ಯತೆಗಳನ್ನು ಈಗಾಲಾದರೂ ಮನ್ನಿಸುತ್ತದೆಯೇ ಎನ್ನುವ ಪ್ರಶ್ನೆಗೆ ಅದರ ಉತ್ತರವೇನು? ಅದರ ದೃಷ್ಟಿಕೋನ ಮತ್ತು ಕಾರ್ಯ ಲಹರಿಯನ್ನು ಗಮನಿಸಿದಾಗ ರಾಜ್ಯದ ಹಕ್ಕು ಅಸ್ತಿತ್ವಕ್ಕೆ ಅಪಾಯ ತಪ್ಪಿದೆ ಎಂದು ಅನಿಸುವುದಿಲ್ಲ. ಹೊಸ ತಂತ್ರ ಕುತಂತ್ರಗಳ ಮೂಲಕ ಜನಾದೇಶಕ್ಕೆ ವಿರುದ್ಧವಾಗಿ ಬಿಜೆಪಿ ಕಾರ್ಯ ಎಸಗುವ ಅಪಾಯಕಾರಿ ಸನ್ನಿವೇಶಗಳನ್ನು ನಿರ್ಲಕ್ಷಿಸುವಂತಿಲ್ಲ. ಈ ಬಗ್ಗೆ ಜನತೆ ಸದಾ ಎಚ್ಚರ ವಹಿಸುವುದು ಅತ್ಯಗತ್ಯವಾಗಿದೆ.

ಜನತೆಯ ಕೇಳಿಕೆಗೆ ಸೂಕ್ತವಾದ ಪರಿಹಾರವನ್ನು ಒದಗಿಸುವುದು ಹೊಸ ಸರ್ಕಾರದ ಮೇಲಿರುವ ಜವಾಬ್ದಾರಿ. ಈಗಾಗಲೇ ಶಿಕ್ಷಣ, ಸಮಾಜ ಮತ್ತು ಸಂಸ್ಕೃತಿಯನ್ನು ಒಳಗೊಂಡು ವಿವಿಧ ರಂಗಗಳಲ್ಲಿ ಹಬ್ಬಿಸಲಾಗಿರುವ ಕೋಮುವಾದದ ವಿಷ ವನ್ನು ಹೊರ ತೆಗೆದು ವಿಷ ಮುಕ್ತವನ್ನಾಗಿಸುವ ಮಹತ್ವದ ಕರ್ತವ್ಯವನ್ನು ಈ ಸರ್ಕಾರ ನಿರ್ವಹಿಸಬೇಕಿದೆ. ಈ ಸರ್ಕಾರ ಎಲ್ಲಾ ವಿಭಾಗಗಳ ಜನತೆಯೊಂದಿಗೆ ಪ್ರಜಾಸತ್ತಾತ್ಮಕವಾಗಿ ಸಮಾಲೋಚಿಸಿ ಸಮಸ್ಯೆಗಳ ಇತ್ಯರ್ಥಕ್ಕೆ ಮುಂದಾಗ ಬೇಕಿದೆ. ಇದೇ ಹೊತ್ತಿನಲ್ಲಿ ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿಗಳು ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳ ಆಧಾರಿತ ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು ಈ ಸರ್ಕಾರದ ಮೂಲ ನೀತಿಗಳಲ್ಲಿ ಕೆಲವಾದರೂ ಬದಲಾವಣೆಗಳನ್ನ ತರಲು ಜನಾಂದೋಲನಗಳು ನಿರಂತರವಾಗಿ ಒತ್ತಡವನ್ನು ಹೇರಬೇಕು. ಜನ ವಿರೋಧಿ ನಡೆಗಳು ಬಂದಾಗ ಪ್ರತಿಭಟಿಸಬೇಕು. ಪ್ರಸಕ್ತ ಸನ್ನಿವೇಶದಲ್ಲಿ ಕೋಮುವಾದಿ ಬಿಜೆಪಿಯನ್ನು ಎದುರಿಸುತ್ತಲೇ, ನಡೆಯುವ ಜನತೆಯ ಆಂದೋಲನಗಳೇ ಜನಪರ ಪರ್ಯಾಯವನ್ನು ತರಬಲ್ಲವು.



ಸಿಪಿಐ(ಎಂ) ಗಳಿಸಿದ ಮತಗಳು–2023

ಕ್ರ.ಸಂ.	ಕ್ಷೇತ್ರ	ಸಿಪಿಐ(ಎಂ)	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಎಎಪಿ
01	ಬಾಗೇಪಲ್ಲಿ	19,621 (11.32%)	82,128 (47.37%)	62,949 (36.31%)	––	1454 (0.84%)
02	ಕೆಜಿಎಫ್	1008 (0.68%)	81569 (55.1%)	31,102 (21.01%)	1360 (0.92%)	278 (0.19%)
03	ಕೆ.ಆರ್. ಪುರಂ	1220 (0.45%)	1,15,624 (42.91%)	1,39,925 (51.93%)	1975 (0.73%)	2319 (0.86%)
04	ಗುಲ್ಬರ್ಗ (ಗ್ರಾಮೀಣ)	822 (0.51%)	71839 (44.31%)	84466 (52.1%)	––	630 (0.39%)
ಕೆಜಿಎಫ್ – ಆರ್‌ಪಿಐ – 29,795 – (20.12%)						

‘ದ್ವಿರಾಷ್ಟ್ರ’ ಸಿದ್ಧಾಂತದ ನೆಲೆ....... ಪುಟ 2 ರಿಂದ

ಭಾವಿಸಿದ್ದಾರೆ ಮತ್ತು ಮತ್ತೆಲ್ಲಾ ತಾಂತ್ರಿಕ ಅಂಶಗಳ ಹೊರತಾಗಿಯೂ ಅದು ನಿಜವಾದ ಹಾಗೂ ಬಹಳ ಮುಖ್ಯವಾದ ಪರೀಕ್ಷೆಯಾಗುತ್ತದೆ.”

ಭಾರತೀಯನಾಗುವ ಹಕ್ಕನ್ನು ಸಾಧಿಸಲು ತಾನೇ ಸೂಚಿಸಿದ್ದ ಈ ಎಲ್ಲಾ ನಿಯಮಗಳನ್ನು ಸಿಸ್ಟರ್ ನಿವೇದಿತಾ ಪಾಲಿಸಿದ್ದಾಗ್ಯೂ, ಅವರು ಹಿಂದೂವನ್ನು ಮದುವೆಯಾಗಿಲ್ಲದ ಕಾರಣ ಹಿಂದೂವೆಂದು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸಾವರ್ಕರ್ ಯಾವುದೇ ಹಿಂಜರಿಕೆಯಿಲ್ಲದೇ ಘೋಷಿಸುತ್ತಾರೆ. ಸ್ವಾರಸ್ಯಕರ ಸಂಗತಿಯೆಂದರೆ, ಹಿಂದೂ ಮತ್ತು ಭಾರತೀಯ ಎಂದು ಸಮರ್ಥಿಸಿಕೊಳ್ಳಲು ಅಗತ್ಯವಾಗಿ ಪಾಲಿಸಬೇಕಾದ ಷರತ್ತುಗಳ ಪಟ್ಟಿಯಲ್ಲಿ ಇದು ಹೊಸ ಸೇರ್ಪಡೆಯಾಗಿತ್ತು.

“ನಮ್ಮ ಬಹುಪಾಲು ಜನರು ನಿಜವಾಗಿಯೂ ಬಳಸುವ ಪದಗಳ ಅರ್ಥದಲ್ಲಿ ಹಿಂದುತ್ವದ ಅತ್ಯಗತ್ಯ ಅಂಶಗಳನ್ನು ನಾವು ನಿರ್ಧರಿಸಬೇಕಾಗಿದೆ ಎಂಬುದನ್ನು ನಾವು ಮರೆಯಬಾರದು. ಆದ್ದರಿಂದ ಪ್ರಾಮಾಣಿಕವಾಗಿದ್ದು ನಮ್ಮ ನೆಲವನ್ನು ತಮ್ಮ ದೇಶವೆಂದು ಸ್ವೀಕರಿಸಿದರೆ ಮತ್ತು ಹಿಂದೂವನ್ನು ಮದುವೆಯಾಗಿ ನಮ್ಮ ಭೂಮಿಯನ್ನು ತಮ್ಮ ಪಿತೃಭೂಮಿಯೆಂದು ಸ್ವೀಕರಿಸಿದರೆ ಮತ್ತು ನಮ್ಮ ಸಂಸ್ಕೃತಿಯನ್ನು ಅಳವಡಿಸಿಕೊಂಡು ನಮ್ಮ ಭೂಮಿಯನ್ನು ಪುಣ್ಯಭೂಮಿಯೆಂದು ಪೂಜಿಸಿದರೆ ಹಾಗೆ ಹಿಂದುತ್ವಕ್ಕೆ ಮತಾಂತರವಾಗುವ ಯಾವುದೇ ಹಿಂದೂಯೇತರ ವಂಶದವರನ್ನು ಹಿಂದೂವೆಂದು ಪರಿಗಣಿಸಬಹುದು. ಅಂಥವರಿಂದ ಹುಟ್ಟಿದ ಮಕ್ಕಳನ್ನು ಉಳಿದೆಲ್ಲಾ ಸಮವಾಗಿದ್ದರೆ ಅವರನ್ನು ನಿಶ್ಚಿತವಾಗಿಯೂ ಹಿಂದೂಗಳೆಂದು ಹೇಳಬಹುದು. ಅದಕ್ಕಿಂತ ಮುಂದೆ ಹೋಗಲು ನಮಗೆ ಅನುಮತಿಯಿಲ್ಲ.”

ಸೋಜಿಗದ ಸಂಗತಿಯೆಂದರೆ, ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರಿಗೆ ಸಿಗದಂತಹ ಸ್ವಾತಂತ್ರ್ಯ ಅಥವಾ ರಿಯಾಯತಿ ಸಿಖ್ಖರಿಗೆ ದೊರೆತಿತ್ತು. ಹಿಂದುತ್ವಕ್ಕೆ ಸಿಖ್ಖರ ನಿಷ್ಠೆಯನ್ನು ಹೀಗೆ ತೀರ್ಮಾನಿಸಲಾಯಿತು:

“ಯಾವುದೇ ಮತಧರ್ಮಶಾಸ್ತ್ರದ ಪರೀಕ್ಷೆಗಳ ಮೂಲಕ ಸನಾತನಧರ್ಮದ ಯಾವುದೇ ವಿಚಾರಗಳನ್ನು ಅಥವಾ ಎಲ್ಲಾ ವಿಚಾರಗಳನ್ನು ಮೂಢನಂಬಿಕೆಗಳೆಂದು ಮತ್ತು ವೇದಗಳನ್ನು ದೈವದತ್ತ ಜ್ಞಾನವೆಂದು ಸ್ವೀಕರಿಸಲು ಕೂಡ ಸಿಖ್ಖರು ಇಷ್ಟಪಡದಿದ್ದರೆ ಅವುಗಳನ್ನು ತಿರಸ್ಕರಿಸಬಹುದು. ಆ ಮೂಲಕ ಅವರು ಸನಾತನಿಗಳಾಗಿ ಉಳಿಯದಿರಬಹುದು, ಆದರೆ ಹಿಂದೂಗಳಾಗಿಯೇ ಇರುತ್ತಾರೆ. ನಮ್ಮ ಹಿಂದುತ್ವ ನಿರ್ವಚನೆಯ ಅರ್ಥದಲ್ಲಿ ಅವರು ಹಿಂದೂಗಳಾಗಿಯೇ ಇರುತ್ತಾರೆ, ಬೇರಾವುದೇ ಧಾರ್ಮಿಕ ಅರ್ಥದಲ್ಲಿ ಅಲ್ಲ.”

ಸಿಖ್ಖರ ವಿಷಯದಲ್ಲಿ ಸಾವರ್ಕರ್ ಬಹಳ ಉದಾರತೆಯನ್ನು ಪ್ರದರ್ಶಿಸಿದ್ದಾರೆ, ಎಷ್ಟರಮಟ್ಟಿಗೆ ಎಂದರೆ “ಸಿಖ್ಖರನ್ನು ಧಾರ್ಮಿಕವಾಗಿ ಸಿಖ್ಖರೆಂದೇ ವರ್ಗೀಕರಿಸಲಿ; ಜನಾಂಗೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಹಿಂದೂಗಳಾಗಿಯೇ ಇರಲಿ” ಎಂಬ ರಿಯಾಯಿತಿಯನ್ನೂ ನೀಡುತ್ತಾರೆ. ಆದರೆ ಜನಾಂಗೀಯವಾಗಿ, ರಾಷ್ಟ್ರೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಸಿಖ್ಖರು, ಜೈನರು ಹಾಗೂ ಬೌದ್ಧರು ಪ್ರಾಚೀನ ಕಾಲದಿಂದಲೂ ಹಿಂದೂಗಳೆಂದೇ ಕರೆಯಲಪಟ್ಟಿರುವ ಕಾರಣ ಹಿಂದೂರಾಷ್ಟ್ರದ ಭಾಗವೇ ಆಗಿದ್ದಾರೆ ಎಂದು ತಮ್ಮ ಪುಸ್ತಕದಲ್ಲಿ ಪದೇ ಪದೇ ಹೇಳಲು ಸಾವರ್ಕರ್ ಮರೆತಿಲ್ಲ.

ಹಿಂದೂಗಳು ಮಾತ್ರವೇ ಭಾರತದ ರಾಷ್ಟ್ರೀಯತೆಯಲ್ಲಿ ಸೇರಿರುತ್ತಾರೆ

ಸಾವರ್ಕರ್ ಅವರ ಹಿಂದುತ್ವದ ಪ್ರಕಾರ, “ಭಾರತದ ಮೇಲಿನ ಏಕಮಾತ್ರ ವಾರಸುದಾರಿಕೆಯನ್ನು ಹಿಂದೂಗಳು ಮಾತ್ರವೇ ಕೇಳಬಹುದು. ಹಿಂದೂಗಳ ಭೂತ, ವರ್ತಮಾನ ಹಾಗೂ ಭವಿಷ್ಯ ಕಾಲಗಳು ಮಾತ್ರವೇ ಪಿತೃಭೂಮಿಯಾಗಿ ಪುಣ್ಯಭೂಮಿಯಾಗಿ ಹಿಂದೂಸ್ತಾನದ ಮಣ್ಣಿನೊಂದಿಗೆ ಬಹಳ ನಿಕಟ ಸಂಬಂಧ ಹೊಂದಿದೆ, ಭಾರತೀಯ ಪ್ರಭುತ್ವದ ಬುನಾದಿ, ಮೂಲಾಧಾರಗಳನ್ನು ಮತ್ತು ಮೀಸಲು ಶಕ್ತಿಗಳು ಅವರೇ ಆಗಿದ್ದಾರೆ.”

ಹಿಂದೂವಾದ, ಹಿಂದುತ್ವ ಹಾಗೂ ಭಾರತೀಯ ರಾಷ್ಟ್ರೀಯತೆಗಳು ಒಂದಕ್ಕೊಂದು ಬೇರ್ಪಡಿಸಲಾಗದ್ದು ಮತ್ತು ಪರಸ್ಪರ ಉಪಸಿದ್ಧಾಂತಗಳಾಗಿ ಕೆಲಸ ಮಾಡುತ್ತವೆ ಎಂದು ಕಾಣುವಂತಹ ಸನ್ನಿವೇಶಕ್ಕೆ ಸಾವರ್ಕರ್ ಅವರ ತರ್ಕವು ಒಯ್ಯುತ್ತದೆ.. ಅವರ ಪ್ರಕಾರ:

“ಹಿಂದುತ್ವದ ನಿಜವಾದ ಅತ್ಯಗತ್ಯ ಅಂಶಗಳು ರಾಷ್ಟ್ರೀಯತೆಯ ಆದರ್ಶಪ್ರಾಯ ಅತ್ಯಗತ್ಯ ಅಂಶಗಳಾಗುತ್ತವೆ ಕೂಡ. ನಾವು ಮಾಡಿದರೆ, ನಾವು ಈ ಹಿಂದುತ್ವದ ತಳಪಾಯವನ್ನು ಕಟ್ಟಲು ಸಾಧ್ಯವಾದರೆ, ನಮ್ಮ ಅವಕಾಶಗಳನ್ನು ಬಳಸಿಕೊಳ್ಳಲು ಸಮರ್ಥರಾದರೆ, ಜಗತ್ತಿನ ಬೇರೆ ಯಾರೂ ಕನಸು ಕಾಣಲೂ ಸಾಧ್ಯವಾಗದಂತಹ ಉನ್ನತ ಭವಿಷ್ಯವನ್ನು – ನಮ್ಮ ಭೂತಕಾಲಕ್ಕಿಂತಲೂ ಉತ್ತಮವಾದ ಭವಿಷ್ಯವನ್ನು – ರೂಪಿಸಬಹುದು.”

ಹಿಂದುತ್ವವನ್ನು ಭೌಗೋಳಿಕ ಪದಗಳಾದ ಇಂಡಿಯನ್ ಅಥವಾ ಭಾರತೀಯ ಅಥವಾ ‘ಹಿಂದೀ’ (ಅರಬ್ಬರು ಮತ್ತು ಇರಾನಿಯನ್ನರು ಬಳಸುವಂತೆ) ಪದಗಳೆಂದು ತಪ್ಪಾಗಿ ಗ್ರಹಿಸಬಾರದು ಎಂದು ಸಾವರ್ಕರ್ ಅವರು ವಿಪುಲವಾಗಿ ಸ್ಪಷ್ಟಪಡಿಸಿದ್ದಾರೆ. ಅವರು ಹೇಳುತ್ತಾರೆ:

“ಹಿಂದೂ ಪದದ ಮೂಲ–ಅರ್ಥ, ಅದರ ಸೋದರ ಪದ ಹಿಂದೀಯಂತೆ, ಇಂಡಿಯನ್ ಎಂದಷ್ಟೇ ಅರ್ಥ ನೀಡಬಹುದು, ಆದಾಗ್ಯೂ ಒಂದು ಪದದ ಬಳಕೆಯನ್ನು ಅತಿಯಾಗಿ ಎಳೆದಾಡಿದರೆ ಅದು ತೀವ್ರವಾದ ಅಪಾರ್ಥಕ್ಕೆ ಎಡೆಮಾಡಿಕೊಡಬಹುದೇನೋ ಎಂಬ ಭಯವಿದೆ; ಮಹಮ್ಮದೀಯನೊಬ್ಬನು ಭಾರತೀಯ ನಿವಾಸಿಯಾದ ಎಂದ ಮಾತ್ರಕ್ಕೆ ಅವನನ್ನು ಹಿಂದೂ ಎಂದು ಕರೆದಂತಾಗುತ್ತದೆ.”

ಒಟ್ಟಾರೆಯಾಗಿ, ಸಾವರ್ಕರ್ ಅವರ ಹಿಂದುತ್ವ ತರ್ಕದ ಪ್ರಕಾರ ‘ಹಿಂದೂ ಎಂಬ ಪದವು ಭಾರತೀಯ ಅಥವಾ ಹಿಂದೀ ಎಂಬುದಕ್ಕೆ ಪರ್ಯಾಯ ಪದವಾಗಲು ಸಾಧ್ಯವಿಲ್ಲ ಮತ್ತು ಭಾರತೀಯ (ಇಂಡಿಯನ್) ಎಂಬ ಪರಿಭಾಷೆಯೊಂದಿಗೆ ತಪ್ಪಾಗಿ ಗ್ರಹಿಸಬಾರದು.’ 23 ಹಿಂದೂಗಳು ಭಾರತ ದೇಶದ ಪೌರರು ಮಾತ್ರವಲ್ಲ ಅವರು ಸಮಾನ ತಾಯ್ನಾಡಿನ, ಸಮಾನ ರಕ್ತದ ಹಾಗೂ ಮತದ (ಧರ್ಮದ) ಬಾಂಧವ್ಯವನ್ನು ಕೂಡ ಹಂಚಿಕೊಳ್ಳುತ್ತಾರೆ. ಸಾವರ್ಕರ್ ಅವರ ಹಿಂದುತ್ವವು ಭಾರತೀಯ ರಾಷ್ಟ್ರತ್ವದಲ್ಲಿ ಮುಸ್ಲಿಮರು ಮತ್ತು ಕ್ರಿಶ್ಚಿಯನರನ್ನು ಪ್ರತ್ಯೇಕಿಸುವ ಮೂಲಕ ಈ ಧಾರ್ಮಿಕ ಸಮುದಾಯದವರು ಪ್ರತ್ಯೇಕ ದೇಶಗಳೆಂದು ಪರಿಗಣಿತರಾಗುತ್ತಾರೆ ಎಂದು ಒಪ್ಪಿಕೊಂಡಂತಾಗುತ್ತದೆ ಎಂಬ ಪ್ರಮುಖವಾದ ಅಂಶವನ್ನು ನಾವು ಗಮನಿಸಬೇಕು. ಇದೇ ಅವರು 1937 ರಲ್ಲಿ ಅಹಮದಾಬಾದಿನಲ್ಲಿ ನಡೆದ ಹಿಂದೂ ಮಹಾಸಭಾದ 19 ನೇ ಅಧಿವೇಶನದಲ್ಲಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ “ಭಾರತದಲ್ಲಿ ಎರಡು ಪರಸ್ಪರ ವೈಷಮ್ಯದ ದೇಶಗಳು ಅಕ್ಕಪಕ್ಕದಲ್ಲಿಯೇ ಜೀವಿಸಿವೆ” ಎಂದು ಹೇಳಿದಾಗ ಒಪ್ಪಿಕೊಂಡ ಸಂಗತಿ.

(ಮುಂದುವರೆಯುವುದು)

ಪ್ರಸಕ್ತ ವಿಧಾನಸಭೆ ಚುನಾವಣೆ ಹಿಂದಿನ ಎಲ್ಲಾ ಚುನಾವಣೆಗಳಿಗಿಂತಲೂ ದುಬಾರಿ ಎನಿಸಿದ್ದು, ಸಾಮಾನ್ಯರು ಮುಂದಿನ ದಿನಗಳಲ್ಲಿ ಸ್ಪರ್ಧೆ ಮಾಡುವುದನ್ನು ಊಹಿಸಲೂ ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಕ್ಷೇತ್ರಗಳಲ್ಲಿ ಒಂದೊಂದು ಮತಕ್ಕೆ ಐದರಿಂದ 10 ಸಾವಿರ ರೂಪಾಯಿವರೆಗೂ ಬಂಡವಾಳ ಹೂಡಿಕೆ ಮಾಡಿರುವುದು ಕಂಡು ಬಂದಿದೆ. ಕೆಲವು ಕ್ಷೇತ್ರಗಳಲ್ಲಿ ಗೆಲ್ಲಲೇಬೇಕು ಎಂಬ ಹಠಕ್ಕೆ ಬಿದ್ದವರು, ಹಣ ತಂದು ಸುರಿದಿದ್ದಾರೆ.

ಚುನಾವಣೆ ಎಂಬುದು ಉದ್ಯಮವಾಯಿತೇ? ಮತ ಎಂಬುದು ಮಾರಾಟದ ವಸ್ತುವಾಯಿತೇ?

ಮುಕ್ತಮಾರುಕಟ್ಟೆ ವ್ಯವಸ್ಥೆಯಲ್ಲಿ ಚುನಾವಣೆಯನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಟ್ಟರೇ? ಮತ ಎಂಬುದನ್ನು ಒಂದು ಮಾರಾಟದ ವಸ್ತುವನ್ನಾಗಿ ಮಾಡಿದರೆ? ಹೆಚ್ಚು ಮತಗಳನ್ನು ಖರೀದಿಸುವಷ್ಟು ಹಣಬಲ ಇರುವವರು ಶಾಸಕಾಂಗಗಳಲ್ಲಿ ಸ್ಥಾನ ಗಳಿಸುವಂತಾಗಿದೆಯೇ? ಚುನಾವಣೆ ಎಂಬುದನ್ನು ಬಂಡವಾಳ ಹೂಡಿ ಲಾಭ ಗಳಿಸುವ ಉದ್ಯಮವನ್ನಾಗಿ ಮಾಡಿದರೇ? ಬಹುತೇಕ ಮತದಾರರು ಇದಕ್ಕೆ ಅಸ್ತು ಎಂದುಬಿಟ್ಟರೇ?

ಈ ಸಲದ ರಾಜ್ಯ ವಿಧಾನಸಭಾ ಚುನಾವಣೆ ನೋಡಿದಾಗ ಇಂತಹ ಹಲವು ಪ್ರಶ್ನೆಗಳು ಮೂಡುತ್ತವೆ. ಚುನಾವಣೆಯಲ್ಲಿ ಸ್ಪರ್ಧಿಸಿರುವ ರಾಜಕೀಯ ಪಕ್ಷಗಳು/ ಅಭ್ಯರ್ಥಿಗಳು ಹಣ ಕೊಟ್ಟರಷ್ಟೇ ಮತದಾನ ಮಾಡುವುದಾಗಿ ಹೇಳುವ ಮತದಾರರ ಸಂಖ್ಯೆ ಹಿಂದಿಗಿಂತ ಈ ಬಾರಿ ಹೆಚ್ಚಾಗಿದೆ. ಹೆಚ್ಚು ಹಣ ವೆಚ್ಚ ಮಾಡುವ ಸಾಮರ್ಥ್ಯ ಇರುವ ಅಭ್ಯರ್ಥಿಗಳು ಅಥವಾ ಪಕ್ಷಗಳಿಗೆ ಮಾತ್ರ ಚುನಾವಣೆ ಎಂಬತ್ತಾಗಿದೆ. ಹಣದ ಎದುರು ಸಿದ್ದಾಂತ, ನೀತಿ, ನಿಲುವುಗಳು, ಜನರ ಬದುಕಿನ ಪ್ರಶ್ನೆಗಳ ಮೇಲಿನ ವಿಷಯಗಳು, ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ವಿಷಯಗಳು ಮಂಕಾಗಿವೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಆತಂಕ ತರುವ ಬೆಳವಣಿಗೆಯಾಗಿದೆ.

ಪ್ರಸಕ್ತ ವಿಧಾನಸಭೆ ಚುನಾವಣೆ ಹಿಂದಿನ ಎಲ್ಲಾ ಚುನಾವಣೆಗಳಿಗಿಂತಲೂ ದುಬಾರಿ ಎನಿಸಿದ್ದು, ಸಾಮಾನ್ಯರು ಮುಂದಿನ ದಿನಗಳಲ್ಲಿ ಸ್ಪರ್ಧೆ ಮಾಡುವುದನ್ನು ಊಹಿಸಲೂ ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಕ್ಷೇತ್ರಗಳಲ್ಲಿ ಒಂದೊಂದು ಮತಕ್ಕೆ ಐದರಿಂದ 10 ಸಾವಿರ ರೂಪಾಯಿವರೆಗೂ ಬಂಡವಾಳ ಹೂಡಿಕೆ ಮಾಡಿರುವುದು ಕಂಡು ಬಂದಿದೆ. ಕೆಲವು ಕ್ಷೇತ್ರಗಳಲ್ಲಿ ಗೆಲ್ಲಲೇಬೇಕು ಎಂಬ ಹಠಕ್ಕೆ ಬಿದ್ದವರು, ಹಣ ತಂದು ಸುರಿದಿದ್ದಾರೆ. ಅಭ್ಯರ್ಥಿಗಳ ನಡುವೆ ತೀವ್ರ ಪೈಪೋಟಿ ಇಲ್ಲದ ಕ್ಷೇತ್ರಗಳಲ್ಲಿ ಮತ್ತು ಮೀಸಲು ಕ್ಷೇತ್ರಗಳಲ್ಲಿ ಹಣದ ಹಂಚಿಕೆ ಕಡಿಮೆ ಎಂದು ಹೇಳಲಾಗುತ್ತಿದೆ.

ಒಂದು ವರ್ಷದಿಂದಲೇ ಶುರುವಾದ ಮತಬೇಟೆ

ತಾವೇ ಅಭ್ಯರ್ಥಿ ಎಂದು ಹಿರಿಯ ನಾಯಕರಿಂದ ಮುನ್ಸೂಚನೆ ಪಡೆದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು ಕಳೆದ ಒಂದು ವರ್ಷದಿಂದಲೇ ಬಂಡವಾಳ ಹೂಡಿಕೆ ಆರಂಭಿಸಿದ್ದರು. ಹಾಲಿ ಶಾಸಕರು ಬಹುತೇಕ ತಾವೇ ಅಭ್ಯರ್ಥಿಯಾಗುವ ನಿರೀಕ್ಷೆಯೊಂದಿಗೆ ಮತದಾರರಿಗೆ ಲೆಕ್ಕವಿಲ್ಲದಷ್ಟು ಊಡುಗೊರೆಗಳನ್ನು ನೀಡಿದ್ದರು. ಈ ಅವಧಿಯಲ್ಲಿ ಎಲ್ಇಡಿ ಟಿ.ವಿ, ಫ್ರಿಜ್ಡ್, ಮಿಕ್ಸರ್, ಓಲೆ, ಮೂಗುನತ್ತು, ಯುವ ನಾಯಕರಿಗೆ ಬೈಕ್, ಪ್ರಭಾವಿ ನಾಯಕರಿಗೆ ಕಾರುಗಳು ಸೇರಿದಂತೆ ಹಲವಾರು ಊಡುಗೊರೆಗಳನ್ನು ಯತೇಚ್ಚವಾಗಿ ಹಂಚಲಾಗಿದೆ. ಮಹಿಳಾ ಮತದಾರರನ್ನೇ ಗುರಿಯಾಗಿಟ್ಟುಕೊಂಡು ಉಚಿತವಾಗಿ ಧಾರ್ಮಿಕ ಕ್ಷೇತ್ರಗಳಿಗೆ ಪ್ರವಾಸ ಏರ್ಪಡಿಸಿದರು. ಗ್ರಾಮಗಳಲ್ಲಿ, ನಗರ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ, ಉತ್ಸವಗಳಿಗೆ ದಾರಾಳವಾಗಿ ಹಣ ಕೊಟ್ಟು ಮತದಾರರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದರು. ಚುನಾವಣೆ ಮುಗಿಯುವ ಹೊತ್ತಿಗೆ ಒಬ್ಬೊಬ್ಬ ಅಭ್ಯರ್ಥಿಯೂ ಸರಾಸರಿ ಕ್ಷೇತ್ರದಲ್ಲಿ 50 ರಿಂದ 100 ಕೋಟಿ ರೂಪಾಯಿವರೆಗೂ ಮತದಾರರಿಗೆ ಹಂಚಿಕೆ ಮಾಡಿರುವ ಆರೋಪಗಳಿವೆ.

ಈ ಕುರುಡು ಕಾಂಚಾಣದ ರುದ್ರ ನರ್ತನಕ್ಕೆ ರಿಯಲ್ ಎಸ್ಟೇಟ್, ಗಣಿ ಮಾಫಿಯಾ, ಶಿಕ್ಷಣ, ಆಸ್ಪತ್ರೆ ಮಾಲೀಕರ ಲಾಬಿ ಇತ್ಯಾದಿಗಳು ಕಾರಣ. ಜೊತೆಗೆ ಈ ಭ್ರಷ್ಟ ಹಣದ ದೊಡ್ಡ ಪಾಲು ಬಹುರಾಷ್ಟ್ರೀಯ ಕಂಪನಿಗಳು ಮತ್ತು ದೊಡ್ಡ ಬಂಡವಾಳಗಾರರು ಆಳುವ ಪಕ್ಷಗಳಿಗೆ ಕೊಡುವ ಅಪಾರ ದೇಣಿಗೆಯಿಂದ ಬಂದಿದೆ. ರಾಜ್ಯದ 200ಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಗಣಿ, ರಿಯಲ್ ಎಸ್ಟೇಟ್, ಆಸ್ಪತ್ರೆ, ಶಿಕ್ಷಣ ಮಾಫಿಯಾದ ಆರ್ಭಟ ಜೋರಾಗಿದೆ. ಇದು ಖಾಸಗೀಕರಣ, ಜಾಗತೀಕರಣದ ದೊಡ್ಡ ಕೊಡುಗೆಯಾಗಿದೆ. ನಗರಾಸ್ತಿ ಮಿತಿ ಮತ್ತು ಬಾಡಿಗೆ ಕಾನೂನು ಸಡಲಿಸಿ ರಿಯಲ್ ಎಸ್ಟೇಟ್ ಮತ್ತು ಬೃಹತ್ ಬಿಲ್ಡರ್ಸ್ ಗೆ ಲಾಭ ಮಾಡಿಕೊಟ್ಟಿದ್ದು, ಗಣಿ ಮತ್ತು ಅರಣ್ಯ ಕಾನೂನು ಸಡಲಿಸಿ ಗಣಿ ಮಾಫಿಯಾಗೆ ಅನುಕೂಲ ಮಾಡಿಕೊಟ್ಟಿದ್ದು ಇವೆಲ್ಲವೂ ಚುನಾವಣೆಯಲ್ಲಿ ಕುರುಡು ಕಾಂಚಾಣ ಕುಣಿಯುವಂತೆ ಮಾಡಿವೆ.

ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಇರುವವರು, ಉದ್ಯಮಿಗಳು, ಕ್ಯಾಪಿಟೇಷನ್ ಮಾಫೀಯಾ, ಲಿಕ್ಕರ್ ದಂಧೆಯಲ್ಲಿ ಇರುವವರು, ಭೂಗತ ಲೋಕದ ನಂಟಿರುವವರು ರಾಜಕಾರಣಕ್ಕೆ ಬಂದ ಬಳಿಕ, ಹಣ ಹಾಕಿ ಹಣ ಗಳಿಸುವ ಉದ್ಯಮವಾಗಿ ರಾಜಕಾರಣ ಬದಲಾಗಿದೆ. ಅದಕ್ಕಾಗಿ ಚುನಾವಣೆಯಲ್ಲಿ ಬಂಡವಾಳ ಹೂಡಿಕೆ ಮಾಡಿ, ಐದು ವರ್ಷಗಳ ಅವಧಿಯಲ್ಲಿ ಹಾಕಿದ ಬಂಡವಾಳದ ಹಲವು ಪಟ್ಟು ಲಾಭ ಗಳಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ತಾವು ಗಳಿಸಿದ ಸಂಪತ್ತನ್ನು ರಕ್ಷಣೆ



ಮಾಡಿಕೊಳ್ಳಲು ಮತ್ತು ಮತ್ತಷ್ಟು ಗಳಿಸಿಕೊಳ್ಳಲು ಬಂದರೆ, ಮತ್ತೆ ಕೆಲವರು ತಾವು ಮಾಡಿದ ಅಕ್ರಮಗಳು, ಕ್ರಿಮಿನಲ್ ಅಪರಾಧಗಳಿಗೆ ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳಲು ರಾಜಕಾರಣಕ್ಕೆ ಬಂದು ಬಂಡವಾಳ ಹಾಕುತ್ತಿದ್ದಾರೆ. ಒಂದಷ್ಟು ಮಂದಿ ಪ್ರತಿಷ್ಠೆಗಾಗಿ ಚುನಾವಣೆಗೆ ನಿಲ್ಲುತ್ತಿದ್ದಾರೆ. ರಾಜಕೀಯ ಪಕ್ಷಗಳೂ ಗೆಲ್ಲುವ ಕುದುರೆ ಯಾವುದೆಂದು ನಿರ್ಧರಿಸಿ ಟಿಕೆಟ್ ಕೊಡುತ್ತವೆಯೇ ವಿನಃ, ಅಭ್ಯರ್ಥಿಗಳ ಪೂರ್ವಾಪರಗಳ ಬಗ್ಗೆ, ಅವರ ಸಾಮಾಜಿಕ ಸೇವೆಗಳ ಬಗ್ಗೆ ಚಿಂತಿಸುವುದಿಲ್ಲ. ಹೀಗಾಗಿಯೇ ಕ್ರಿಮಿನಲ್ ಹಿನ್ನಲೆಯುಳ್ಳ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

ಮತದಾರರೂ ಭ್ರಷ್ಟಾಚಾರದ ಪಾಲುದಾರರಾದರೇ?

ಈ ಪ್ರಶ್ನೆಗೆ ಸಿಗುವ ಉತ್ತರ ತುಂಬಾ ಆತಂಕಕಾರಿಯಾಗಿದೆ. ಬಹಳಷ್ಟು ಮತದಾರರು ಹಣದ ಹಿಂದೆ ಬಿದ್ದಿರುವುದು ಕಂಡುಬಂದಿದೆ. 'ಜನಶಕ್ತಿ' ಸಂಪರ್ಕಿಸಿದ ಬಹಳಷ್ಟು ಮತದಾರರು ಅಭ್ಯರ್ಥಿಗಳಿಂದ, ರಾಜಕೀಯ ಪಕ್ಷಗಳಿಂದ ಹಣ ಪಡೆದುದಾಗಿ ಹೇಳಿದ್ದಾರೆ. ಹಣ ಕೊಡುವ ಎಲ್ಲಾ ಅಭ್ಯರ್ಥಿಗಳಿಂದಲೂ ಹಣ ಪಡೆದೆವು ಎಂದು ಹೇಳಿದವರೇ ಹೆಚ್ಚು. ಹಣ ಕೊಡದಿದ್ದರೆ ಮತಗಟ್ಟೆ ಕಡೆ ಹೋಗುವುದಿಲ್ಲ ಎಂದು ಹೇಳಿದವರೂ ಇದ್ದಾರೆ. ಜಗಳ ಮಾಡಿ ಹಣ ಪಡೆದವರೂ ಇದ್ದಾರೆ. ಆದರೆ, ಮತ ಯಾರಿಗೆ ಎಂಬ ಗುಟ್ಟನ್ನು ಬಹಳಷ್ಟು ಮತದಾರರು ಬಿಟ್ಟು ಕೊಡಲಿಲ್ಲ.

ಇನ್ನೂ ಭರವಸೆ ಇದೆ

ಮತಕ್ಕಾಗಿ ಎಲ್ಲರೂ ಹಣ ಪಡೆಯುತ್ತಾರೆ ಎಂದು ಹೇಳುವುದು ಸರಿಯಲ್ಲ. ಆಭ್ಯರ್ಥಿಗಳಿಂದ ಹಣ ಪಡೆಯಲು ನಿರಾಕರಿಸುವ ಬಹಳಷ್ಟು ಮತದಾರರೂ ಇದ್ದಾರೆ. ಸಿದ್ದಾಂತಗಳನ್ನು, ರಾಜಕೀಯ ಪಕ್ಷಗಳ ನೀತಿ ನಿಲುವುಗಳನ್ನು ಆಧರಿಸಿ ಮತ ಹಾಕುವ ಮತದಾರರೂ ಇದ್ದಾರೆ. ಆದರೆ, ಹಣ ಮತ್ತು ವಸ್ತುಗಳನ್ನು ಪಡೆಯುವ ಮತದಾರರ ಸಂಖ್ಯೆ ಚುನಾವಣೆಯಿಂದ ಚುನಾವಣೆಗೆ ಹೆಚ್ಚುತ್ತಲೇ ಇದೆ. ಚುನಾವಣೆ ಎಂದರೆ ಅದು ಮತಗಳನ್ನು ಮಾರುವ ಸಂತೆ ಅಂದುಕೊಂಡವರೂ ಇದ್ದಾರೆ. ಅದಕ್ಕಾಗಿ ಕಾಯುವವರೂ ಇದ್ದಾರೆ. ಮತಕ್ಕಾಗಿ ಹಣ ಬಯಸುವವರೆಲ್ಲಾ ಬಡವರು, ನಿರ್ಗತಿಕರೇನಲ್ಲ. ಹಣವಂತರು, ಲಕ್ಷಾಂತರ ರೂ.ಗಳ ಮಾಸಿಕ ಆದಾಯ ಇರುವವರು, ಸರ್ಕಾರಿ ನೌಕರರ ಕುಟುಂಬದವರು, ಇಷ್ಟೇ ಏಕೆ ಐಟಿ ಬಿಟಿ ಕಂಪನಿಗಳಲ್ಲಿ ಆರಂಕಿ ವೇತನ ಪಡೆಯುವವರೂ ಸೇರಿದ್ದಾರೆ!!

ಮತದಾರರು ಹಣ ಕೊಡುವ ಎಲ್ಲರಿಂದಲೂ ಹಣ ಪಡೆದು, ತಮಗೆ ಇಷ್ಟವಾದ ಪಕ್ಷ/ ಅಭ್ಯರ್ಥಿಗಳಿಗೆ ಮತ ನೀಡುವ ತಮ್ಮ ಹಕ್ಕನ್ನು ಕಾಯ್ದುಕೊಂಡಿದ್ದಾರೆ ಎಂಬುದೇ ಒಂದಷ್ಟು ಸಮಾಧಾನ ತರುವ ವಿಷಯ. ಚುನಾವಣಾ ಪಲಿತಾಂಶವೂ ಇದನ್ನು ಸ್ಪಷ್ಟಪಡಿಸಿದೆ. ಬಿಜೆಪಿ ಪಕ್ಷದಿಂದ ಹಣ ಪಡೆದೂ ಅದರ ಮೇಲಿನ ಆಕ್ರೋಶವನ್ನು ಮತದಾನದ ಮೂಲಕ ತೋರಿಸಿಕೊಟ್ಟಿದ್ದಾರೆ ಎಂಬುದನ್ನು ಕಾಣಬಹುದಾಗಿದೆ. ಬಿಜೆಪಿ ಆಡಳಿತದ ಜನವಿರೋಧಿ ನೀತಿಗಳಿಂದ ಜನರು ಬೇಸತ್ತಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮೋದಿ ಮಾತುಗಳು, ಅವರ ಭಾಷಣಗಳು, ರೋಡ್ ಶೋ ಎಲ್ಲವನ್ನು ಜನರು ಒಂದು ನಾಟಕದಂತೆ ನೋಡಿದ್ದಾರೆ ವಿನಃ, ಅವರನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದು ಈ ಪಲಿತಾಂಶದಿಂದ ಸ್ಪಷ್ಟವಾಗುತ್ತದೆ.

ಪರ್ಯಾಯ ಆರ್ಥಿಕ ಮತ್ತು ಸಾಮಾಜಿಕ ನೀತಿಗಳುಳ್ಳ ರಾಜಕೀಯ ಶಕ್ತಿಗಳು ಜನರಲ್ಲಿ ಭರವಸೆ ಮೂಡಿಸುವಂತಾದರೆ, ಜನತೆ ತಮ್ಮ ಮತವನ್ನು ಹಣಕ್ಕೆ ಮಾರಿಕೊಳ್ಳದೆ, ಸಿದ್ದಾಂತ, ನೀತಿ ನಿಲುವುಗಳನ್ನು ಬೆಂಬಲಿಸುತ್ತಾರೆ ಎಂಬ ಭರವಸೆ ಇದೆ. ಜನರು ತಾವೇ ಹಣ ಕೊಟ್ಟು, ಚುನಾವಣಾ ವೆಚ್ಚ ಭರಿಸಿ, ಮತ ನೀಡಿ, ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿ ಶಾಸನ ಸಭೆಗಳಿಗೆ ಕಳುಹಿಸುವ ಕಾಲವೊಂದಿತ್ತು. ಆ ರೀತಿ ಆರಿಸಿ ಬಂದವರೂ ಜನರ ಮತ್ತು ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂಧಿಸಿ ಕೆಲಸ ಮಾಡುತ್ತಿದ್ದರು. ಬಂಡವಾಳಶಾಹಿ ವ್ಯವಸ್ಥೆಯ ಇತಿಮಿತಿಯೊಳಗೆ ಶಾಸನ ಸಭೆಗಳಲ್ಲಿ ಜನಪರವಾದ ಯೋಜನೆಗಳನ್ನು ರೂಪಿಸುತ್ತಿದ್ದರು. ಜನಪರವಾದ ಕಾಯ್ದೆಗಳನ್ನು ತರಲು ಶ್ರಮಿಸುತ್ತಿದ್ದರು. ಅಂತಹ ಕಾಲ ಮತ್ತೆ ಬಂದೇ ಬರುತ್ತದೆ ಎಂಬ ಆಶಾಭಾವನೆ ಇದೆ.

ಮತದಾರರಿಗೆ ಆಮಿಷ ಒಡ್ಡುವ ಚುನಾವಣಾ ಅಕ್ರಮದಲ್ಲಿ ಕರ್ನಾಟಕ ಈ ಬಾರಿ ದಾಖಲೆ ಬರೆದಿದೆ. ಚುನಾವಣಾ ಆಯೋಗ ಅಗತ್ಯವಾದ ಗರಿಷ್ಟ ಕಾರ್ಯಾಚರಣೆ ನಡೆಸದಿದ್ದರೂ, ಚುನಾವಣೆ ಘೋಷಣೆಯಾದ ಮಾ. 29ರಿಂದ ಮೇ 9ರ ವರೆಗೆ ಅದು ವಶಪಡಿಸಿಕೊಂಡ ಒಟ್ಟು ಮೌಲ್ಯ 379.36 ಕೋಟಿ ರೂ. ಆಗಿದೆ. 182 ಕೆಜಿ ಚಿನ್ನ, 691 ಕೆಜಿ ಬೆಳ್ಳಿ ಸೇರಿ 98 ಕೋಟಿ ರೂಪಾಯಿ ಮೌಲ್ಯದ ಚಿನ್ನಾಭರಣ, ವಿವಿಧ ಉಡುಗೂರೆಗಳು ಸೇರಿ 24 ಕೋಟಿ ರೂಪಾಯಿ ಮೌಲ್ಯದ ವಸ್ತುಗಳನ್ನು ಜಪ್ತಿಮಾಡಿದ್ದಾರೆ. ಇದು ಹಿಂದಿನ ಚುನಾವಣೆಗೆ ಹೋಲಿಸಿದರೆ ದುಪ್ಪಟ್ಟಾಗಿದೆ. ಕಳೆದ ವಿಧಾನಸಭೆ ಚುನಾವಣೆಯ ಒಟ್ಟು ಚುನಾವಣಾ ಅಕ್ರಮ ಜಪ್ತಿ 185.74 ಕೋಟಿ ರೂ. ಆಗಿತ್ತು.

ಅರಣ್ಯ ಸಂರಕ್ಷಣಾ ಕಾಯಿದೆ ತಿದ್ದುಪಡಿ ಮಸೂದೆ; ಬಂಡವಾಳಶಾಹಿಗಳಿಗೆ ಅರಣ್ಯ ನೀಡಲು ಹೊರಟಿರುವ ಕೇಂದ್ರ ಸರ್ಕಾರ



ಆದಿವಾಸಿಗಳು ಅರಣ್ಯವನ್ನು ತಮ್ಮ ತಾಯಿನೆಲ ಎಂದು ನಂಬಿದವರು. ತಲತಲಾಂತರದಿಂದ ಅರಣ್ಯದಲ್ಲೇ ಬದುಕು ಕಂಡುಕೊಂಡವರು. ಬ್ರಿಟಿಷರ ಕಾಲದಿಂದಲೂ, ಸ್ವಾತಂತ್ರ್ಯದ ನಂತರವೂ ಕಾಡಿನಲ್ಲಿರುವ ಮರ ಗಿಡಗಳನ್ನು ಕಿತ್ತು, ಅರಣ್ಯ ಸಂಪತ್ತು, ಬೆಟ್ಟ ಗುಡ್ಡಗಳಲ್ಲಿರುವ ಖನಿಜ ಸಂಪತ್ತುಗಳನ್ನು ಲೂಟಿ ಮಾಡುವ ಅರಣ್ಯ ನೀತಿಗಳನ್ನು ಆಳುವವರು ಅನುಸರಿಸಿಕೊಂಡು ಬಂದಿದ್ದಾರೆ. ಇದರಿಂದಾಗಿ ಆದಿವಾಸಿಗಳು ಮತ್ತು ಆಡಳಿತಗಾರರ ನಡುವಿನ ಸಂಘರ್ಷ ಮುಂದುವರಿದಿದೆ.

ಪ್ರಧಾನಿ ಮೋದಿ ಅವರು ಕೇಂದ್ರದಲ್ಲಿ ಅಧಿಕಾರ ಸ್ವೀಕರಿಸಿದ ದಿನದಿಂದಲೂ ನೈಸರ್ಗಿಕ ಸಂಪನ್ಮೂಲಗಳನ್ನು ದೊಡ್ಡ ಬಂಡವಾಳಶಾಹಿಗಳಿಗೆ ಮತ್ತು ಬಹುರಾಷ್ಟ್ರೀಯ ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸುವಲ್ಲಿ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ಇದರ ಭಾಗವಾಗಿ ಮಾರ್ಚ್ 27 ರಂದು ಸಂಸತ್ತಿನಲ್ಲಿ "ಅರಣ್ಯ ಸಂರಕ್ಷಣಾ ಕಾಯಿದೆ, 1980" ಗೆ ಹಲವಾರು ತಿದ್ದುಪಡಿಗಳನ್ನು ತರಲು ಮುಂದಾಗಿದೆ. ಅರಣ್ಯವನ್ನು ಅರಣ್ಯೇತರ ಯೋಜನೆಗಳಿಗೆ ಬಳಸಬಾರದು ಎಂಬ ಉದ್ದೇಶದಿಂದ ಅರಣ್ಯ ಮೀಸಲು ಕಾಯಿದೆಯನ್ನು ತರಲಾಗಿದೆ. ಈ ಉದ್ದೇಶವನ್ನು ಸಂಪೂರ್ಣವಾಗಿ ನಾಶಮಾಡಲು ತಿದ್ದುಪಡಿಗಳನ್ನು ಪ್ರಸ್ತಾಪಿಸಿದ್ದರಿಂದ ಸಂಸತ್ತಿನಲ್ಲಿ ವಿರೋಧ ವ್ಯಕ್ತವಾಯಿತು. ತೀವ್ರ ವಿರೋಧ ವ್ಯಕ್ತವಾದ ಕಾರಣ, ಮಸೂದೆಯನ್ನು ಕಾನೂನಾಗದೆ ಸಂಸದೀಯ ಜಂಟಿ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿದೆ.

ಈ ತಿದ್ದುಪಡಿಗಳ ಕುರಿತು 15 ದಿನಗಳೊಳಗೆ ಅಭಿಪ್ರಾಯ ತಿಳಿಸಬಹುದು ಎಂದು ಮೇ 3 ರಂದು ಪತ್ರಿಕೆಯ ಜಾಹೀರಾತಿನ ಮೂಲಕ ಪ್ರಕಟಿಸಲಾಗಿದೆ. ಆದರೆ ಈ ಕಾಯ್ದೆಯನ್ನು ಹಿಂದಿ ಮತ್ತು ಇಂಗ್ಲಿಷ್ ನಲ್ಲಿ ಮಾತ್ರ ಪ್ರಕಟಿಸಲಾಗಿದೆ. ಈ ಎರಡು ಭಾಷೆ ತಿಳಿಯದ ಮತ್ತು ಓದು ಬರಹ ಬಾರದಿರುವ ಆದಿವಾಸಿಗಳು ತಮ್ಮ ಮೇಲೆ ಪರಿಣಾಮ ಬೀರುವ ಈ ತಿದ್ದುಪಡಿಯ ಬಗ್ಗೆ ತಿಳಿಯುವ ಸಾಧ್ಯತೆಯಿಲ್ಲ. ಹೀಗಿರುವಾಗ ಅವರು ಹೇಗೆ ತಮ್ಮ ಅಭಿಪ್ರಾಯ ತಿಳಿಸಲು ಸಾಧ್ಯ? ತಮಿಳುನಾಡಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಧಾನ ಪರಿಷತ್ ಸದಸ್ಯರಾದ ಸು. ವೆಂಕಟೇಶನ್ ಅವರು ಕೇಂದ್ರ ಸಚಿವರಿಗೆ ಪತ್ರವೊಂದನ್ನು ಬರೆದು, 8ನೇ ಶೆಡ್ಯೂಲ್‌ನಲ್ಲಿ ತಮಿಳು ಸೇರಿದಂತೆ ಕನಿಷ್ಠ 22 ಭಾಷೆಗಳಲ್ಲಿ ಕಾಯ್ದೆಯನ್ನು ಮುದ್ರಿಸಿ ಪ್ರಕಟಿಸಲು ಸರಕಾರ ಮುಂದಾಗಬೇಕು. ಮತ್ತು ಪ್ರತಿಕ್ರಿಯಿಸುವ ಅವಧಿಯನ್ನು ವಿಸ್ತರಿಸಬೇಕು ಎಂದು ಮನವಿ ಮಾಡಿದ್ದಾರೆ. ಆದರೆ ಜನರು ಮತ್ತು ಸಂಘ ಸಂಸ್ಥೆಗಳು ಕಳುಹಿಸುವ ಅಭಿಪ್ರಾಯಗಳನ್ನು ಒಕ್ಕೂಟ ಸರ್ಕಾರ ಗಣನೆಗೆ ತೆಗೆದುಕೊಳ್ಳುತ್ತದೆ ಎಂಬ ಭರವಸೆಯೇನೂ ಇಲ್ಲ.

ಇತರೆ ಭಾರತೀಯ ಭಾಷೆಗಳನ್ನು ಕಡೆಗಣಿಸಿ, ಹಿಂದಿ ಭಾಷೆಯಲ್ಲಿ ತಿದ್ದುಪಡಿ ಕಾಯ್ದೆಯನ್ನು ಪ್ರಕಟಿಸಿರುವ ಕ್ರಮ ಹಿಂದಿ ಭಾಷೆಯನ್ನು ಹೇರುವ ಉದ್ದೇಶದಿಂದ ಕೂಡಿದೆ. ಇದುವರೆಗೆ 'ಅರಣ್ಯ ಸಂರಕ್ಷಣಾ ಕಾಯಿದೆ 1980' ಎಂದು ಕರೆಯಲ್ಪಡುವ ಈ ಕಾಯಿದೆಯನ್ನು ಇನ್ನು ಮುಂದೆ ಹಿಂದಿ ಭಾಷೆಯ 'ವನ ಸಂರಕ್ಷಣ ಏವನ್ ಸಂವರ್ಧನ್' ಎಂದು ಕರೆಯಲಾಗುತ್ತದೆ. ಇದರರ್ಥ ಅರಣ್ಯ ಸಂರಕ್ಷಣೆ (ಉತ್ಪಾದನೆ) ಮತ್ತು ಅಭಿವೃದ್ಧಿ (ಉತ್ಪಾದನೆ) ಕಾಯಿದೆ. ಸಂರಕ್ಷಣೆಯನ್ನು ಬಿಟ್ಟು ಅಭಿವೃದ್ಧಿಯನ್ನು ಸೇರಿಸಿದರೆ, ಈ ತಿದ್ದುಪಡಿಯು ಅರಣ್ಯಗಳನ್ನು ವಾಣಿಜ್ಯ ಬಳಕೆಗಾಗಿ ಮಾಡಲಾಗಿದೆ ಎಂದು ತೋರುತ್ತದೆ.

ವಾಣಿಜ್ಯ ಉದ್ದೇಶಗಳಿಗಾಗಿ ಮತ್ತು ರಾಜ್ಯ ಸರ್ಕಾರದ ಹಕ್ಕು ಕಸಿದುಕೊಳ್ಳಲು

ಪ್ರಸ್ತಾವಿತ ತಿದ್ದುಪಡಿಗಳು ಸಂಪೂರ್ಣ ಅರಣ್ಯ ಸಂಬಂಧಿತ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸುತ್ತವೆ. ಇದರಿಂದ ಅರಣ್ಯದ ಮೇಲಿನ ರಾಜ್ಯ ಸರ್ಕಾರದ ಹಕ್ಕು ಕಸಿದುಕೊಂಡಂತಾಗುತ್ತದೆ. ಅರಣ್ಯ ಭೂಮಿಯನ್ನು ಸಂರಕ್ಷಣೆಗಾಗಿ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಗಾಗಿ ಪರಿವರ್ತಿಸುವುದು ರಾಷ್ಟ್ರಕ್ಕೆ ಮುಖ್ಯವಾಗಿದೆ ಎಂದು ಹೇಳುತ್ತದೆಯೇ ಹೊರತು ಶಬ್ದಕೋಶದಲ್ಲಿ ಯಾವುದೇ ವ್ಯಾಖ್ಯಾನವಿಲ್ಲ. ಇದನ್ನೇ ಕಾರಣವಾಗಿಟ್ಟುಕೊಂಡು ಕಾಡಿನಲ್ಲಿ ವಾಸಿಸುವ ಜನರನ್ನು ಅಲ್ಲಿಂದ ಹೊರಹಾಕಬಹುದು. ಕಾಡುಗಳು ನಾಶವಾಗಬಹುದು. ನಾಶವಾಗಿರುವ ಮರಗಳ ಬದಲಿಗೆ ಸರಕಾರ ನಿಗದಿಪಡಿಸಿದ ಇನ್ನೊಂದು ಸ್ಥಳದಲ್ಲಿ ಗಿಡಗಳನ್ನು ನೆಟ್ಟರೆ ಸಾಕು. ಅರಣ್ಯ ಮತ್ತು ಮರಗಳ ಕೃಷಿ ವಿಭಿನ್ನವಾಗಿದೆ. ಮರಗಳನ್ನು ನೆಡುವುದರಿಂದ ಅರಣ್ಯನಾಶವನ್ನು ಸರಿದೂಗಿಸಲು ಸಾಧ್ಯವಿಲ್ಲ. ಇದರಿಂದ ಪರಿಸರದ ಮೇಲೆ ತೀವ್ರ ಪರಿಣಾಮ ಬೀರಲಿದೆ. ಹವಾಮಾನ ಬದಲಾವಣೆಯು ಪರಿಸರಕ್ಕೆ ಬದಲಾಯಿಸಲಾಗದ ಹಾನಿಯನ್ನು ಉಂಟುಮಾಡುತ್ತದೆ. ತಿದ್ದುಪಡಿಯು ಅರಣ್ಯಗಳಲ್ಲಿ "ಪರಿಸರ ಪ್ರವಾಸೋದ್ಯಮ"ವನ್ನು ವಿಸ್ತರಿಸಲು ಮತ್ತು ಖಾಸಗಿ ವಲಯವನ್ನು ಒಳಗೊಳ್ಳುವ ಗುರಿಯನ್ನು ಹೊಂದಿದೆ.

ಇದಲ್ಲದೆ, 2020 ರಲ್ಲಿ, ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯು ದೇಶದಲ್ಲಿ 160 ವನ್ಯಜೀವಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಖಾಸಗಿ ವಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು. ಇದರಲ್ಲಿ ತೊಡಗಿರುವ ವ್ಯಕ್ತಿಗಳು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಹೆಸರಿನಲ್ಲಿ ಅರಣ್ಯ ನಾಶಪಡಿಸಿ, ರೆಸಾರ್ಟ್‌ಗಳನ್ನು ನಿರ್ಮಿಸುವುದರಿಂದ ಅರಣ್ಯ ಜೀವಿಗಳು ಮತ್ತು ಅನಾದಿ ಕಾಲದಿಂದಲೂ ವಾಸಿಸುತ್ತಿರುವ ಜನರ ಮೇಲೆ ಪರಿಣಾಮ ಬೀರುತ್ತದೆ. ಅರಣ್ಯ ನಾಶದಿಂದ ಕಾಡು ಪ್ರಾಣಿಗಳ ಮಾನವ ಸಂಘರ್ಷ ಹೆಚ್ಚುತ್ತದೆ. ಇದರಿಂದ ಜೀವಹಾನಿ ಮತ್ತು ಕೃಷಿ ಬೆಳೆ ನಾಶವಾಗುತ್ತದೆ. ಮಳೆ ಪ್ರಮಾಣ ಕಡಿಮೆಯಾಗಲಿದೆ. ಮಳೆಗಾಲದಲ್ಲಿ ಮಣ್ಣಿನ ಸವಕಳಿಯಿಂದ ಹೆಚ್ಚಿನ ಹಾನಿಯಾಗುತ್ತದೆ.

ಅರಣ್ಯವು ಚರ್ಮ ಸುಕ್ಕುಗಟ್ಟಿದಂತಾಗುತ್ತದೆ

ಈ ತಿದ್ದುಪಡಿಯು ವಿಸ್ತಾರವಾದ ಪ್ರದೇಶದಲ್ಲಿ ಮತ್ತು ಭೂಮಿಯ ಆಳದಲ್ಲಿ ಕೊರೆಯುವ ತಂತ್ರಜ್ಞಾನವನ್ನು ಅನುಮತಿಸುವುದನ್ನು ಸೂಚ್ಯವಾಗಿ ಸೂಚಿಸುತ್ತದೆ. ಅರಣ್ಯ ಪ್ರದೇಶಗಳಲ್ಲಿ ನೈಸರ್ಗಿಕ ಅನಿಲ ಮತ್ತು ತೈಲ ಸಂಪನ್ಮೂಲಗಳನ್ನು ಹೊರತೆಗೆಯಲು ಸಾವಿರಾರು ಅಡಿ ಆಳದ ಗಣಿಗಾರಿಕೆ ಮಾಡಲಾಗುತ್ತದೆ. ಇದಲ್ಲದೆ, 'ಅರಣ್ಯ'ದ ವ್ಯಾಖ್ಯಾನದೊಳಗೆ ಬರದ ಪ್ರದೇಶಗಳಿಂದಲೂ ಗಣಿಗಾರಿಕೆ ಮಾಡಲಾಗುತ್ತದೆ. ಅಂದರೆ, ಭವಿಷ್ಯದ ದಿನಗಳಲ್ಲಿ ಅರಣ್ಯವು "ಚರ್ಮವು ಸುಕ್ಕುಗಳಿಂದ ತುಂಬಿರುತ್ತದೆ". ಭೂ ಒಡಲಿನ ಎಲ್ಲಾ ಸಂಪನ್ಮೂಲಗಳನ್ನು ಹೊರತೆಗೆದರೆ ಮೇಲ್ಮೈಯಲ್ಲಿ ಉಳಿಯುವ ಅರಣ್ಯ ಹೇಗೆ ಸುರಕ್ಷಿತವಾಗಿರಲು ಹೇಗೆ ಸಾಧ್ಯ? ಅರಣ್ಯದಲ್ಲಿನ ಖನಿಜಗಳು ಮತ್ತು ಇತರ ಸಂಪನ್ಮೂಲಗಳ ಪರಿಶೋಧನೆ ಮತ್ತು ಭೂಕಂಪನ ಪರೀಕ್ಷೆಯನ್ನು ನಡೆಸುವುದಕ್ಕೆ ಅನುಮತಿಸಲು ಈ ತಿದ್ದುಪಡಿ ಅವಕಾಶ ಕೊಡುತ್ತದೆ. ಇದರ ಸಂಪೂರ್ಣ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸುವ ಮೂಲಕ, ಅರಣ್ಯ ಹಕ್ಕುಗಳ ಕಾಯಿದೆ– 2006 ಮತ್ತು ಪಂಚಾಯತ್ ರಾಜ್ ಕಾಯ್ದೆಯು ಗ್ರಾಮ ಸಭೆಗೆ ನೀಡಲಾದ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ. ಈ ಮಸೂದೆ ಜಾರಿಯಾದರೆ, ಇನ್ನು ಮುಂದೆ ಕೇಂದ್ರ ಸರ್ಕಾರವು ಗ್ರಾಮ ಸಭೆಯ ಅನುಮೋದನೆ ಇಲ್ಲದೆ ಯಾವುದೇ ಯೋಜನೆಗೆ ಅನುಮತಿ ನೀಡಬಹುದು.

ಅರಣ್ಯ ಹಕ್ಕು ಕಾಯಿದೆ 2006ರ ಪ್ರಕಾರ ಅರಣ್ಯ ಜನರಿಗೆ ಸೇರಿದ್ದು. ವಾಸಕ್ಕಾಗಿ ಅವರ ಸಾಂಪ್ರದಾಯಿಕ ಜಮೀನುಗಳಿಗೆ ಮತ್ತು ಸಮುದಾಯದ ಬಳಕೆಯಲ್ಲಿರುವ ಭೂಮಿಗೆ ಅವರಿಗೆ ಹಕ್ಕುಗಳನ್ನು ನೀಡಬೇಕು. ಈಗ ತಂದಿರುವ ತಿದ್ದುಪಡಿಗಳಿಂದ ಅರಣ್ಯ ಹಕ್ಕು ಕಾಯಿದೆ ದುರ್ಬಲಗೊಂಡಿದೆ. ಕಾನೂನು ಜಾರಿಗೆ ಬಂದು 16 ವರ್ಷ ಕಳೆದರೂ ಈ ಕಾನೂನು ಅನುಷ್ಠಾನಕ್ಕೆ ಆಡಳಿತಗಾರರು ಗಮನ ಹರಿಸುತ್ತಿಲ್ಲ ಎಂಬುದು ಅಂಕಿಅಂಶಗಳಿಂದ ತಿಳಿದುಬಂದಿದೆ.

2022ರ ನವಂಬರ್ 30 ರವರೆಗೆ ದೇಶಾದ್ಯಂತ 42,97,245 ಪ್ರತ್ಯೇಕ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಇವುಗಳಲ್ಲಿ 21,46,782 ಅರ್ಜಿದಾರರಿಗೆ ಹಕ್ಕುಗಳನ್ನು ನೀಡಲಾಗಿದೆ. 17,29,872 ಅರ್ಜಿಗಳನ್ನು ವಜಾಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಬಿಜೆಪಿ ಸರಕಾರ ಅರಣ್ಯ ಹಕ್ಕು ಕಾಯಿದೆಯನ್ನು ನಿರ್ಜೀವಗೊಳಿಸಲು ಈ ತಿದ್ದುಪಡಿ ತರಲು ಮುಂದಾಗಿದೆ.

ಮಿತಿಯಿಲ್ಲದೆ ಬದಲಾಯಿಸಬಹುದು...

2070ರ ವೇಳೆಗೆ ಶೂನ್ಯ ಹೊರಸೂಸುವಿಕೆ ಗುರಿಯನ್ನು ಸಾಧಿಸಲು ಭಾರತ ಬದ್ಧವಾಗಿರುವುದರಿಂದ, ಹಸಿರು ಪ್ರದೇಶವನ್ನು ಹೆಚ್ಚಿಸಲು ಈ ತಿದ್ದುಪಡಿಯನ್ನು ತರಲಾಗುತ್ತಿದೆ ಎಂದು ಮಸೂದೆ ಹೇಳುತ್ತದೆ. ಇದೊಂದು ದೊಡ್ಡ ಹಗರಣ. ಏಕೆಂದರೆ 2021 ರ ಗ್ಲಾಸ್ ಗೊವ್‌ನಲ್ಲಿ ನಡೆದ ಹವಾಮಾನ ಶೃಂಗಸಭೆಯಲ್ಲಿ, 141 ದೇಶಗಳು 2030 ರ ವೇಳೆಗೆ ಅರಣ್ಯನಾಶವನ್ನು ನಿಲ್ಲಿಸುವ ಒಪ್ಪಂದಕ್ಕೆ ಸಹಿ ಮಾಡಿ ಜಾಗತಿಕ ಸರಾಸರಿ ತಾಪಮಾನ ಏರಿಕೆಯನ್ನು 2.5 ಡಿಗ್ರಿ ಸೆಲ್ಸಿಯಸ್‌ಗೆ ಸೀಮಿತಗೊಳಿಸಿದವು. ಈ ಒಪ್ಪಂದವನ್ನು ಒಪ್ಪಿಕೊಳ್ಳಲು ಭಾರತ ಸರ್ಕಾರ ನಿರಾಕರಿಸಿದೆ ಎಂಬುದನ್ನು ಗಮನಿಸಬೇಕು. 12, ಡಿಸೆಂಬರ್ 1996 ಕ್ಕಿಂತ ಮೊದಲು ಅರಣ್ಯೇತರ ಯೋಜನೆಗಳಿಗಾಗಿ ಭೂ ಬಳಕೆಯನ್ನು ಬದಲಾಯಿಸಿದ ಪ್ರದೇಶಗಳನ್ನು ಕಾಯಿದೆಯು ಒಳಗೊಂಡಿರುವುದಿಲ್ಲ ಎಂದು ತಿದ್ದುಪಡಿಯಲ್ಲಿ ಸೇರಿಸಲಾಗಿದೆ. ಹೀಗಾಗಿ ಅರಣ್ಯ ಭೂಮಿ ಬಳಕೆ ಯಾವುದೇ ಒಂದು ಮಿತಿಯಿಲ್ಲದೆ ಬದಲಾಗಲಿದೆ.

ಮುಂದಿನ ಪೀಳಿಗೆಗಳು ಕ್ಷಮಿಸುವುದಿಲ್ಲ

ಈ ತಿದ್ದುಪಡಿಗಳ ಉದ್ದೇಶವು ರಾಷ್ಟ್ರೀಯ ಭದ್ರತೆ, ಅಭಿವೃದ್ಧಿ, ಪರಿಸರ ಸಂರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಯಂತಹ ಅಲಂಕಾರಿಕ ಪದಗಳಿಂದ ತುಂಬಿದೆ. ಆದರೆ ನಿಜವಾದ ಉದ್ದೇಶವೆಂದರೆ ಅರಣ್ಯ, ಬೆಟ್ಟಗಳು ಮತ್ತು ಅದರ ನೈಸರ್ಗಿಕ ಸಂಪನ್ಮೂಲಗಳು, ಖನಿಜ ಸಂಪನ್ಮೂಲಗಳನ್ನು ಖಾಸಗಿ ಬಂಡವಾಳಶಾಹಿಗಳಿಗೆ ತೆರೆದಿಡುವುದಾಗಿದೆ. ಅದನ್ನು ತಡೆಯುವ ಕಾನೂನು ರಕ್ಷಣೆಗಳನ್ನು ಕಿತ್ತುಹಾಕುವುದಾಗಿದೆ. ಇದನ್ನು ಎಂದಿಗೂ ಒಪ್ಪಿಕೊಳ್ಳಲಾಗದು. ದೊಡ್ಡ ಬಂಡವಾಳಶಾಹಿಗಳ ದುರಾಸೆಗೆ ಅಧಿಕಾರದಲ್ಲಿರುವವರು ಪುರಾತನ ಕಾಡುಗಳನ್ನು ನಾಶ ಮಾಡಲು ಅವಕಾಶ ನೀಡಿದರೆ ಮುಂದಿನ ಪೀಳಿಗೆಗಳು ನಮ್ಮನ್ನು ಕ್ಷಮಿಸುವುದಿಲ್ಲ. ರಾಜ್ಯ ಸರ್ಕಾರದ ಅಧಿಕಾರವನ್ನು ಕಸಿದುಕೊಳ್ಳುವ ಕೇಂದ್ರ ಸರ್ಕಾರದ ತಿದ್ದುಪಡಿ ವಿರುದ್ಧ ರಾಜ್ಯ ಸರ್ಕಾರಗಳು ಮಧ್ಯಪ್ರವೇಶಿಸಬೇಕು. ಆದ್ದರಿಂದ ಈ ತಿದ್ದುಪಡಿಯ ವಿರುದ್ಧ ಎಲ್ಲರೂ ತೀವ್ರ ವಿರೋಧದ ಧ್ವನಿಯನ್ನು ದಾಖಲಿಸಬೇಕು.

ಕೃಪೆ: ತೀಕ್ಕದೀರ್, ಅನು: ಸಿಚಿ

ಬಿಜೆಪಿಯನ್ನು ಮುಂದಿನ ವಿಧಾನ ಸಭೆಯಲ್ಲಿ ಅಧಿಕಾರಕ್ಕೆ ಬರದಂತೆ ನಿರ್ಣಾಯಕವಾಗಿ ಸೋಲಿಸಿದ ರಾಜ್ಯದ ಮತದಾರರಿಗೆ ಸಿಪಿಐ(ಎಂ) ಅಭಿನಂದನೆ

ಸಾರ್ವತ್ರಿಕ ವಿಧಾನ ಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತಿತರೆ ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಕರೆಯ ಮೇರೆಗೆ ರಾಜ್ಯದ ಮತದಾರರು ಕೋಮುವಾದಿ ಹಾಗೂ ಜನ ವಿರೋಧಿ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿ ಸೌಹಾರ್ದತೆಯನ್ನು ಎತ್ತಿ ಹಿಡಿದ ಮತದಾರರನ್ನು ಸಿಪಿಐ(ಎಂ) ಅಭಿನಂದಿಸುತ್ತದೆ.

ಹಣ ಮತ್ತು ಜಾತಿ ಹಾಗೂ ಕೋಮು ರಾಜಕಾರಣದ ತೀವ್ರ ಪ್ರಜಾಪ್ರಭುತ್ವ ವಿರೋಧಿ ಭರಾಟೆಯ ನಡುವೆಯು ಸಿಪಿಐ(ಎಂ) ಪಕ್ಷದ ಮೇಲೆ ವಿಶ್ವಾಸವಿಟ್ಟು ಬಾಗೇಪಲ್ಲಿ ಮುಂತಾದೆಡೆ ಉತ್ತಮ ಮತದಾನ ಮಾಡಿ ಬೆಂಬಲಿಸಿದ್ದಕ್ಕೆ ಮತದಾರರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಿಪಿಐ(ಎಂ) ರಾಜ್ಯ ಸಮಿತಿ ಸಲ್ಲಿಸಿದೆ.

ಮುಂಬರುವ ಹೊಸ ಸರಕಾರದ ಜನಪರ ನೀತಿಗಳನ್ನು ಸಿಪಿಐಎಂ ಬೆಂಬಲಿಸುತ್ತದೆ. ಅದೇ ರೀತಿ, ಜನ ವಿರೋಧಿ ಹಳಸಲು ಜಾಗತೀಕರಣದ ನೀತಿಗಳನ್ನು ಜಾರಿಗೆ ತರುವ ಯಾವುದೇ ಪ್ರಯತ್ನಗಳನ್ನು ಸಿಪಿಐಎಂ ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆ ಸೇರಿ ಪ್ರತಿರೋಧಿಸಿ ಎಂದಿನಂತೆ ಜನಪರವಾಗಿ ನಿಲ್ಲುತ್ತದೆ ಮತ್ತು ರಾಜ್ಯದ ಸೌಹಾರ್ದತೆಗಾಗಿ ಕಾರ್ಯ ನಿರ್ವಹಿಸುತ್ತದೆ.

ರೈತ – ಕಾರ್ಮಿಕ ವಿರೋದಿ ತಿದ್ದುಪಡಿ ಕಾಯ್ದೆಗಳ ಹಾಗೂ ನೂತನ ಶಿಕ್ಷಣ ನೀತಿ ವಾಪಾಸಾತಿಗೆ ಸಿಪಿಐಎಂ ಆಗ್ರಹ

ಮುಂಬರುವ ಸರಕಾರ ತನ್ನ ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿಯೇ ರೈತ ವಿರೋಧಿ ಹಾಗೂ ಕಾರ್ಪೊರೇಟ್ ಕಂಪನಿ ಕೃಷಿ ಪರವಾದ ಮೂರು ಕೃಷಿ ಕಾಯ್ದೆಗಳಾದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2020, ಎಪಿಎಂಸಿ ತಿದ್ದುಪಡಿ ಕಾಯ್ದೆ–2020 ಮತ್ತು ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ–2020 ಹಾಗೂ ಕಾರ್ಮಿಕ ಕೆಲಸದ ವಿಸ್ತರಿಸಿ ಲೂಟಿಗೊಳಪಡಿಸುವ ಕಾರ್ಮಿಕ ವಿರೋದಿ ಕಾರ್ಖಾನೆಗಳ ತಿದ್ದುಪಡಿ ಕಾಯ್ದೆ–2023 ಮಾತ್ರವಲ್ಲಾ, ನೂತನ ಶಿಕ್ಷಣ ನೀತಿಯ ಜಾರಿಯನ್ನು ವಾಪಾಸು ಪಡೆದಿರುವುದಾಗಿ ಪ್ರಕಟಿಸುವಂತೆ ಸಿಪಿಐ(ಎಂ) ಒತ್ತಾಯಿಸಿದೆ.

180 ರ ಶ್ರೇಯಾಂಕದ ಪಟ್ಟಿಯಲ್ಲಿನ ಕೊನೆಯ 31 ಸ್ಥಾನದಲ್ಲಿರುವ ದೇಶಗಳ ಪತ್ರಕರ್ತರ ಪರಿಸ್ಥಿತಿ "ಅತ್ಯಂತ ಗಂಭೀರ" ಎಂದು ವ್ಯಾಖ್ಯಾನಿಸುತ್ತದೆ. ಭಾರತ ಈ ಕೊನೆಯ 31 ದೇಶಗಳ ಸಾಲಿಗೆ ಸೇರುತ್ತದೆ.



ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸಿ

ಪ್ರಕಾಶ್ ಕಾರತ್

ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕವು ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಸ್ಥಿತಿ ಹೇಗಿದೆ ಎಂಬುದನ್ನು ನಿಖರವಾಗಿ ಹೇಳಿದೆ. ಈ ವರ್ಷದ ಸೂಚ್ಯಂಕವನ್ನು ಮೇ 3 ರಂದು ಬಿಡುಗಡೆ ಮಾಡಲಾಯಿತು. ಈ ದಿನವನ್ನು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವಾಗಿ ಆಚರಿಸಲಾಗುತ್ತದೆ. ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕವನ್ನು ಸಿದ್ಧಪಡಿಸಿರುವ ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್ (ಆರ್‌ಎಸ್‌ಎಫ್) 180 ದೇಶಗಳಲ್ಲಿ ಭಾರತವನ್ನು 161 ನೇ ಸ್ಥಾನದಲ್ಲಿ ಇರಿಸಿದೆ. ಆತಂಕದ ಸಂಗತಿಯೆಂದರೆ, ಇದು 2022 ರಲ್ಲಿ 150 ರ ಸ್ಥಾನದಲ್ಲಿದ್ದ ಭಾರತ, ಈಗ ಅದಕ್ಕಿಂತ ಹನ್ನೊಂದು ಸ್ಥಾನ ಕೆಳಗಿಳಿದಿದೆ. "ಪತ್ರಕರ್ತರ ವಿರುದ್ಧದ ಹಿಂಸಾಚಾರ, ರಾಜಕೀಯ ಪಕ್ಷಪಾತದ ಮಾಧ್ಯಮ ಮತ್ತು ಮಾಧ್ಯಮ ಮಾಲೀಕತ್ವದ ಕೇಂದ್ರೀಕರಣವು 'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ'ದಲ್ಲಿ ಪತ್ರಿಕಾ ಸ್ವಾತಂತ್ರ್ಯ ಬಿಕ್ಕಟ್ಟಿನಲ್ಲಿದೆ ಎಂಬುದನ್ನು ತೋರಿಸುತ್ತದೆ" ಎಂದು ಸೂಚ್ಯಂಕದ ವರದಿಯು ಗಮನಿಸುತ್ತದೆ.

ಪತ್ರಿಕಾ ಸ್ವಾತಂತ್ರ್ಯಕ್ಕೆ ಇರುವ ಏಕೈಕ ದೊಡ್ಡ ಅಪಾಯವೆಂದರೆ ರಾಜ್ಯದ ದಮನಕಾರಿ ನೀತಿ ಮತ್ತು ಬೆದರಿಕೆ. ಮಾಧ್ಯಮಗಳಿಗೆ ಕಡಿವಾಣ ಹಾಕಲು ಮತ್ತು ಸ್ವತಂತ್ರ ಮಾಧ್ಯಮ ಉದ್ಯಮಗಳನ್ನು ಮತ್ತು ಪತ್ರಕರ್ತರನ್ನು ಹತ್ತಿಕ್ಕಲು ಮೋದಿ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳ ಪ್ರಗತಿಯನ್ನು ಪ್ರತಿ ವರ್ಷವೂ ನೋಡುತ್ತದೆ.

ಕಳೆದ ವರ್ಷ ಮಲಯಾಳಂ ಸುದ್ದಿ ವಾಹಿನಿಯಾದ 'ಮೀಡಿಯಾ ಒನ್' ಮೇಲೆ ನಿಷೇಧ ಹೇರಿತು. ಅಪ್‌ಲಿಂಕ್ ಮತ್ತು ಡೌನ್‌ಲಿಂಕ್ ಮಾಡುವ ಅದರ ಪರವಾನಗಿಯನ್ನು ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ರದ್ದುಗೊಳಿಸಿತು. ಅದಕ್ಕೆ ರಾಷ್ಟ್ರೀಯ ಭದ್ರತೆಯ ಕಾಳಜಿಯ ಕಾರಣ ನೀಡಲಾಯಿತು. ಅಂತಿಮವಾಗಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಆದೇಶವನ್ನು ರದ್ದುಪಡಿಸುವುದರೊಂದಿಗೆ ಚಾನೆಲ್ ಮೇಲಿನ ನಿಷೇಧದ ಆದೇಶವನ್ನು ರದ್ದುಗೊಳಿಸಲಾಯಿತು. ಮಾಧ್ಯಮ ಸಂಸ್ಥೆಗಳ ಮೇಲಿನ ಕಿರುಕುಳದ ಪ್ರಕ್ರಿಯೆಯ ಭಾಗವಾಗಿ, ಅವುಗಳ ಮೇಲೆ ದಾಳಿ ಮಾಡಲು ಇಡಿ ಮತ್ತು ಆದಾಯ ತೆರಿಗೆಯಂತಹ ಕೇಂದ್ರೀಯ ಇಲಾಖೆಗಳನ್ನು ಬಳಸುವುದು ಮಾಧ್ಯಮವನ್ನು ಹಿಮ್ಮೆಟ್ಟಿಸುವ ಮತ್ತೊಂದು ತಂತ್ರವಾಗಿದೆ. ಬಿಬಿಸಿ ಸುದ್ದಿವಾಹಿನಿಯು ಗುಜರಾತ್ 2002ರ ಗಲಭೆ ಕುರಿತ ಸಾಕ್ಷ್ಯಚಿತ್ರವನ್ನು ಪ್ರಸಾರ ಮಾಡಿದ ನಂತರ ಆದಾಯ ತೆರಿಗೆ ಇಲಾಖೆಯು ಬಿಬಿಸಿ ಕಚೇರಿಗಳಲ್ಲಿ ಶೋಧ ನಡೆಸಿತ್ತು. ಅದಕ್ಕೂ ಮೊದಲು, ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳ ಮೂಲಕ ಪ್ರಸಾರವಾಗುತ್ತಿರುವ ಸಾಕ್ಷ್ಯಚಿತ್ರದ ವೀಡಿಯೊಗಳನ್ನು ನಿರ್ಬಂಧಿಸಲು ಐಟಿ ಕಾಯಿದೆಯ ನಿಯಮಗಳನ್ನು ಅಳವಡಿಸಲಾಯಿತು.

ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಗೆ ವಿರೋಧಾಭಾಸವೆಂದು ಪರಿಗಣಿಸುವ ವಿಷಯವನ್ನು ಪ್ರಕಟಿಸಿದಾಗಲೆಲ್ಲಾ ಪತ್ರಕರ್ತರ ಮೇಲೆ ದೇಶದ್ರೋಹ ಸೇರಿದಂತೆ, ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ವಿವಿಧ ಕಲಂಗಳ ಅಡಿಯಲ್ಲಿ ಹೆಚ್ಚು ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ರತ್ನಗಿರಿಯಲ್ಲಿ ಶಶಿಕಾಂತ್ ವಾರಿಶೆಯಂತಹ ಕ್ರಿಮಿನಲ್ ಅಥವಾ ಮಾಫಿಯಾ ಚಟುವಟಿಕೆಗಳ ಬಗ್ಗೆ ಬಹಿರಂಗಪಡಿಸಿದ ಪತ್ರಕರ್ತರನ್ನು ಕೊಲ್ಲಲಾಗಿದೆ. ಅದಕ್ಕಾಗಿಯೇ 180 ರ ಶ್ರೇಯಾಂಕದ ಪಟ್ಟಿಯಲ್ಲಿನ ಕೊನೆಯ 31 ಸ್ಥಾನದಲ್ಲಿರುವ ದೇಶಗಳ ಪತ್ರಕರ್ತರ ಪರಿಸ್ಥಿತಿ "ಅತ್ಯಂತ ಗಂಭೀರ" ಎಂದು ವ್ಯಾಖ್ಯಾನಿಸುತ್ತದೆ. ಭಾರತ ಈ ಕೊನೆಯ 31 ದೇಶಗಳ ಸಾಲಿಗೆ ಸೇರುತ್ತದೆ.

ಜಮ್ಮು ಮತ್ತು ಕಾಶ್ಮೀರವು ಕೇಂದ್ರ ಸರ್ಕಾರದ ಅಡಿಯಲ್ಲಿ ಕೇಂದ್ರಾಡಳಿತ ಪ್ರದೇಶವಾದ ನಂತರ ಅಲ್ಲಿ ಮಾಧ್ಯಮ ನಿಗ್ರಹ ಮತ್ತು ಸೆನ್ಸಾರ್‌ಶಿಪ್ ಒಂದು ಕೆಟ್ಟ ಪ್ರಕರಣವಾಗಿದೆ. ಕಾಶ್ಮೀರದಲ್ಲಿ ಸ್ಥಳೀಯ ಪತ್ರಿಕೆಗಳು ಮತ್ತು ಆನ್‌ಲೈನ್ ಮಾಧ್ಯಮ ತಾಣಗಳ ಮೇಲೆ ಪದೇ ಪದೇ ನಡೆಯುವ ದಾಳಿಯ ನಂತರ, ಈಗ ಸ್ವತಂತ್ರ ಮಾಧ್ಯಮಕ್ಕೆ ಅವಕಾಶವಿಲ್ಲ. ಅಸ್ತಿತ್ವದಲ್ಲಿರುವ ಕೆಲವು ಸುದ್ದಿವಾಹಿನಿಗಳು ಸಹ ಭಾರೀ ನಿಯಂತ್ರಣ ಮತ್ತು ಸೆನ್ಸಾರ್‌ಶಿಪ್‌ಗೆ ಒಳಗಾಗಿವೆ. ಈ ವರ್ಷದ ಮಾರ್ಚ್‌ನಲ್ಲಿ, ಪತ್ರಕರ್ತ ಇರ್ಫಾನ್ ಮೆಹ್ರಾಜ್ ಅವರನ್ನು ಎನ್‌ಐಎ ಬಂಧಿಸಿತು ಮತ್ತು ಯುಎಪಿಎ ಅಡಿಯಲ್ಲಿನ ಷರತ್ತು ಸೇರಿದಂತೆ ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಆರೋಪ ಹೊರಿಸಿತ್ತು. ಸದ್ಯ ನಾಲ್ವರು ಪತ್ರಕರ್ತರು ಜೈಲಿನಲ್ಲಿದ್ದಾರೆ. ಅವರೆಲ್ಲರನ್ನೂ ಸಾರ್ವಜನಿಕ ಸುರಕ್ಷತಾ ಕಾಯ್ದೆ ಅಥವಾ ಯುಎಪಿಎ ಅಡಿಯಲ್ಲಿ ಬಂಧಿಸಲಾಗಿದೆ.

ಮುಖ್ಯವಾಹಿನಿಯ ವೃತ್ತಪತ್ರಿಕೆ ಮತ್ತು ದೂರದರ್ಶನ ಚಾನೆಲ್‌ಗಳೊಂದಿಗೆ ವ್ಯವಹರಿಸಿದ ನಂತರ, ಸರ್ಕಾರವು ಸಣ್ಣ ಸ್ವತಂತ್ರ ಸುದ್ದಿ ವೆಬ್‌ಸೈಟ್‌ಗಳು ಮತ್ತು ಡಿಜಿಟಲ್ ಮಾಧ್ಯಮಗಳತ್ತ ಗಮನ ಹರಿಸಿತು. 2021 ರಲ್ಲಿ ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ಅಡಿಯಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಇದು **I&B** ಸಚಿವಾಲಯವು ಸುದ್ದಿ ವೆಬ್‌ಸೈಟ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಲು ಪರಿಣಾಮಕಾರಿಯಾಗಿ ಅನುಮತಿಸುತ್ತದೆ, I&B ಡಿಜಿಟಲ್ ಮಾಧ್ಯಮದಿಂದ ವಿಷಯವನ್ನು ತೆಗೆದುಹಾಕಲು ಆದೇಶಿಸಬಹುದು. ಸುದ್ದಿ ಮತ್ತು ಮಾಹಿತಿಯ ಹರಿವಿನ ಮೇಲೆ ಸರ್ಕಾರದ ನಿಯಂತ್ರಣವನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ. ಪತ್ರಿಕಾ ಮಾಹಿತಿ ಬ್ಯೂರೋದ ಅಡಿಯಲ್ಲಿ ಸಮಿತಿಯು ಯಾವುದೇ ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸತ್ಯ–ಪರಿಶೀಲನೆ ಮತ್ತು ಸುಳ್ಳು ಸುದ್ದಿ ಯಾವುದು ಎಂದು ನಿರ್ಧರಿಸುವ ಅಧಿಕಾರವನ್ನು ನೀಡಲಾಗಿದೆ.

ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕ ವರದಿಯು ಸೂಚಿಸಿರುವಂತೆ, ಕೆಲವು ಕಾರ್ಪೊರೇಟ್‌ಗಳ ಕೈಯಲ್ಲಿ ಮಾಧ್ಯಮದ ಮಾಲೀಕತ್ವದ ಹೆಚ್ಚುತ್ತಿರುವ ಕೇಂದ್ರೀಕರಣವು ಪತ್ರಿಕಾ ಸ್ವಾತಂತ್ರ್ಯಕ್ಕೆ ಎರಡನೇ ಪ್ರಮುಖ ಬೆದರಿಕೆಯಾಗಿದೆ. ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಪ್ರಾಬಲ್ಯ ಹೊಂದಿರುವ ಕಾರ್ಪೊರೇಟ್ ಮಾಧ್ಯಮಗಳು ಮೋದಿ ಆಡಳಿತದ ಶಿಬಿರದ ಅನುಯಾಯಿಗಳಾಗಿ ಮಾರ್ಪಟ್ಟಿವೆ, ಅವುಗಳು ಗೋದಿ (ಲ್ಯಾಪ್‌ಡಾಗ್) ಮಾಧ್ಯಮವೆಂದು ವ್ಯಾಪಕವಾಗಿ ಕಂಡುಬರುತ್ತವೆ. ಈ ಕಾರ್ಪೊರೇಟ್‌ಗಳ ಒಡೆತನದ ಟಿವಿ ಚಾನೆಲ್‌ಗಳು, ನಿರ್ದಿಷ್ಟವಾಗಿ, ಮೋದಿ ಸರ್ಕಾರಕ್ಕೆ ಮತ್ತು ಹಿಂದುತ್ವದ ರಾಜಕೀಯದ ಬ್ರಾಂಡ್‌ಗೆ ಅಗತ್ಯವಾದ ಪ್ರಚಾರಗಳಾಗಿವೆ. ಸ್ವತಂತ್ರವಾಗಿರುವ ಕೆಲವೇ ಜನರು ದಾಳಿ ಮತ್ತು ಕಿರುಕುಳಕ್ಕೆ ಒಳಗಾಗಿದ್ದಾರೆ ಅಥವಾ ಎನ್‌ಡಿಟಿವಿಯನ್ನು ಸ್ವಾಧೀನಪಡಿಸಿಕೊಂಡಿರುವ ಅದಾನಿ ಅವರಂತಹ ಮೋದಿಯ ಕ್ರೋನಿ ಕ್ಯಾಪಿಟಲಿಸ್ಟ್‌ಗಳಿಂದ ಸ್ವಾಧೀನಪಡಿಸಿಕೊಂಡಿದ್ದಾರೆ.

ಪರಿಣಾಮವಾಗಿ ಸ್ವತಂತ್ರ ಪತ್ರಿಕೋದ್ಯಮಕ್ಕೆ ಜಾಗ ಕುಗ್ಗುತ್ತಿದೆ ಮತ್ತು ತನಿಖಾ ಪತ್ರಿಕೋದ್ಯಮದ ಅನುಪಸ್ಥಿತಿಯು ಆಳುವವರ ತಪ್ಪು ಕಾರ್ಯಗಳನ್ನು ಬಹಿರಂಗಪಡಿಸುವುದು ಕಡಿಮೆಯಾಗುತ್ತದೆ.

ಈ ಪತ್ರಿಕಾ ಸ್ವಾತಂತ್ರ್ಯದ ಉಸಿರುಗಟ್ಟಿಸುವಿಕೆಯು ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಹಕ್ಕುಗಳ ಮೇಲಿನ ಸರ್ವಾಧಿಕಾರಿ ಮೋದಿ ಸರ್ಕಾರದ ಒಟ್ಟಾರೆ ದಾಳಿಯ ಭಾಗವಾಗಿದೆ. ಸುದ್ದಿ ಏನಾಗಿರಬೇಕು ಮತ್ತು ಅದನ್ನು ಹೇಗೆ ಬಿಂಬಿಸಬೇಕು ಎಂಬುದರ ಕುರಿತು ಮುಖ್ಯವಾಹಿನಿಯ ಮಾಧ್ಯಮಗಳಿಗೆ ಷರತ್ತುಗಳನ್ನು ನಿರ್ದೇಶಿಸಬಹುದು ಎಂದು ಸರ್ಕಾರವು ವಿಶ್ವಾಸ ಹೊಂದುವ ಪರಿಸ್ಥಿತಿ ತಲುಪಿದೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ಹೆಚ್ಚು ಹಾನಿ ಮಾಡಿದ ಗೃಹ ಸಚಿವ ಅಮಿತ್ ಶಾ ಅವರು, ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದಂದು ಭಾರತದಲ್ಲಿ ಪ್ರಜಾಪ್ರಭುತ್ವದ ಅಭಿವೃದ್ಧಿಗೆ ಸಹಾಯ ಮಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಕ್ಕಾಗಿ ಪತ್ರಕರ್ತರಿಗೆ ಶುಭಾಶಯ ಕೋರಿರುವುದು ಅತ್ಯಂತ ವಿಪರ್ಯಾಸದ ಸಂಗತಿಯಾಗಿದೆ.

ಭಾರತದಲ್ಲಿ ಪತ್ರಿಕೋದ್ಯಮಕ್ಕೆ ಈ ಕರಾಳ ಕಾಲದಲ್ಲಿ, ಧೈರ್ಯ ಮತ್ತು ಪ್ರಾಮಾಣಿಕತೆಯಿಂದ ತಮ್ಮ ಪತ್ರಿಕೋದ್ಯಮವನ್ನು ನಡೆಸಲು ಎಲ್ಲಾ ರೀತಿಯ ಬೆದರಿಕೆಗಳು ಮತ್ತು ಒತ್ತಡಗಳನ್ನು ಎದುರಿಸುತ್ತಿರುವ ಅಸಂಖ್ಯಾತ ಪತ್ರಕರ್ತರು ಮತ್ತು ಮಾಧ್ಯಮ ಸಿಬ್ಬಂದಿಗಳ ಧೈರ್ಯವನ್ನು ಮೆಚ್ಚಲೇಬೇಕು. ಪತ್ರಿಕಾ ಸ್ವಾತಂತ್ರ್ಯದ ಹೋರಾಟವು ಪ್ರಜಾಪ್ರಭುತ್ವವನ್ನು ರಕ್ಷಿಸುವ ಒಟ್ಟಾರೆ ಹೋರಾಟದ ಭಾಗವಾಗಬೇಕಾಗಿದೆ.

ಅನು:ಸಿಚಿ

ಕೋಮುವಾದದ ವಿರುದ್ಧ ಶಾಂತಿ, ಸೌಹಾರ್ದತೆಯ ಸಂರಕ್ಷಣೆಯ ಜನಾದೇಶ: ಕೋಮುದ್ವೇಷದ ವಿಷ ತೆಗೆಯಲು ಆಗ್ರಹ


ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಕೋಮುವಾದಿ, ದುರಾಡಳಿತದ ಬಿಜೆಪಿ ಪಕ್ಷವನ್ನು ಅತ್ಯಂತ ನಿರ್ಣಾಯಕವಾಗಿ ಸೋಲಿಸಿ ಜಾತ್ಯಾತೀತ ಸರಕಾರದ ರಚನೆಗೆ ಹಾದಿ ಮಾಡಿಕೊಟ್ಟ ಜನತೆಯ ತೀರ್ಪನ್ನು ಸೌಹಾರ್ದ ಕರ್ನಾಟಕವು ಅತ್ಯಂತ ಸಂತಸದಿಂದ ಸ್ವಾಗತಿಸಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಈ ತೀರ್ಪು ಕನ್ನಡ ನಾಡಿನ ಸೌಹಾರ್ದತೆ, ಕೋಮು ಸಾಮರಸ್ಯ, ಶಾಂತಿ, ಸಹಬಾಳ್ವೆಯನ್ನು ಹಾಗೂ ಕನ್ನಡ ನಾಡಿನ ಅಸ್ಮಿತತೆ, ವೈವಿಧ್ಯಮಯ ಸಂಸ್ಕೃತಿಯನ್ನು ಪ್ರತಿಪಾದಿಸಿದೆ. ರಾಜ್ಯದ ಆರ್ಥಿಕತೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಪರಭಾರೆ ಮಾಡುವ, ಭಾರತ ಸರ್ಕಾರದ ಏಕಸ್ವಾಮ್ಯ ಆಡಳಿತದ ಹೇರಿಕೆ, ಸರ್ವಾಧಿಕಾರತನಕ್ಕೆ ನೀಡಿದ ತೀಕ್ಷ್ಣ ಪ್ರತಿರೋಧದ ಪ್ರತಿಕ್ರಿಯೆ ಇದಾಗಿದೆ. ಈ ತೀರ್ಪು ಬಿಜೆಪಿಯ ಕೋಮುದ್ವೇಷದ ವಿಭಜನಾಕಾರಿ ದುಷ್ಟ ಆಟಗಳಿಗೆ ಕೊಟ್ಟ ತಿರುಗೇಟಾಗಿದೆ. ಈ ಜನಾದೇಶದಿಂದ ಸಂಘಪರಿವಾರ ಪಾಠ ಕಲಿತು ತನ್ನ ವಿಭಜನಾ ರಾಜಕಾರಣವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಕಾಂಗ್ರೆಸ್ ನೇತೃತ್ವದ ಸರಕಾರ ಜನಾದೇಶವನ್ನು ಸರಿಯಾಗಿ ಅರ್ಥ ಮಾಡಿಕೊಂಡು ನಾಡಿನ ಸೌಹಾರ್ದತೆ, ಶಾಂತಿ ಸಾಮರಸ್ಯವನ್ನು ಕಾಪಾಡಬೇಕು. ಜನತೆಯ ಬದುಕನ್ನು, ರಾಜ್ಯದ ಹಿತಾಸಕ್ತಿಯನ್ನು ಸಂರಕ್ಷಿಸಬೇಕು. ಸಂಘಪರಿವಾರ ಸ್ವತಂತ್ರವಾಗಿ ಹಾಗೂ ಬಿಜೆಪಿ ಸರಕಾರದ ಮೂಲಕ ಉಂಟು ಮಾಡಿರುವ ಪ್ರಜಾಪ್ರಭುತ್ವ ವಿರೋಧಿ, ದ್ವೇಷ ಹಾಗೂ ವಿಭಜನಾಕಾರಿ ವಿಷವನ್ನು ಶಿಕ್ಷಣ ಕ್ಷೇತ್ರವನ್ನೂ ಒಳಗೊಂಡು ಸಾಮಾಜಿಕ, ಸಾಂಸ್ಕೃತಿಕ ರಂಗದಲ್ಲಿಂದ ತೊಲಗಿಸಲು ಕ್ರಮ ವಹಿಸಬೇಕೆಂದು ಸೌಹಾರ್ದ ಕರ್ನಾಟಕ ಆಗ್ರಹಿಸಿದ್ದಾರೆ.

ಕರ್ನಾಟಕದ ಜನತೆಯಿಂದ ಬಿಜೆಪಿ ಸರಕಾರಕ್ಕೆ ಗೇಟ್ ಪಾಸ್

ವಸಂತರಾಜ ಎನ್.ಕೆ.



ಮೇ 10 ರಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದ ಜನರು ಅತ್ಯಂತ ನಿಸ್ಸಂದಿಗ್ಧವಾದ ನಿರ್ಣಾಯಕ ಜನಾದೇಶದಲ್ಲಿ ಬಿಜೆಪಿ ಸರಕಾರಕ್ಕೆ ಗೇಟ್ ಪಾಸ್ ಕೊಟ್ಟಿದ್ದಾರೆ. ಇದು ಬಿಜೆಪಿಗೆ ಇಡೀ ದಕ್ಷಿಣ ಭಾರತದಿಂದ ಗೇಟ್ ಪಾಸ್ ಸಹ. ಹಣಬಲದ ಅಭೂತಪೂರ್ವ ದುರ್ಬಳಕೆ, ರಾಜ್ಯಾಧಿಕಾರ, ಮೆಗಾ ರೋಡ್‌ಶೋ/ರ್ಯಾಲಿ, ಮೆಗಾ ಉದ್ಘಾಟನೆ, ಮೆಗಾ ಘೋಷಣೆಗಳು, ಕೋಮು ಪ್ರಚಾರ, ಬಿಜೆಪಿ ಮತ್ತು ಅದರ ಸರ್ಕಾರಗಳಿಂದ ವಿರೋಧ ಪಕ್ಷದ ಅಭ್ಯರ್ಥಿಗಳು, ಬೆಂಬಲಿಗರು, ಕಾರ್ಯಕರ್ತರಿಗೆ ಬೆದರಿಕೆ ಮತ್ತು ಕಿರುಕುಳದ ಹೊರತಾಗಿಯೂ ಜನರು ಈ ತೀರ್ಪು ನೀಡಿರುವುದು ಗಮನಾರ್ಹವಾಗಿದೆ. ಕರ್ನಾಟಕವು ನಾಲ್ಕು ದಶಕಗಳ ಪ್ರತಿ ಚುನಾವಣೆಯಲ್ಲಿ ಪಕ್ಷವನ್ನು ಬದಲಾಯಿಸುವ ದಾಖಲೆಯನ್ನು ಉಳಿಸಿಕೊಂಡಿದೆ. ಮತ್ತೆ ಅಸಹ್ಯ 'ಆಪರೇಷನ್', 'ರೆಸಾರ್ಟ್ ರಾಜಕೀಯ', ಭ್ರಷ್ಟಾಚಾರಕ್ಕೆ ಅವಕಾಶ ಕೊಡಬಾರದೆಂಬುದನ್ನು ಜನರು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ ಎಂಬುದು ಸ್ಪಷ್ಟ.

ಅಸೆಂಬ್ಲಿಯಲ್ಲಿ ಬಿಜೆಪಿಯ ಬಲವನ್ನು 65 ಕ್ಕೆ ಇಳಿಸಲಾಗಿದೆ. 2018ಕ್ಕೆ ಹೋಲಿಸಿದರೆ ಬಿಜೆಪಿ 38 ಸ್ಥಾನಗಳನ್ನು ಕಳೆದುಕೊಂಡಿದೆ ಆಪರೇಷನ್ ಕಮಲದ ನಂತರದ ಮತ್ತು ನಂತರದ 2019 ರ ಉಪಚುನಾವಣೆಗಳ ನಂತರದ 116 ಸೀಟುಗಳ ಬಹುಮತದಿಂದ 50 ಸ್ಥಾನಗಳನ್ನು ಕಳೆದುಕೊಂಡಿದೆ. ಕಾಂಗ್ರೆಸ್ 2018ಕ್ಕೆ ಹೋಲಿಸಿದರೆ 55 ಸ್ಥಾನಗಳನ್ನು ಗಳಿಸುವ ಮೂಲಕ 135 ಸ್ಥಾನಗಳ ನಿರ್ಣಾಯಕ ಬಹುಮತವನ್ನು ಗೆದ್ದುಕೊಂಡಿದೆ. ಆಪರೇಷನ್ ಕಮಲದ ನಂತರದ . ಅಸೆಂಬ್ಲಿ ಯಲ್ಲಿ ಅದರ ಬಲಕ್ಕಿಂತ 66 ಹೆಚ್ಚು ಸ್ಥಾನಗಳನ್ನು ಗೆದ್ದುಕೊಂಡಿದೆ. ಜನತಾ ದಳ (ಜಾತ್ಯತೀತ) ಸಹ 2018 ರ ಬಲದಿಂದ 18 ಸ್ಥಾನಗಳನ್ನು ಕಳೆದುಕೊಂಡು 19 ಸ್ಥಾನಗಳಿಗೆ ಇಳಿದಿದೆ. ಸರ್ವೋದಯ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಮತ್ತು ಗಣಿಧಣಿ ಜನಾರ್ದನ ರೆಡ್ಡಿ ಮತ್ತು ಇಬ್ಬರು ಸ್ವತಂತ್ರರು ಇತರ ನಾಲ್ಕು ಸ್ಥಾನಗಳನ್ನು ಗೆದ್ದಿದ್ದಾರೆ.

ಬಿಜೆಪಿಗೆ ನಿರ್ಣಾಯಕ ಸೋಲು

ಬಿಜೆಪಿಯ ನಿರ್ಣಾಯಕ ಸೋಲನ್ನು ಚುನಾವಣಾ ಫಲಿತಾಂಶಗಳ ಕೆಳಗಿನ ಸಂಗತಿಗಳಿಂದ ನೋಡಬಹುದು:

* 12 ಕ್ಯಾಬಿನೆಟ್ ಸಚಿವರು ಸೋತಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿದ್ದ ಪ್ರಮುಖ ಸಚಿವ ಸೋಮಣ್ಣ ಆ ಮತ್ತು ಇನ್ನೊಂದು ಎರಡೂ ಕ್ಷೇತ್ರಗಳಲ್ಲಿ ಸೋತಿದ್ದಾರೆ
* 9 ಜಿಲ್ಲೆಗಳಲ್ಲಿ (ಅದರ ಹಿಂದುತ್ವದ ಭದ್ರಕೋಟೆಗಳಾದ ಕೊಡಗು ಮತ್ತು ಚಿಕ್ಕಮಗಳೂರು ಸೇರಿದಂತೆ) ಬಿಜೆಪಿ ಶೂನ್ಯ ಸಂಪಾದನೆ ಮಾಡಿದೆ..
* 8 ಜಿಲ್ಲೆಗಳಲ್ಲಿ ಬಿಜೆಪಿ ಒಂದು ಸ್ಥಾನ ಮಾತ್ರ ಗೆದ್ದಿದೆ
* 7 ಜಿಲ್ಲೆಗಳಲ್ಲಿ ಬಿಜೆಪಿ ಗೆದ್ದಿದ್ದು 2 ಸ್ಥಾನ ಮಾತ್ರ
* ಕೆಲವು ಸೀಟುಗಳಲ್ಲಿ ಬಂಡಾಯ ಬಿಜೆಪಿ ಅಭ್ಯರ್ಥಿಗಳು ಬಿಜೆಪಿಗೆ ಹಾನಿ ಮಾಡಿದ್ದಾರೆ (ಉದಾಹರಣೆಗೆ ಪುತ್ತೂರು ನಲ್ಲಿ, 'ಕಠಿಣ ಹಿಂದುತ್ವ' ಅಭ್ಯರ್ಥಿ ಕಾಂಗ್ರೆಸ್ ಗೆಲುವಿಗೆ ಕಾರಣರಾದರು ಮತ್ತು ಬಿಜೆಪಿಯನ್ನು 3 ನೇ ಸ್ಥಾನಕ್ಕೆ ತಳ್ಳಿದರು)
* ಬಿಜೆಪಿಯು ದಕ್ಷಿಣ ಕರ್ನಾಟಕ ಮತ್ತು ಬೆಂಗಳೂರು ನಗರವನ್ನು (ಅಲ್ಲೂ ಹೆಚ್ಚಳ ಅಲ್ಪ) ಹೊರತುಪಡಿಸಿ, ಎಲ್ಲಾ ಪ್ರಮುಖ ಪ್ರದೇಶಗಳಲ್ಲಿ ಸ್ಥಾನಗಳನ್ನು ಮತ್ತು ಶೇಕಡಾವಾರು ಮತಗಳನ್ನು ಕಳೆದುಕೊಂಡಿದೆ.
* ಕರಾವಳಿ ಕರ್ನಾಟಕದ ಭದ್ರಕೋಟೆಯಲ್ಲೂ ಅದು (ಅಲ್ಪವಾದರೂ) ಸ್ಥಾನ ಮತ್ತು ಮತಗಳನ್ನು ಕಳೆದುಕೊಂಡಿತು
* ಕಾಂಗ್ರೆಸ್–ಜೆಡಿಎಸ್ ಸರ್ಕಾರ ಪತನಕ್ಕೆ ಕಾರಣವಾದ ಬಿಜೆಪಿಗೆ ಪಕ್ಷಾಂತರ ಮಾಡಿದ ಅರ್ಧದಷ್ಟು ಶಾಸಕರು ಸೋತಿದ್ದಾರೆ.
* ಹೊಸಕೋಟೆ (ಬೆಂಗಳೂರು ಗ್ರಾಮಾಂತರ ಜಿಲ್ಲೆ)ಯಿಂದ ಅತ್ಯಂತ ಶ್ರೀಮಂತ ಹಾಗೂ ಬಿಜೆಪಿ ಅಭ್ಯರ್ಥಿ ಎಂಟಿಬಿ ನಾಗರಾಜ್ ಸೋತಿದ್ದಾರೆ.

ಚುನಾವಣಾ ಫಲಿತಾಂಶಗಳ ಸ್ಥೂಲ ಚಿತ್ರಣವನ್ನು ಕೋಷ್ಟಕಗಳು 1, 2 ಮತ್ತು 3 ರಲ್ಲಿ ನೀಡಲಾಗಿದೆ. ಕೋಷ್ಟಕ 1 ರಾಜ್ಯ ಮಟ್ಟದ ಒಟ್ಟು ಸ್ಥಾನಗಳ ಸಂಖ್ಯೆಯನ್ನು ಮತ್ತು ಪಕ್ಷವಾರು ಮತಗಳ ಶೇಕಡಾವಾರುಗಳನ್ನು ನೀಡುತ್ತದೆ. ಕೋಷ್ಟಕ 2 ಮತ್ತು 3 ಪ್ರಾದೇಶಿಕವಾರು ಒಟ್ಟು ಮತಗಳ ಶೇಕಡಾವಾರು ಮತ್ತು ಪಕ್ಷವಾರು ಸ್ಥಾನಗಳ ಸಂಖ್ಯೆಯನ್ನು ನೀಡುತ್ತದೆ. ಎಲ್ಲಾ ಕೋಷ್ಟಕಗಳು 2018 ರ ಚುನಾವಣಾ ಅಂಕಿಅಂಶಗಳಿಂದ ಏರಿಕೆ/ಇಳಿಕೆಗಳನ್ನು ಸಹ ತೋರಿಸುತ್ತವೆ

ಎಲ್ಲಾ ಪ್ರದೇಶಗಳಲ್ಲಿಯೂ ಕಾಂಗ್ರೆಸ್ ಮುನ್ನಡೆ ಸಾಧಿಸಿದೆ ಎಂಬುದನ್ನು ಕೋಷ್ಟಕಗಳಿಂದ ನೋಡಬಹುದು. ಬಿಜೆಪಿ ಮತ್ತು ಜೆಡಿಎಸ್ನಿಂದ ಎಲ್ಲಾ ಪ್ರದೇಶಗಳಲ್ಲಿ ಕಾಂಗ್ರೆಸ್ ಮತ ಮತ್ತು ಸ್ಥಾನಗಳನ್ನು ಕಸಿದಿದೆ. ರಾಜ್ಯ ಮಟ್ಟದಲ್ಲಿ ಕಾಂಗ್ರೆಸ್ ಸುಮಾರು 5% ಮತಗಳು ಹೆಚ್ಚಾಗಿವೆ. ಬಿಜೆಪಿ ಅಲ್ಪ ಶೇಕಡಾವಾರು ಮತಗಳನ್ನು ಕಳೆದುಕೊಂಡಿದೆ. ಜೆಡಿಎಸ್ ತನ್ನ 1/3ರಷ್ಟು ಮತ ಗಳಿಕೆಯನ್ನು ಕಳೆದುಕೊಂಡಿದೆ. ರಾಜ್ಯಮಟ್ಟದ ಒಟ್ಟು ಅಂಕಿ–ಅಂಶಗಳ ಪ್ರಕಾರ, ಕಾಂಗ್ರೆಸ್ ಮುಖ್ಯವಾಗಿ ಜೆಡಿಎಸ್‌ನಿಂದ ಮತಗಳನ್ನು ಗಳಿಸಿದೆ ಎಂದು ತೋರುತ್ತದೆಯಾದರೂ, ನಾವು ಪ್ರದೇಶಗಳು ಮತ್ತು ಜಿಲ್ಲೆಗಳ ಅಂಕೆಸಂಖ್ಯೆ ಪರಿಶೀಲಿಸಿದಾಗ ಅದು ನಿಜವಲ್ಲ ಎಂಬುದನ್ನು ನಾವು ನಂತರ ನೋಡುತ್ತೇವೆ.

ಕೋಷ್ಟಕ 1: ಕರ್ನಾಟಕದ ಸ್ಥಾನಗಳು/ಮತಗಳ % ಲೆಕ್ಕಾಚಾರ (2023, 18 ಕ್ಕಿಂತ ಹೆಚ್ಚಿನ ಏರಿಕೆ/ಇಳಿಕೆ)

ಪಕ್ಷ	ಸೀಟುಗಳು (2023)	+ಏರಿಕೆ/ –ಇಳಿಕೆ	ಮತಪ್ರಮಾಣ % (2023)	+ಏರಿಕೆ/ –ಇಳಿಕೆ
ಬಿಜೆಪಿ	66	–38	36	–0.35
ಕಾಂಗ್ರೆಸ್	135	+55	42.9	+4.74
ಜೆಡಿ(ಎಸ್)	19	–18	13.3	–5.0
ಇತರ	4	+1	7.8	+0.4

ಆದಾಗ್ಯೂ, ಹೆಚ್ಚಿನ ಪ್ರದೇಶಗಳಲ್ಲಿ ಬಿಜೆಪಿ ಗಣನೀಯ ಮತಗಳನ್ನು ಕಳೆದುಕೊಂಡಿದೆ, ಅದು ದಕ್ಷಿಣ ಕರ್ನಾಟಕ ಮತ್ತು ಬೆಂಗಳೂರು ಪ್ರದೇಶಗಳಲ್ಲಿನ ಲಾಭದಿಂದ ಮಾಡಿದೆ.

ಎಲ್ಲಾ ಪ್ರದೇಶಗಳಲ್ಲಿ ಕಾಂಗ್ರೆಸ್ ಶೇಕಡಾವಾರು ಮತಗಳನ್ನು ಮತ್ತು ಬೆಂಗಳೂರು ನಗರವನ್ನು ಹೊರತುಪಡಿಸಿ ಎಲ್ಲಾ ಪ್ರದೇಶಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ ಎಂದು ಟೇಬಲ್ 1, 2 ಮತ್ತು 3 ರಿಂದ ನೋಡಬಹುದು. ಬಿಜೆಪಿಯು ದಕ್ಷಿಣ ಕರ್ನಾಟಕ ಮತ್ತು ಬೆಂಗಳೂರು ನಗರವನ್ನು (ಅಲ್ಲಿ ಹೆಚ್ಚಳ ಅಲ್ಪ). ಹೊರತುಪಡಿಸಿ ಎಲ್ಲಾ ಪ್ರಮುಖ ಪ್ರದೇಶಗಳಲ್ಲಿ ಸ್ಥಾನಗಳನ್ನು ಮತ್ತು ಶೇಕಡಾವಾರು ಮತಗಳನ್ನು ಕಳೆದುಕೊಂಡಿದೆ, ಜೆಡಿ(ಎಸ್) ತನ್ನ ಮೂಲ ಪ್ರದೇಶವಾದ ದಕ್ಷಿಣ ಕರ್ನಾಟಕದಲ್ಲಿ ಕಳೆದಕೊಂಡಿದೆ ಮತ್ತು ಇತರ ಪ್ರದೇಶಗಳಲ್ಲಿ ವಿಸ್ತರಿಸಿಲ್ಲ.

ಬಿಜೆಪಿ ಸೋಲಲು ಕಾರಣವೇನು?

ಬಿಜೆಪಿಯ ಸೋಲಿಗೆ ಕಾರಣಗಳು ಸಾಕಷ್ಟು ಸ್ಪಷ್ಟವಾಗಿವೆ. ಒಪಿನಿಯನ್ ಮತ್ತು ಎಕ್ಸಿಟ್ ಪೋಲ್ ಗಳ ಕೆಲವು ಸಮೀಕ್ಷೆಗಳು ಸಂಗ್ರಹಿಸಿದ ವಿವರವಾದ ಪ್ರತಿಕ್ರಿಯೆಗಳು ಮತ್ತು ಮತದಾರರ ವಿವರಗಳಿಂದ ಇವುಗಳನ್ನು ದೃಢೀಕರಿಸಿವೆ. ಚುನಾವಣೆಯ ಪ್ರಮುಖ ಅಂಕಿಅಂಶಗಳು ಸಹ ಅವುಗಳನ್ನು ಖಚಿತಪಡಿಸುತ್ತವೆ.

ಬಿಜೆಪಿ ಸರ್ಕಾರಗಳ ವಿರುದ್ಧ (ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ) ಅಭೂತಪೂರ್ವ ಬೃಹತ್ ಆಡಳಿತ–ವಿರೋಧಿ ಅಲೆ ಇತ್ತು. ಅದಕ್ಕೆ ಕಾರಣಗಳು ಹಲವು–'40% ಸರ್ಕಾರ್' ಸಂಕೇತಿಸುವ ಅತಿರೇಕದ ಭ್ರಷ್ಟಾಚಾರ; ಕೋವಿಡ್‌ನಿಂದ ಉಂಟಾದ ಆರೋಗ್ಯ ಮತ್ತು ಆರ್ಥಿಕ ವಿಪತ್ತನ್ನು ನಿಭಾಯಿಸುವಲ್ಲಿ ಸಂಪೂರ್ಣ ವೈಫಲ್ಯ; ಭಾರೀ ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ಪರಿಹಾರ ಮತ್ತು ತಡೆಕ್ರಮಗಳ ಬದಲಿಗೆ, ಅಸ್ತಿತ್ವದಲ್ಲಿರುವ ಕಲ್ಯಾಣ ಯೋಜನೆಗಳನ್ನು ಸ್ಥಗಿತಗೊಳಿಸುವುದು ಅಥವಾ ದುರ್ಬಲಗೊಳಿಸುವುದು; ರೈತ–ವಿರೋಧಿ, ಕಾರ್ಮಿಕ–ವಿರೋಧಿ ಮತ್ತು ಜನವಿರೋಧಿ ನೀತಿಗಳ ಕಾನೂನುಗಳ ಕಟು ಜಾರಿ; ರಾಜ್ಯದ ಭಾಷಾ, ಸಾಂಸ್ಕೃತಿಕ ಗುರುತು, ಸ್ವಾಯತ್ತತೆ ಮತ್ತು ಕಾನೂನುಬದ್ಧ ಹಣಕಾಸಿನ ಹಿತಾಸಕ್ತಿಗಳ ಮೇಲೆ ತೀವ್ರವಾದ ದಾಳಿಗಳು. ಇವುಗಳಿಂದ ಜನರು ಸರ್ಕಾರದಿಂದ ಬೇಸತ್ತಿದ್ದಾರೆ ಮತ್ತು ಸರ್ಕಾರವನ್ನು ಕಿತ್ತು ಹಾಕಲು ಇದೊಂದೇ ಸಾಕಾಗಿತ್ತು.

ಈ ವೈಫಲ್ಯಗಳನ್ನು ಮುಚ್ಚಿಹಾಕಲು ಬಿಜೆಪಿ ಮತ್ತು ಸಂಘಿ ಗ್ಯಾಂಗ್ ವ್ಯಾಪಕವಾದ ಮತೀಯ ದ್ವೇಷದ ಪ್ರಚಾರ, ಕೋಮು ಹಿಂಸಾಚಾರ ಮತ್ತು ಮತೀಯ ಧ್ರುವೀಕರಣವನ್ನು ಸೃಷ್ಟಿಸಲು ಪ್ರಯತ್ನಿಸಿತು. ದೈನಂದಿನ ಜೀವನದ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಸಂಪೂರ್ಣ ವೈಫಲ್ಯಗಳ ಜೊತೆಗೆ, ಶಾಂತಿ ಮತ್ತು ಸೌಹಾರ್ದತೆಗೆ ಭಂಗ ತರುವ ನಿರಂತರ ಕೋಮು ಪ್ರಚಾರವು ಜನರಿಗೆ ಸ್ವೀಕಾರಾರ್ಹವಾಗಿರಲಿಲ್ಲ. ಕೋಮು ಧ್ರುವೀಕರಣವನ್ನು ಬಳಸಿಕೊಂಡು ಚುನಾವಣೆ ಎದುರಿಸಲು ಬಯಸಿದಾಗ ಬಿಜೆಪಿ ವಿರುದ್ಧ ತೀವ್ರ ಅಸಮಾಧಾನವೆದ್ದಿತ್ತು. ಈ ಅಸಮಧಾನವು ಸೋಲಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ಬಿಜೆಪಿ ಸರ್ಕಾರವು ಒಡೆದು ಆಳುವ ಮತ್ತು ಚುನಾವಣಾ ತಂತ್ರವಾಗಿ ಮಾಡಿದ ಮೀಸಲಾತಿ ವ್ಯವಸ್ಥೆಯಲ್ಲಿ ಅವ್ಯವಸ್ಥಿತ ಮತ್ತು ಆತುರದ ರೀತಿಯಲ್ಲಿ ತಂದ ಪ್ರಮುಖ ಬದಲಾವಣೆಗಳು ಮತ್ತು ಇತರ 'ಸಾಮಾಜಿಕ ಇಂಜಿನಿಯರಿಂಗ್ ಪ್ರಯತ್ನಗಳು ಕೆಲಸ ಮಾಡಲಿಲ್ಲ. ಮಾತ್ರವಲ್ಲ ಆದರೆ ಬಿಜೆಪಿ ವಿರುದ್ಧ ತಿರುಗೇಟು ನೀಡಿದವು. ವಿಶೇಷವಾಗಿ ಪರಿಶಿಷ್ಟ ಜಾತಿಗಳ 'ಆಂತರಿಕ ಮೀಸಲಾತಿ', ಮುಸ್ಲಿಂ ಮೀಸಲಾತಿಯನ್ನು ರದ್ದುಪಡಿಸುವುದು ಮತ್ತು ಅದನ್ನು ಲಿಂಗಾಯತ/ಒಕ್ಕಲಿಗರ ನಡುವೆ ಹಂಚುವುದು, ಹೆಚ್ಚಿನ ವಿಭಾಗಗಳ ಜನರನ್ನು ಮನವೊಲಿಸುವ/ತೃಪ್ತಿಗೊಳಿಸುವ ಬದಲು ಅಸಮಾಧಾನವನ್ನು ಇನ್ನಷ್ಟು ಹೆಚ್ಚಿಸಿತು. ಇದು ಸಮೀಕ್ಷೆಗಳಿಂದ ದೃಢಪಟ್ಟಿದೆ.

ಯಡಿಯೂರಪ್ಪ ಅವರ ಪದಚ್ಯುತಿ ಮತ್ತು 'ಲಿಂಗಾಯತ ಅಭಿಮಾನ' ವನ್ನು ಘಾಸಿಗೊಳಿಸಿರುವುದು ಬಿಜೆಪಿ ಸೋಲಿಗೆ ಪ್ರಮುಖ ಕಾರಣ ಎಂದು ಅನೇಕ ವಿಶ್ಲೇಷಕರು ಉಲ್ಲೇಖಿಸಿದ್ದಾರೆ. ಯಡಿಯೂರಪ್ಪ ಅವರಿಗೆ ಮುಂದುವರಿಯಲು ಅವಕಾಶ ನೀಡಿದರೆ ಮತ್ತು ಮುಕ್ತ ಹಸ್ತವನ್ನು ಕೊಟ್ಟಿದ್ದರೆ, ಬಿಜೆಪಿ ಸೋಲುತ್ತಿರಲಿಲ್ಲ ಎಂದು ಈ ಉಲ್ಲೇಖಗಳ ಹಿಂದಿರುವ ಭಾವನೆ. ಆದರೆ ವಾಸ್ತವ ಅದಕ್ಕಿಂತ ಹೆಚ್ಚು ಸಂಕೀರ್ಣವಾಗಿದೆ. ರಾಜ್ಯ ಬಿಜೆಪಿಯಲ್ಲಿ ವ್ಯಾಪಕವಾದ ಗುಂಪುಗಾರಿಕೆ, ಯಾವುದೇ ಪ್ರಬಲ ಸ್ಥಳೀಯ ನಾಯಕತ್ವಕ್ಕೆ ಅವಕಾಶ ನೀಡದ 'ಹೈಕಮಾಂಡ್' ಹಾಗೂ ಪಕ್ಷ ಮತ್ತು ಸರ್ಕಾರವನ್ನು ನಿಯಂತ್ರಿಸಲು ಆರ್‌ಎಸ್‌ಎಸ್ ನಿರಂತರ ಪ್ರಯತ್ನಗಳು ವಾಸ್ತವವಾದ ಮೂಲ ಕಾರಣ. ಇವು ಆರೆಸ್ಸೆಸ್–ಬಿಜೆಪಿ ಸಂಯೋಜನೆಯ ಮೂಲ ಲಕ್ಷಣಗಳಾಗಿವೆ. ಇದೂ ಕೂಡ ದುರಾಡಳಿತ, ಸರ್ಕಾರದ ಕಳಪೆ ಸಾಧನೆಗಳಿಗೆ ಕಾರಣವಾಗಿದ್ದು, ಪಕ್ಷದಲ್ಲಿ ಸಂಘಟನಾತ್ಮಕ ಸಮಸ್ಯೆಗಳನ್ನು ಸೃಷ್ಟಿಸಿ ಸೀಟು ಹಂಚಿಕೆಯಲ್ಲಿ ಗೊಂದಲಕ್ಕೆ ಕಾರಣವಾಯಿತು.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಕೋಷ್ಟಕ 2 : ಕರ್ನಾಟಕ ಪ್ರದೇಶವಾರು ಮತಗಳು % (2023, 2018 ಕ್ಕಿಂತ ಏರಿಕೆ/ಇಳಿಕೆ)

ಪ್ರದೇಶ	ಕಾಂಗ್ರೆಸ್		ಬಿಜೆಪಿ		ಜೆಡಿ(ಎಸ್)	
	ಮತಪ್ರಮಾಣ % (2023)	+ಏರಿಕೆ/ –ಇಳಿಕೆ	ಮತಪ್ರಮಾಣ % (2023)	+ಏರಿಕೆ/ –ಇಳಿಕೆ	ಮತಪ್ರಮಾಣ % (2023)	+ಏರಿಕೆ/ –ಇಳಿಕೆ
ಕರಾವಳಿ	42.4	+2.3	48.5	–3.1	3.8	–0.2
ಹೈದರಾಬಾದ್/ ಕಲ್ಯಾಣ	46.4	+4.2	35.8	–3.4	10.5	–0.2
ಮುಂಬಯಿ/ ಕಿತ್ತೂರು	44.6	+5.9	39.7	–4.5	5.3	–2.9
ದಕ್ಷಿಣ +ಮಲೆನಾಡು	40.8	6.5	25.5	+3.1	26.1	–8.6
ಬೆಂಗಳೂರು ನಗರ	40.7	+1.0	46.4	+5.4	7.8	–7.7

ಕೋಷ್ಟಕ 3 : ಕರ್ನಾಟಕ ಪ್ರದೇಶವಾರು ಸೀಟುಗಳ ಸಂಖ್ಯೆ (2023, 2018 ಕ್ಕಿಂತ ಏರಿಕೆ/ಇಳಿಕೆ)

ಪ್ರದೇಶ	ಕಾಂಗ್ರೆಸ್		ಬಿಜೆಪಿ		ಜೆಡಿ(ಎಸ್)		ಇತರೆ	
	ಸೀಟು (2023)	+ಏರಿಕೆ/ –ಇಳಿಕೆ	ಸೀಟು (2023)	+ಏರಿಕೆ/ –ಇಳಿಕೆ	ಸೀಟು (2023)	+ಏರಿಕೆ/ –ಇಳಿಕೆ	ಸೀಟು (2023)	+ಏರಿಕೆ/ –ಇಳಿಕೆ
ಕರಾವಳಿ	6	+4	13	–3	0	0	0	0
ಹೈದರಾಬಾದ್/ ಕಲ್ಯಾಣ	26	+5	10	–5	3	–1	1	+1
ಮುಂಬಯಿ/ ಕಿತ್ತೂರು	44	+24	18	–23	1	–1	1	0
ದಕ್ಷಿಣ+ ಮಲೆನಾಡು	47	+26	9	–12	15	–14	2	0
ಬೆಂಗಳೂರು ನಗರ	12	–3	16	+5	0	–2	0	0
ಒಟ್ಟು	**135**	**+55**	**66**	**–38**	**19**	**–18**	**4**	**+1**

ಆರ್‌ಎಸ್‌ಎಸ್–ಬ್ರಾಹ್ಮಣ ಬಣ ಎಂದು ಕರೆಯಲ್ಪಡುವ ಬಿ.ಎಲ್. ಸಂತೋಷ್ ಬಣವು ಪ್ರಬಲವಾದ ಲಿಂಗಾಯತ ಬಣದ ಬುಡ ಕತ್ತರಿಸಲು ಬಯಸಿದೆ ಮತ್ತು ಸೀಟು ಹಂಚಿಕೆಯಲ್ಲಿ 'ಗುಜರಾತ್ ಮಾದರಿ' ಮೂಲಕ ಅದನ್ನು ಸಾಧಿಸಲು ಪ್ರಯತ್ನಿಸಿತು. ಹೈಕಮಾಂಡ್ನ ಸಂಪೂರ್ಣ ಜ್ಞಾನ ಮತ್ತು ಆಶೀರ್ವಾದದಿಂದ ಇದನ್ನು ಮಾಡಲಾಗಿದೆ. ವಸ್ತುನಿಷ್ಠವಾಗಿಯೂ ಸಹ ಬಿಜೆಪಿ ತನ್ನ ತಳಹದಿಯನ್ನು ವಿಸ್ತರಿಸಿಕೊಳ್ಳಲು ಒಬ್ಬ (ವಯಸ್ಸಾದ) ನಾಯಕ/ಸಮುದಾಯದ ಮೇಲೆ ಅತಿಯಾದ ಅವಲಂಬನೆಯಿಂದ ಹೊರಬರಬೇಕಾಗಿತ್ತು. ಆದರೆ ಮೇಲೆ ಪಟ್ಟಿ ಮಾಡಲಾದ ಇತರ ಪ್ರಮುಖ ಅಂಶಗಳ ಮತ್ತು ಬಣದ ನಾಯಕರ ವೈಯಕ್ತಿಕ ಮಹತ್ವಾಕಾಂಕ್ಷೆಗಳ ಹಿನ್ನೆಲೆಯಲ್ಲಿ ಇದು 'ಲಿಂಗಾಯತ ಕೋಪ'ಕ್ಕೆ ಕಾರಣವಾಯಿತು. ಕೋಷ್ಟಕ 2 ಮತ್ತು 3 ರಲ್ಲಿ ಕಿತ್ತೂರು+ಮಧ್ಯ ಕರ್ನಾಟಕ ಪ್ರದೇಶದಲ್ಲಿ (ಹೆಚ್ಚಿನ ಲಿಂಗಾಯತ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ) ಸ್ಥಾನ/ಮತ ಹಂಚಿಕೆ ಎರಡರಲ್ಲೂ ಬಿಜೆಪಿಯ ಗರಿಷ್ಠ ನಷ್ಟವು ಈ ಅಂಶದಿಂದಾಗಿ ಬಿಜೆಪಿಯು ಭಾರೀ ಪ್ರಮಾಣದಲ್ಲಿ ಸೋತಿದೆ ಎಂದು ಸೂಚಿಸುತ್ತದೆ. ಅನೇಕ ಸಮೀಕ್ಷೆಗಳು ಈ ಅಂಶವನ್ನು ನೇರವಾಗಿ ದೃಢಪಡಿಸಿವೆ. ಆದರೆ ಇದು ತಪ್ಪಿಸಬಹುದಾಗಿದ್ದ 'ಅಪಘಾತ'ಕ್ಕಿಂತ ಹೆಚ್ಚಾಗಿ ಬಿಜೆಪಿಯ ರಾಜಕೀಯ ವ್ಯೂಹ–ತಂತ್ರಗಾರಿಕೆಯ ಕುರುಡು–ಗಲ್ಲಿಯನ್ನು ಪ್ರತಿನಿಧಿಸುತ್ತದೆ.


ಸೀಟು ಹಂಚಿಕೆಯಲ್ಲಿ 'ಗುಜರಾತ್ ಮಾದರಿ' ಅಂದರೆ ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸುವುದು ಮತ್ತು 'ಹೊಸ ಮುಖ' ತರುವುದು, ಆಚರಣೆಯಲ್ಲಿ ದಯನೀಯವಾಗಿ ವಿಫಲವಾಗಿದೆ. ಹಾಲಿ ಶಾಸಕರ ಪೈಕಿ 1/3 ಭಾಗದಷ್ಟು ಶಾಸಕರು ಗೆದ್ದಿದ್ದರೆ, ಕೇವಲ 1/5ರಷ್ಟು 'ತಾಜಾ ಮುಖ'ಗಳು ಮಾತ್ರ ಗೆದ್ದಿದ್ದಾರೆ. ಈ ಮಾದರಿ ಬಹುಶಃ ಬರಿಯ ನೆಪವಾಗಿತ್ತು ಅಥವಾ ವಾಸ್ತವ ಗೊತ್ತಿಲ್ಲದ ನಾಯಕರ ಬಾಲಿಶ ತಂತ್ರವಾಗಿತ್ತು ಎಂಬುದು ಸ್ಪಷ್ಟವಾಗಿದೆ.

ಕೊನೆಯ 2 ವಾರಗಳ ಚುನಾವಣಾ ಪ್ರಚಾರದಲ್ಲಿ, ಆಡಳಿತ ವಿರೋಧಿ ಅಲೆಯನ್ನು ಮೀರಿ ನಿಲ್ಲಬಲ್ಲ 'ಮೋದಿ ಮ್ಯಾಜಿಕ್'ನ ಪಾತ್ರದ ಬಗ್ಗೆ ಬಿಜೆಪಿಯೂ ಅತಿಯಾದ ವಿಶ್ವಾಸ ಹೊಂದಿತ್ತು. ಹಲವು ಅಧಿಕೃತ ಮೆಗಾ ಉದ್ಘಾಟನೆ/ಘೋಷಣೆಗಳ ಹೊರತಾಗಿ 18 ರ್ಯಾಲಿಗಳು ಮತ್ತು 5 ರೋಡ್ ಶೋಗಳಲ್ಲಿ ಪ್ರಧಾನಿ ಮೋದಿ ಭಾಗವಹಿಸಿದ್ದರು. ಆದರೆ ಬೆಂಗಳೂರು ನಗರವನ್ನು ಹೊರತುಪಡಿಸಿದರೆ ಅವುಗಳಲ್ಲಿ ಯಾವುದೂ ಹೆಚ್ಚು ಕೆಲಸ ಮಾಡಿಲ್ಲ ಎಂದು ಅವರ ಪ್ರವಾಸದ ಕ್ಷೇತ್ರಗಳ ವಿಶ್ಲೇಷಣೆಯಿಂದ ತಿಳಿದುಬಂದಿದೆ. ಶಾ ವಿಷಯದಲ್ಲೂ ಇದು ನಿಜ. 'ಡಬಲ್ ಇಂಜಿನ್' ಎಂಬ ಮೋದಿ–ಶಾ ಘೋಷಣೆಯು ಕೇವಲ ಒಂದು 'ದುರ್ಬಲ ಅಥವಾ ತುಕ್ಕು ಹಿಡಿದ ಎಂಜಿನ್' ನಿಂದಾಗಿ ಮೋದಿಯ ಬೆಂಬಲಿಗರಲ್ಲೂ ಕೆಲಸ ಮಾಡಲಿಲ್ಲ. ಭ್ರಷ್ಟಾಚಾರದ ವಿರುದ್ಧ ಅವರ ವಾಗ್ದಾಳಿ ಮತ್ತು ಕಾಂಗ್ರೆಸ್ನ 'ಪರಿವಾರ–ವಾದ' ಕೂಡ ಟೊಳ್ಳಾಗಿತ್ತು. 'ನಂದಿನಿ–ಅಮುಲ್ ವಿಲೀನ'ದ ಶಾ ಘೋಷಣೆಯನ್ನು ಕಾಂಗ್ರೆಸ್ ಸರಿಯಾಗಿ ಬಳಸಿತು ಮತ್ತು ಅದು ಬಿಜೆಪಿ ವಿರುದ್ಧ ಕೆಲಸ ಮಾಡಿತು. ಅದು 'ಕನ್ನಡದ ಹೆಮ್ಮೆ' ಮತ್ತು ಪ್ರಾದೇಶಿಕ ಸ್ವಾಯತ್ತತೆಯ ಮೇಲಿನ ಬಿಜೆಪಿ ದಾಳಿಯ ಸಂಕೇತವಾಯಿತು.

ಮೇಲಿನ ಪಟ್ಟಿ ಮಾಡಲಾದ ಅಂಶಗಳ ಹೊರತಾಗಿಯೂ, ಬಿಜೆಪಿಯು ಅಂತಹ ಸೋಲನ್ನು ತಪ್ಪಿಸಲು ಮತ್ತು 'ಸರ್ಕಾರ ರಚಿಸುವ' ಸ್ಥಾನದಲ್ಲಿರಬಹುದಾಗಿತ್ತು. ಬಿಜೆಪಿ ಹಲವು ರಾಜ್ಯಗಳಲ್ಲಿ ಇದನ್ನು ಮಾಡಿದೆ. ಆದರೆ ಈ ಬಾರಿ, ಕಾಂಗ್ರೆಸ್ ರೂಪದಲ್ಲಿ ಸಂಘಟಿತ ಪ್ರೇರಿತ ಆಕ್ರಮಣಕಾರಿ ವಿರೋಧವನ್ನು ಬಿಜೆಪಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಜೆಡಿ(ಎಸ್) ನ ಸಂದಿಗ್ಧ ನೀತಿ ಮತ್ತು ದೌರ್ಬಲ್ಯಗಳು ಬಿಜೆಪಿ ವಿರುದ್ಧ ಮತ್ತಷ್ಟು ಕೆಲಸ ಮಾಡಿತು.

ಕಾಂಗ್ರೆಸ್ ನ ಭಾರೀ ವಿಜಯಕ್ಕೆ ಕಾರಣಗಳೇನು?

ಕಾಂಗ್ರೆಸ್ ತನ್ನ ವ್ಯೂಹ ಮತ್ತು ತಂತ್ರಗಳನ್ನು ಚೆನ್ನಾಗಿ ರೂಪಿಸಿತ್ತು. ಮೋದಿ ಅಥವಾ ಶಾ ಮೇಲಿನ ವೈಯಕ್ತಿಕ ದಾಳಿಯನ್ನು ಮತ್ತು



ಕೃಪೆ: ಸತೀಶ್ ಆಚಾರ್ಯ

ಯಾವುದೇ ರಾಷ್ಟ್ರೀಯ ಸಮಸ್ಯೆಗಳನ್ನು ಅದರ ಪ್ರಚಾರ ತಂತ್ರವು ಒಳಗೊಂಡಿರಲಿಲ್ಲ. ಭಾವನಾತ್ಮಕ/ವೈಯಕ್ತಿಕ ಸಮಸ್ಯೆಗಳಿಗೆ ಸೆಳೆಯಲು ಬಿಜೆಪಿ ಅಥವಾ ಪ್ರಧಾನಿ ಮೋದಿಯ ಆಮಿಷಕ್ಕೂ ಬಲಿಯಾಗಲಿಲ್ಲ. ಇದು ಆರಂಭದಲ್ಲಿ ನಾಲ್ಕು 'ಗ್ಯಾರಂಟಿ'ಗಳ ಕಲ್ಯಾಣ ಕ್ರಮಗಳ ಮೇಲೆ ಪ್ರಚಾರವನ್ನು ಕೇಂದ್ರೀಕರಿಸಿತು ಮತ್ತು ನಂತರ ಐದನೇ ಸ್ಥಾನಕ್ಕೆ ವಿಸ್ತರಿಸಿತು. ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ, ಆಹಾರ ಅಭದ್ರತೆ – ಜನರ ಮೇಲೆ ಪರಿಣಾಮ ಬೀರುವ ಸಮಸ್ಯೆಗಳ ಬಗ್ಗೆ ಇದು ಬಿರುಸಿನ ಪ್ರಚಾರವನ್ನು ನಡೆಸಿತು. ಬಿಜೆಪಿಯ ಹಲವು ರೈತ ವಿರೋಧಿ, ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳು/ ಕಾನೂನುಗಳನ್ನು ಅದು ವಿಧಾನಸಭೆಯಲ್ಲಿ ವಿರೋಧಿಸಿತು. ಅದು ತನ್ನ ಸಾಂಸ್ಥಿಕ ಸಮಸ್ಯೆಗಳನ್ನು ಪರಿಹರಿಸಿತು ಮತ್ತು ಕನಿಷ್ಠ ಅದು ಪ್ರಚಾರಕ್ಕೆ ಅಡ್ಡಿಯಾಗಲು ಅವಕಾಶ ನೀಡಲಿಲ್ಲ. ಮುಖ್ಯಮಂತ್ರಿ ಅಭ್ಯರ್ಥಿಯನ್ನು ಹೆಸರಿಸದೆ ಸ್ಥಳೀಯ ನಾಯಕತ್ವಕ್ಕೆ ಒತ್ತು ನೀಡಿತು. ಬಿಜೆಪಿ ಸರಕಾರವನ್ನು ಎಡವಿದಾಗ ಅದನ್ನು ಕಟಕಟೆಯಲ್ಲಿ ನಿಲ್ಲಿಸುವ ಯಾವ ಅವಕಾಶವನ್ನೂ ಬಿಡಲಿಲ್ಲ ಉದಾ. ಮೀಸಲಾತಿ ನೀತಿ, ನಂದಿನಿ–ಅಮುಲ್. ಪ್ರಚಾರದ ಬಹುಪಾಲು ಜೆಡಿ(ಎಸ್) ಮೇಲೆ ದಾಳಿ ಮಾಡಲು ಹೋಗಲಿಲ್ಲ. ಆದರೆ ಅಸ್ಥಿರ ಮತ್ತು ಭ್ರಷ್ಟ ಸರ್ಕಾರವನ್ನು ತಪ್ಪಿಸಲು ಪೂರ್ಣ ಬಹುಮತವನ್ನು ಕಾಂಗ್ರೆಸ್ ಗೆ ನೀಡುವಂತೆ ಜನರಿಗೆ ಮನವಿ ಮಾಡಿತು

ಭಾರತ್ ಜೋಡೋ ಯಾತ್ರೆಯು ಕಾಂಗ್ರೆಸ್ ನ ಪ್ರಭಾವವನ್ನು ವಿಸ್ತರಿಸಲು ಮತ್ತು ಅದನ್ನು ಬೆಂಬಲಿಸಲು ನಾಗರಿಕ ಸಮಾಜವನ್ನು ಆಕರ್ಷಿಸಲು ಸಹಾಯ ಮಾಡಿತು. ಕಾಂಗ್ರೆಸ್ ಪ್ರಚಾರ ಸಾಮೂಹಿಕ ಸಂಪರ್ಕ ಮತ್ತು ದೊಡ್ಡ ಸಭೆಗಳು/ರ್‍ಯಾಲಿಗಳ ವಿವೇಚನಾಯುಕ್ತ ಮಿಶ್ರಣವನ್ನು ಹೊಂದಿತ್ತು. ಇದು ಅಭಿಯಾನದ ಉದ್ದಕ್ಕೂ ಮುಖ್ಯವಾಗಿ ಮಹಿಳೆಯರು ಮತ್ತು ಯುವಕರನ್ನು ಗುರಿಯಾಗಿಸಿಕೊಂಡು ಅದರ 'ಗ್ಯಾರಂಟಿ'ಗಳ ಮೇಲೆ ಕೇಂದ್ರೀಕರಿಸಿದೆ. ಇದು ಪ್ರಚಾರದ ಮೂಲಕ ಕೋಮು ಸೌಹಾರ್ದತೆಗೆ ಒತ್ತು ನೀಡಿತು ಮತ್ತು ಅಗತ್ಯವಿದ್ದಾಗ ಕೋಮು ಧ್ರುವೀಕರಣಕ್ಕಾಗಿ ಬಿಜೆಪಿಯ ಮೇಲೆ ದಾಳಿ ಮಾಡಿತು. ಉದಾಹರಣೆಗೆ, ಇದು ಮುಸ್ಲಿಂ ಮೀಸಲಾತಿಯನ್ನು ರದ್ದುಗೊಳಿಸುವುದನ್ನು ಖಂಡಿಸಿ ಮತ್ತು ಅದನ್ನು ಬಲವಾಗಿ ಸಮರ್ಥಿಸಿತು. ಅದರ ಪ್ರಣಾಳಿಕೆಯು ಸಮತೋಲಿತವಾಗಿತ್ತು ಮತ್ತು ಹೆಚ್ಚಿನ ವಿಭಾಗಗಳನ್ನು ಪರಿಣಾಮಕಾರಿಯಾಗಿ ಒಳಗೊಂಡಿತ್ತು. ಪ್ರಣಾಳಿಕೆಯಲ್ಲಿ 'ಪಿಎಫ್ಐ ಮತ್ತು ಭಜರಂಗದಳವನ್ನು ಸಮೀಕರಿಸುವುದು' ಮತ್ತು 'ಅಗತ್ಯವಿದ್ದರೆ ಅದನ್ನು ನಿಷೇಧಿಸಿ' ಎಂಬ ಅಂಶ ಬಿಜೆಪಿಯಿಂದ ತೀವ್ರ ದಾಳಿಗೊಳಗಾದಾಗಲೂ ಅದನ್ನು ದೃಢವಾಗಿ ಎದುರಿಸಿತು. ಅದನ್ನು ದೊಡ್ಡ ವಿವಾದವಾಗಿ ಸ್ಫೋಟಿಸುವ ಬಿಜೆಪಿಯ ಯತ್ನ ಯಶಸ್ವಿಯಾಗಲಿಲ್ಲ. ಸೀಟು ಹಂಚಿಕೆಯಲ್ಲಿ ಕಾಂಗ್ರೆಸ್ ಸವಾಲುಗಳನ್ನು ಎದುರಿಸಿದರೂ (ಅದರ ಗುಂಪುಗಾರಿಕೆ ತಲೆ ಎತ್ತಿದಾಗ), ಅದನ್ನು ಕನಿಷ್ಠ ಹಾನಿಗೆ ಸೀಮಿತಗೊಳಿಸುವಲ್ಲಿ ಯಶಸ್ವಿಯಾಯಿತು.

ನವ–ಉದಾರವಾದಿ ನೀತಿಗಳಿಂದ ಉಂಟಾದ ತೀವ್ರ ಸಂಕಷ್ಟದ, ಬಿಜೆಪಿ ಸರ್ಕಾರದ ವಿರುದ್ಧ ಬೃಹತ್ ಆಡಳಿತ ವಿರೋಧಿ ಅಲೆಯ ಮತ್ತು ಬಿಜೆಪಿ ಪಕ್ಷದಲ್ಲಿನ ಅರಾಜಕತೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ತನ್ನ ಪ್ರಚಾರದಲ್ಲಿ ಕಲ್ಯಾಣ ಕ್ರಮಗಳ ಐದು 'ಗ್ಯಾರಂಟಿ'ಗಳ ಮೇಲೆ ಕೇಂದ್ರೀಕರಿಸಿದ್ದು ಅದರ ಯಶಸ್ಸಿಗೆ ಪ್ರಮುಖ ಕಾರಣವಾಯಿತು. ಟೇಬಲ್ 2 ಮತ್ತು 3 ಅಂಕಿಅಂಶಗಳು ತೋರಿಸಿದಂತೆ ಕಾಂಗ್ರೆಸ್ ಎಲ್ಲಾ ಪ್ರದೇಶಗಳಲ್ಲಿ ಬೆಂಬಲವನ್ನು ಪಡೆದುಕೊಂಡಿದೆ. ಈ ಚುನಾವಣೆಯಲ್ಲಿ ಎಸ್ಸಿ, ಎಸ್ಟಿ, ಮುಸ್ಲಿಂ, ಒಬಿಸಿ ವಿಭಾಗಗಳನ್ನು ಒಳಗೊಂಡ ಸಾಮಾಜಿಕ ಒಕ್ಕೂಟವನ್ನು ನಿರ್ಮಿಸಲು ಮತ್ತು ಕ್ರೋಢೀಕರಣ ಕಾಂಗ್ರೆಸ್ ಗೆ ಸಾಧ್ಯವಾಯಿತು ಎಂದು ಹಲವು ಸಮೀಕ್ಷೆಗಳು ಸೂಚಿಸಿವೆ. ಅದಕ್ಕೆ ಲಿಂಗಾಯತ ಮತ್ತು ಒಕ್ಕಲಿಗ ವಿಭಾಗಗಳಿಂದಲೂ ಹೆಚ್ಚಿನ ಬೆಂಬಲ ಸಿಕ್ಕಿತು. ಆದರೆ ಎಲ್ಲಾ ಪ್ರದೇಶಗಳಲ್ಲಿ ಎಸ್ಸಿ, ಎಸ್ಟಿ, ಮುಸ್ಲಿಂ, ಒಬಿಸಿ ವಿಭಾಗಗಳ ಕ್ರೋಢೀಕರಣ ಕಾಂಗ್ರೆಸ್ ಗೆ ಹೆಚ್ಚು ಸಹಾಯ ಮಾಡಿತು ಎಂದು ಸಮೀಕ್ಷೆಗಳಿಂದ ತಿಳಿದುಬಂದಿದೆ. ಬಿಜೆಪಿ ವಿರುದ್ಧದ 'ಲಿಂಗಾಯತ ಕೋಪ' ಒಂದು ಅಂಶವಾಗಿತ್ತು, ಆದರೆ ಏಕೈಕ ಅಥವಾ ಪ್ರಮುಖ ಅಂಶವಲ್ಲ. ಎಲ್ಲಾ ಆರ್ಥಿಕ ಮತ್ತು ಸಾಮಾಜಿಕ ಶ್ರೇಣಿಗಳಲ್ಲಿ ಮಹಿಳೆಯರು, ಯುವಕರು, ಹೆಚ್ಚು ಕೆಳಸ್ತರದಲ್ಲಿರುವ ಜಾತಿ/ವರ್ಗಗಳಲ್ಲಿ ಹೆಚ್ಚಿನ ಬೆಂಬಲದ ಪಾಲನ್ನು ಖಚಿತಪಡಿಸಿಕೊಳ್ಳಲು ಅದರ 'ಗ್ಯಾರಂಟಿ'ಗಳಿಂದಾಗಿ ಸಾಧ್ಯವಾಯಿತೆಂದು ಸಮೀಕ್ಷೆಗಳು ಸೂಚಿಸಿವೆ. ಎಲ್ಲ ಜಾತಿ/ವರ್ಗಗಳಲ್ಲಿ ಮಧ್ಯಮ ಮತ್ತು ಉನ್ನತ ವರ್ಗಗಳಿಂದ ಬಿಜೆಪಿಗೆ ಬೆಂಬಲ ದೊರಕಿತು. ಗ್ರಾಮೀಣ ಪ್ರದೇಶದಲ್ಲಿ ಕಾಂಗ್ರೆಸ್ ಮತಗಳು ಶೇ.6.2ರಷ್ಟು ಹೆಚ್ಚಿದ್ದರೆ, ಬಿಜೆಪಿ ಮತಗಳು ಶೇ.3.6ರಷ್ಟು ಕಡಿಮೆಯಾಗಿದೆ.

ಜೆಡಿಎಸ್ ಏಕೆ ಕುಸಿಯುತ್ತಿದೆ?

ಜೆಡಿ(ಎಸ್) ಏಕಕಾಲದಲ್ಲಿ ತಾನು "ರಾಷ್ಟ್ರೀಯ ಪಕ್ಷಗಳನ್ನು ವಿರೋಧಿಸುತ್ತದೆ" ಮತ್ತು "ಎರಡೂ ಪಕ್ಷಗಳು ನಮ್ಮನ್ನು ಸಂಪರ್ಕಿಸುತ್ತಿವೆ" ಎಂದು ಹೇಳುವ ಮೂಲಕ ಮತದಾರರನ್ನು ಗೊಂದಲಕ್ಕೀಡು ಮಾಡಿತು. ಜೆಡಿ(ಎಸ್) ಬರಿಯ ಒಂದು ಕುಟುಂಬದ, ಒಂದು ಸಮುದಾಯದ, ಒಂದು ಪ್ರದೇಶದ ಪಕ್ಷವಲ್ಲ ಎಂದು ತೋರಿಸಿಕೊಳ್ಳುವ ಪ್ರಯತ್ನವನ್ನೂ ಅದು ಮಾಡಲಿಲ್ಲ. ಸೀಟು ಹಂಚಿಕೆಯಲ್ಲಿ ಅದರ ಕುಟುಂಬದೊಳಗಿನ ದೀರ್ಘಕಾಲ ಸಾರ್ವಜನಿಕವಾಗಿ ನಡೆದ ವಿವಾದಗಳು ಪಕ್ಷದ ವಿರುದ್ಧ ಕೆಟ್ಟ ಪ್ರಚಾರವನ್ನು ನೀಡಿದವು. ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಟಿಕೆಟ್ ನಿರಾಕರಿಸಿದವರಿಗೆ ಟಿಕೆಟ್ ನೀಡುವ ಅದರ ಸೀಟು ಹಂಚಿಕೆ ನೀತಿಯು ಅದರ ಇಮೇಜ್ಗೆ ಸಹಾಯ ಮಾಡಲಿಲ್ಲ. ಹಿರಿಯ ನಾಯಕ ದೇವೇಗೌಡ ಅವರ ಆರೋಗ್ಯ ಹದಗೆಟ್ಟ ಹಿನ್ನೆಲೆಯಲ್ಲಿ ಎಚ್.ಡಿ. ಕುಮಾರಸ್ವಾಮಿ ಮಾತ್ರ ಸ್ಟಾರ್ ಪ್ರಚಾರಕರಾಗಿದ್ದು ವ್ಯಾಪಕ ಪ್ರಚಾರ ನಡೆಸಲಾಗಿರಲಿಲ್ಲ. ಅಭ್ಯರ್ಥಿಗಳ ಕಳಪೆ ಆಯ್ಕೆ ಅದರ ವಿಶ್ವಾಸಾರ್ಹತೆಯನ್ನು ಕುಂದಿಸಿತು. ಜಾತ್ಯತೀತತೆಯನ್ನು ಪ್ರತಿಪಾದಿಸುತ್ತಲೇ ಬಿಜೆಪಿಯೊಂದಿಗೆ ಅದರ ಹಿಂದಿನ ಅವಕಾಶವಾದಿ ಮೈತ್ರಿ ಮತ್ತು ಪ್ರಸ್ತುತ ಸಂದರ್ಭದಲ್ಲಿ ಅದನ್ನು ತಳ್ಳಿಹಾಕದಿರುವುದು ಕೂಡ ಬಿಜೆಪಿ ವಿರುದ್ಧದ ಬೃಹತ್ ಆಡಳಿತ ವಿರೋಧದ ಹಿನ್ನೆಲೆಯಲ್ಲಿ ಅದಕ್ಕೆ ಮುಳುವಾಯಿತು. ಅದರ ಭರವಸೆಗಳು ಮತ್ತು ಪ್ರಣಾಳಿಕೆಗಳು ಉತ್ತಮವಾಗಿದ್ದರೂ ಅದರ ಪ್ರಸ್ತುತತೆ ಪ್ರಶ್ನಾರ್ಹವಾಗಿತ್ತು ಮತ್ತು ಜನಸಾಮಾನ್ಯರಿಗೆ ಅದು ಬಹುಪಾಲು ತಲುಪಲಿಲ್ಲ.

ಕೋಷ್ಟಕಗಳು 1, 2 ಮತ್ತು 3 ರಿಂದ ಸ್ಪಷ್ಟವಾಗುವಂತೆ JD(S) ತನ್ನ ಬಲವಾದ ನೆಲೆಯಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಪುಟ 10 ಕ್ಕೆ

ಮಣಿಪುರದಲ್ಲಿ ಶಾಂತಿ ಮರುಸ್ಥಾಪನೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು

ಡಬಲ್ ಇಂಜಿನ್ ಸರಕಾರಗಳ ಧ್ರುವೀಕರಣದ ಕೃತ್ಯಗಳು ಅಮಾಯಕರ ಸಾವು–ನೋವಿಗೆ ಕಾರಣವಾಗುವ ಹಿಂಸಾಚಾರದತ್ತ ಒಯ್ಯುತ್ತವೆ–ಯೆಚೂರಿ

ದೊಡ್ಡ ಪ್ರಮಾಣದ ಹಿಂಸಾಚಾರ ಮತ್ತು ಜನಾಂಗೀಯ ಘರ್ಷಣೆಗಳನ್ನು ಕಾಣುತ್ತಿರುವ ಮಣಿಪುರದ ಪರಿಸ್ಥಿತಿಯು ಆತಂಕಕಾರಿ ಪ್ರಮಾಣವನ್ನು ತಲುಪಿದೆ. ಐದು ಜಿಲ್ಲೆಗಳಾದ್ಯಂತ ಮನೆಗಳ ಧ್ವಂಸ, ಬೆಂಕಿ ಹಚ್ಚುವುದು ಮತ್ತು ಆಸ್ತಿಪಾಸ್ತಿಗಳು, ಚರ್ಚ್‌ಗಳು ಮತ್ತು ದೇವಾಲಯಗಳ ಮೇಲೆ ದಾಳಿಗಳು ನಡೆದಿವೆ. ಘರ್ಷಣೆಗಳು ಹಲವಾರು ಸಾವುಗಳಿಗೆ ಕಾರಣವಾಗಿವೆ.

ಸೇನೆ ಮತ್ತು ಕೇಂದ್ರ ಪೊಲೀಸ್ ಪಡೆಗಳ ನಿಯೋಜನೆಯೊಂದಿಗೆ, ಪರಿಸ್ಥಿತಿಯನ್ನು ಸ್ವಲ್ಪ ನಿಯಂತ್ರಣಕ್ಕೆ ತರಲಾಗಿದೆ, ಆದರೂ ಘಟನೆಗಳು ಇನ್ನೂ ಸಂಭವಿಸುತ್ತಿವೆ. ಇನ್ನೂ ಜನರು ತಮ್ಮ ಮನೆಗಳಲ್ಲಿ ಅಥವಾ ಪ್ರದೇಶಗಳಲ್ಲಿ ಸಿಲುಕಿಕೊಂಡಿದ್ದಾರೆ ಮತ್ತು ಸಾವಿರಾರು ಜನರು ತಮ್ಮ ಮನೆಗಳಿಂದ ಸ್ಥಳಾಂತರಗೊಂಡಿದ್ದಾರೆ.

ಬಿಜೆಪಿ ರಾಜ್ಯ ಸರ್ಕಾರವು ರಾಜ್ಯದಲ್ಲಿ ಬೆಳೆದು ಬರುತ್ತಿದ್ದ ಪರಿಸ್ಥಿತಿಯನ್ನು ಮುಂಗಾಣುವಲ್ಲಿ ವಿಫಲವಾಗಿದೆ ಮತ್ತು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಮಧ್ಯಪ್ರವೇಶಿಸುವ ಪ್ರಯತ್ನದಲ್ಲಿ ವಿಳಂಬ ಮಾಡಿದೆ. ಅರಣ್ಯ ರಕ್ಷಣೆಯ ಹೆಸರಿನಲ್ಲಿ ಗುಡ್ಡಗಾಡು ಪ್ರದೇಶದಲ್ಲಿರುವ ಜನರನ್ನು ದೊಡ್ಡ ಪ್ರಮಾಣದಲ್ಲಿ ಒಕ್ಕಲೆಬ್ಬಿಸಲು ಮತ್ತು 'ಹೊರಗಿನವರು' ಎಂದು ಹೇಳಲ್ಪಟ್ಟ ಜನಗಳನ್ನು ಹೊರಹಾಕಲು ಆದೇಶಿಸಿದ ರಾಜ್ಯ ಸರ್ಕಾರದ ನೀತಿಯು ಭಯದ ಉಲ್ಬಣಕ್ಕೆ ಕಾರಣವಾಯಿತು ಮತ್ತು ಕೆಲವು ಗುಡ್ಡಗಾಡು ಜಿಲ್ಲೆಗಳಲ್ಲಿ ವ್ಯಾಪಕ ಪ್ರತಿಭಟನೆಗೆ ಕಾರಣವಾಯಿತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಈ ತೀಕ್ಷ್ಣವಾದ ಮತ್ತು ಹಿಂಸಾತ್ಮಕ ಸಂಘರ್ಷಕ್ಕೆ ಕಾರಣವಾದ ಸಮಸ್ಯೆಗಳನ್ನು ಪರಿಹರಿಸುವ ಮೊದಲು ಶಾಂತಿ ಮತ್ತು ಸಹಜ ಸ್ಥಿತಿಯನ್ನು ಪುನಃಸ್ಥಾಪಿಸುವುದು ತಕ್ಷಣದ ಕಾರ್ಯವಾಗಿದೆ. ರಾಜ್ಯ ಸರ್ಕಾರ ಕೇಂದ್ರದ ನೆರವಿನೊಂದಿಗೆ ನಿರಾಶ್ರಿತರಿಗೆ ಅವರ ವಾಸ್ತವ್ಯದ ಸ್ಥಳಗಳಲ್ಲಿ ಪುನರ್ವಸತಿ ಕಲ್ಪಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂದಿರುವ ಪೊಲಿಟ್‌ಬ್ಯುರೊ, ಸನ್ನಿವೇಶವನ್ನು ಒಗ್ಗಟ್ಟಿನಿಂದ ನಿಭಾಯಿಸಲು ಸಾಧ್ಯವಾಗುವಂತೆ ಒಂದು ಸರ್ವಪಕ್ಷ ಸಭೆ ಕರೆಯಬೇಕು ಎಂದು ರಾಜ್ಯ ಸರಕಾರಕ್ಕೆ ಹೇಳಿದೆ.

ಈ ಬಗ್ಗೆ ಟ್ವೀಟ್ ಮಾಡುತ್ತ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ "ಮುನ್ಸೂಚನೆಗಳನ್ನು ನೋಡಿ ಕ್ರಿಯೆಗಿಳಿಯದಿರುವುದು ಬಿಜೆಪಿಯ ಕ್ರಿಮಿನಲ್ ನಿರ್ಲಕ್ಷ್ಯವನ್ನು ತೋರಿಸುತ್ತದೆ ಎಂದಿದ್ದಾರೆ. ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದನ್ನೇ ಪ್ರಧಾನ ಕೆಲಸವೆಂದು ಅದರಲ್ಲೇ ಮುಳುಗಿರುವ ಈ ಡಬ್ಬಲ್ ಇಂಜಿನ್ ಸರಕಾರಗಳು ರಾಜ್ಯಗಳನ್ನು ಇಂತಹ ಪರಸ್ಪರ ಕೊಳ್ಳಿಯಿಡುವ ಹಿಂಸಾಚಾರಕ್ಕೆ ತಳ್ಳುತ್ತವೆ, ಇದು ಮುಗ್ಧ ಜೀವಗಳನ್ನು ನುಂಗಿ ಹಾಕುತ್ತದೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.



ಕುಸ್ತಿಪಟುಗಳ ಹೋರಾಟಕ್ಕೆ ಕಾರ್ಮಿಕ ಸಂಘಟನೆಗಳ ಬೆಂಬಲ

ಬ್ರಿಜ್ ಭೂಷಣ್ ಶರಣ್ ಸಿಂಗ್ ಬಂಧನಕ್ಕೆ ಆಗ್ರಹ

ಎರಡು ಎಫ್‌ಐಆರ್‌ಗಳ ಪ್ರಕಾರ, ಬಿಜೆಪಿ ಸಂಸದ ಮತ್ತು ಭಾರತೀಯ ಕುಸ್ತಿಪಟುಗಳ ಒಕ್ಕೂಟದ ಅಧ್ಯಕ್ಷರಾದ ಬ್ರಿಜ್ ಭೂಷಣ್ ಶರಣ್ ಸಿಂಗ್ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ. ಆತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಯುವ ಮಹಿಳಾ ಕುಸ್ತಿಪಟುಗಳ ಆಗ್ರಹ ಸಮರ್ಥನೀಯವಾಗಿದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಆತನಿಂದ ಅನಗತ್ಯ ಒತ್ತಡಕ್ಕೆ ಮಣಿಯದ ವಿಚಾರಣೆ ನಡೆಸಲು ಸಾಧ್ಯವಾಗುವಂತೆ ಆತನನ್ನು ಕೂಡಲೇ ಬಂಧಿಸಬೇಕು ಎಂದು ವೇದಿಕೆ ಆಗ್ರಹಿಸಿದೆ.

ತಮ್ಮ ಕಠಿಣ ಪರಿಶ್ರಮದಿಂದ ಪದಕಗಳನ್ನು ಗೆದ್ದು ರಾಷ್ಟ್ರಕ್ಕೆ ಕೀರ್ತಿ ತಂದ ಈ ಯುವ ಕುಸ್ತಿಪಟುಗಳಿಗೆ ಧರಣಿ ಸ್ಥಳ–ಜಂತರ್ ಮಂತರ್‌ನಲ್ಲಿ ಎಲ್ಲಾ ಅನಾನುಕೂಲತೆಗಳನ್ನು ಸೃಷ್ಟಿಸುವ ಮೂಲಕ ಹೀನಾಯವಾಗಿ ನಡೆಸಿಕೊಳ್ಳಲಾಗಿದೆ. ಮೇ 3 ರಂದು ರಾತ್ರಿ ಅವರು ಮಳೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಮತ್ತು ತಮ್ಮ ಚಾಪೆಗಳನ್ನು ಬದಲಾಯಿಸಲು ಮತ್ತು ಕೆಲವು ಮಂಚಗಳನ್ನು ಪಡೆಯಲು ವ್ಯವಸ್ಥೆ ಮಾಡುತ್ತಿದ್ದರೆಂಬ ಕಾರಣಕ್ಕೆ ಅವರ ಮೇಲೆ ಪೊಲೀಸರು ದಾಳಿ ಮಾಡಿ ಕೆಟ್ಟದಾಗಿ ವರ್ತಿಸಲಾಗಿದೆ.

ಈ ವೇಳೆ ಮಹಿಳಾ ಪತ್ರಕರ್ತೆ ಸಾಕ್ಷಿ ಜೋಶಿ ಅವರ ಬಟ್ಟೆ ಹರಿದಿದ್ದು, ಅವರ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದಾರೆ. ಪೊಲೀಸರ ಕ್ರಮದ ಮಾಹಿತಿ ಪಡೆದ ಅವರು, ಹೋರಾಟದ ಸ್ಥಳದಿಂದ ಸತ್ಯವನ್ನು ವರದಿ ಮಾಡಲು ಸ್ಥಳಕ್ಕೆ ಬಂದಿದ್ದರು.

ಕುಸ್ತಿಪಟುಗಳು ಎತ್ತಿದ ದನಿಯು ಕಿರುಕುಳವನ್ನು ಎದುರಿಸುತ್ತಿರುವ ನಮ್ಮ ಎಲ್ಲಾ ಮಹಿಳಾ ಸಮೂಹಕ್ಕೆ ನ್ಯಾಯಕ್ಕಾಗಿ ಎತ್ತಿದ ದನಿಯಾಗಿದೆ. ಇದನ್ನು ಕೇಳಿಸಿಕೊಳ್ಳುವುದಿಲ್ಲ ಮಾತ್ರವಲ್ಲ, ಅದನ್ನು ಎಸಗಿದವರು ಅಧಿಕಾರದ ಸ್ಥಾನದಲ್ಲಿದ್ದಾಗ ಸಮಾಜದ ಪೀಡನೆ ಮತ್ತು ಕ್ರೋಧವನ್ನು ಎದುರಿಸಬೇಕಾಗುತ್ತದೆ.

ನಾವೆಲ್ಲರೂ ಈ ಯುವ ಹೋರಾಟಗಾರರೊಂದಿಗೆ ನಿಲ್ಲುತ್ತೇವೆ ಮತ್ತು ಎಲ್ಲಾ ಹಂತಗಳಲ್ಲಿ ನಮ್ಮ ಕಾರ್ಮಿಕ ಸಂಘಗಳು ಬೆಂಬಲವನ್ನು ನೀಡಬೇಕು, ಸೌಹಾರ್ದ ಕ್ರಿಯೆಗಳನ್ನು ಸಂಘಟಿಸಬೇಕು ಮತ್ತು ಪ್ರತಿಭಟನಾಕಾರರಿಗೆ ತಮ್ಮ ಬೆಂಬಲ ಸಂದೇಶಗಳನ್ನು ಕಳುಹಿಸಬೇಕು ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯು ಕರೆ ನೀಡಿದೆ.

ವಿವೇಕದ ಧ್ವನಿ ಮೇಲುಗೈ ಸಾಧಿಸುತ್ತದೆ, ಈ ಹೋರಾಟಗಾರರ ಗೆಲುವು ಸಾಮಾನ್ಯ ನಾಗರಿಕರ ವಿಜಯವಾಗುತ್ತದೆ ಎಂದು ಹಾರೈಸಿರುವ ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಈ ಹತ್ತು ಸಂಘಟನೆಗಳ ಜಂಟಿ ವೇದಿಕೆ, ತಕ್ಷಣವೇ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಬಂಧಿಸಬೇಕು, ಮತ್ತು ಎಫ್‌ಐಆರ್‌ಗಳಲ್ಲಿ ಒಂದರಲ್ಲಿ ಪೋಕ್ಸೊ ಕಾಯ್ದೆಯನ್ನು ಸಹ ಅನ್ವಯಿಸುವುದರಿಂದ ಇವುಗಳ ಪ್ರಕಾರ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಕಾರ್ಮಿಕ ಸಂಘಗಳ ಆಗ್ರಹವನ್ನು ಪುನರುಚ್ಚರಿಸಿದೆ.

ಬಿಜೆಪಿ ವಿರುದ್ಧ ಕರ್ನಾಟಕದ ಜನತೆಯ ನಿರ್ಣಾಯಕ ತೀರ್ಪು

ವಿಧಾನಸಭಾ ಚುನಾವಣೆಗಳಲ್ಲಿ ಕರ್ನಾಟಕದ ಜನತೆ ಬಿಜೆಪಿಯನ್ನು ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ. ಈ ಸೋಲು ಬಿಜೆಪಿ ಸರಕಾರದ ಒಟ್ಟು ದುರಾಡಳಿತ ಮತ್ತು ಭ್ರಷ್ಟಾಚಾರದ ಪರಿಣಾಮವಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಈ ತೀರ್ಪು ಸ್ವತಃ ಪ್ರಧಾನ ಮಂತ್ರಿ ಮೋದಿ ನೇತೃತ್ವದ ಚುನಾವಣಾ ಪ್ರಚಾರದ ಸಮಯದಲ್ಲಿ ನಡೆಸಿದ ನಂಜುಭರಿತ ಕೋಮು ಪ್ರಚಾರವನ್ನು ಜನರು ತಿರಸ್ಕರಿಸಿದ್ದಾರೆ ಎಂಬುದನ್ನು ತೋರಿಸುತ್ತದೆ.

ವಿಧಾನಸಭೆಯಲ್ಲಿ ಭಾರಿ ಬಹುಮತ ಗಳಿಸಿರುವ ಕಾಂಗ್ರೆಸ್‌ಗೆ ಪ್ರಬಲ ಅಧಿಕಾರಸ್ಥ–ವಿರೋಧಿ ಭಾವನೆ ಲಾಭ ತಂದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಿಜೆಪಿ ವಿರುದ್ಧದ ಈ ಬಲವಾದ ತೀರ್ಪಿಗಾಗಿ ಕರ್ನಾಟಕದ ಜನತೆಯನ್ನು ಅಭಿನಂದಿಸಿದೆ.

ಕರ್ನಾಟಕದ ಜನತೆಯಿಂದ ಬಿಜೆಪಿ ಸರಕಾರಕ್ಕೆ ಗೇಟ್ ಪಾಸ್....

ಪುಟ 9 ರಿಂದ

ಗಣನೀಯವಾಗಿ ಕುಸಿದಿದೆ. ಗ್ರಾಮೀಣ ಮೂಲದ ಪಕ್ಷವಾಗಿದ್ದರೂ ಸಹ ಅದರ ಗ್ರಾಮೀಣ ಮತ್ತು ಅರೆ–ಗ್ರಾಮೀಣ ಮತ–ಪಾಲು ಕ್ರಮವಾಗಿ 3.7, 5.4 % ರಷ್ಟು ಕುಸಿದಿದೆ. ಸಿ.ಎಂ. ಇಬ್ರಾಹಿಂ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೂ ಮುಸ್ಲಿಮರಲ್ಲಿ ತನ್ನ ನೆಲೆಯನ್ನು ಹೆಚ್ಚಿಸಿಕೊಳ್ಳುವ ಅದರ ಪ್ರಯತ್ನ ಯಶಸ್ವಿಯಾಗಲಿಲ್ಲ. ಬಿಜೆಪಿಯೊಂದಿಗಿನ ಅದರ ಆಗಾಗ್ಗೆ ಸರಸಲ್ಲಾಪ ಮುಸ್ಲಿಮರಲ್ಲಿ ಯಾವುದೇ ವಿಶ್ವಾಸವನ್ನು ಉಂಟುಮಾಡುವುದಿಲ್ಲ.

ಕರ್ನಾಟಕ ಜನಾದೇಶದ ಪರಿಣಾಮಗಳೇನು?

ಈ ಐತಿಹಾಸಿಕ ಜನಾದೇಶದಿಂದ ಮುಂಬರುವ ರಾಜಸ್ಥಾನ, ಛತ್ತೀಸ್ಗಢದಂತಹ ಇತರ ರಾಜ್ಯಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಪಾಠ ಕಲಿಯಬೇಕಾಗಿದೆ. ಕಾಂಗ್ರೆಸ್ ತನ್ನ ಭರವಸೆಗಳನ್ನು ಅತ್ಯಂತ ಪ್ರಾಮಾಣಿಕತೆ ಮತ್ತು ಶ್ರದ್ಧೆಯಿಂದ ಜಾರಿಗೊಳಿಸಬೇಕು. ಪ್ರಣಾಳಿಕೆಯಲ್ಲಿನ ತನ್ನ ಇತರ ಭರವಸೆಗಳನ್ನೂ ತ್ವರಿತವಾಗಿ ಜಾರಿಗೊಳಿಸಬೇಕು. ಇದು ಈ ವರ್ಷ ಇತರ ರಾಜ್ಯಗಳ ಚುನಾವಣೆಗಳು ಮತ್ತು ಮುಂದಿನ ವರ್ಷ ನಡೆಯುವ ಅತ್ಯಂತ ಪ್ರಮುಖ ಲೋಕಸಭೆ ಚುನಾವಣೆಗಳ ಮೇಲೆ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಭಾರೀ ಪರಿಣಾಮ ಬೀರುತ್ತದೆ.

ಬಿಜೆಪಿ ಸೋತಿರಬಹುದು, ಆದರೆ ಅದರ ಸಾಮಾಜಿಕ ನೆಲೆ, ಸಂಘಟನಾ ಶಕ್ತಿ ಹಾಗೇ ಉಳಿದಿದೆ ಎಂಬುದನ್ನು ಮರೆಯುವಂತಿಲ್ಲ. ಉಡುಪಿ ಮತ್ತು ದಕ್ಷಿಣ ಕನ್ನಡದ ಕರಾವಳಿ ಜಿಲ್ಲೆಗಳಲ್ಲಿ ಅದರ ಭದ್ರಕೋಟೆಗಳು ಅಬೇಧ್ಯವಾಗಿವೆ ಮತ್ತು ಇನ್ನೂ ಕಟುವಾದ ಹಿಂದುತ್ವ ಬೇಡುತ್ತಿವೆ. ಬಿಜೆಪಿ ತನ್ನ ಈ ಲ್ಯಾಬ್ ಮಾದರಿಯನ್ನು ರಾಜ್ಯದ ಇತರ ಜಿಲ್ಲೆಗಳಲ್ಲಿ ಮತ್ತು ಹಿಂದೆಂದಿಗಿಂತಲೂ ಹೆಚ್ಚು ಹುರುಪಿನಿಂದ ಪುನರಾವರ್ತಿಸಬಹುದು. ಆದ್ದರಿಂದ ಎಡ, ಪ್ರಜಾಸತ್ತಾತ್ಮಕ ಜಾತ್ಯತೀತ ಶಕ್ತಿಗಳು ಪ್ರಚಾರವನ್ನು ಮುನ್ನಡೆಸುವ ಪ್ರಬಲ ಜಾಲದೊಂದಿಗೆ ತಳಮಟ್ಟದಲ್ಲಿ ಅವುಗಳನ್ನು ಎದುರಿಸಸಬೇಕಾಗಿದೆ. ಕೋಮುವಾದಿ ಸಂಘಟನೆಗಳಿಗೆ ಬೆಂಬಲವನ್ನು, ಆಡಳಿತ ಮತ್ತು ರಾಜ್ಯ ಸಂಸ್ಥೆಗಳಲ್ಲಿ ಕೋಮುವಾದೀಕರಣವನ್ನು ಕಿತ್ತೊಗೆಯುವ ಕ್ರಮಗಳ ಮೂಲಕ ಇದಕ್ಕೆ ಕಾಂಗ್ರೆಸ್ ಸರಕಾರ ಬೆಂಬಲಿಸಬೇಕು.

ಜೆಡಿಎಸ್‌ನ ಅವನತಿಗೆ ಮುಖ್ಯವಾಗಿ ಅದರ ನ್ಯೂನತೆಗಳೇ ಕಾರಣ ಎಂಬುದು ನಿಜ. ವಿಶ್ಲೇಷಣೆಯ ಪ್ರಕಾರ, 2018 ಕ್ಕೆ ಹೋಲಿಸಿದರೆ ನೇರ ಸ್ಪರ್ಧೆಗಳ % ಹೆಚ್ಚಾಗಿದೆ. ಕರ್ನಾಟಕವು ಉತ್ತರದ ರಾಜ್ಯಗಳಂತೆ 'ಬೈನರಿ ರಾಜ್ಯ' ಆಗುವ ಅಪಾಯದಲ್ಲಿದೆ. ಪರ್ಯಾಯ ನೀತಿಗಳ ಆಧಾರದ ಮೇಲೆ ಪರ್ಯಾಯ ರಾಜಕಾರಣವನ್ನು ಕಟ್ಟಲು ಹವಣಿಸುತ್ತಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ದೃಷ್ಟಿಯಿಂದ ಇದು ಆರೋಗ್ಯಕರ ಬೆಳವಣಿಗೆಯಲ್ಲ. ಒಬ್ಬ ಸರ್ವೋದಯ ಪ್ರತಿನಿಧಿಯನ್ನು ಹೊರತುಪಡಿಸಿ, ಅದೂ ಕೂಡ ಕಾಂಗ್ರೆಸ್ ಬೆಂಬಲದೊಂದಿಗೆ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಈ ಚುನಾವಣೆಗಳಲ್ಲಿ ರಾಜಕೀಯ ಅವಕಾಶ ಮತ್ತಷ್ಟು ಕುಗ್ಗಿದೆ. ಕಾಂಗ್ರೆಸ್ ಜನವಿರೋಧಿ ನವ–ಉದಾರವಾದಿ ನೀತಿಗಳನ್ನು ಅನುಸರಿಸುವ ಸಾಧ್ಯತೆಯಿದೆ ಅಥವಾ ತನ್ನದೇ ಆದ ಪ್ರಣಾಳಿಕೆಯನ್ನು ಗಂಭೀರವಾಗಿ ಜಾರಿಗೆ ತರದಿರಬಹುದು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಜಾಗರೂಕರಾಗಿರಬೇಕು ಮತ್ತು ಜನಪರ ಕ್ರಮಗಳನ್ನು ಅನುಸರಿಸಲು ಕಾಂಗ್ರೆಸ್ ಸರ್ಕಾರದ ಮೇಲೆ ಒತ್ತಡ ಹೇರಬೇಕು.

ಕಾಂಗ್ರೆಸ್ ಇತ್ತೀಚಿನ ಯಶಸ್ಸನ್ನು ಗಮನಿಸಿದರೆ ಲೋಕಸಭೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವ ಸಾಧ್ಯತೆ ಹೆಚ್ಚಿದೆ. ಆದರೆ ರಾಜ್ಯ ಮತ್ತು ಕೇಂದ್ರದಲ್ಲಿ ಕರ್ನಾಟಕದ ಜನರು ಒಂದೇ ಪಕ್ಷಕ್ಕೆ ಮತ ಹಾಕುವುದಿಲ್ಲ ಎಂಬ ಮತ್ತೊಂದು ರಾಜಕೀಯ ಪ್ರವೃತ್ತಿಯನ್ನು ಕಾಂಗ್ರೆಸ್ ತಿಳಿದಿರಬೇಕು! 2024 ರಲ್ಲಿ ಫ್ಯಾಸಿಸ್ಟ್ ಬಿಜೆಪಿ ವಿರುದ್ಧ ಒಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸುವ ನಿರ್ಣಾಯಕ ಪ್ರಾಮುಖ್ಯತೆಯನ್ನು ಗಮನಿಸಿ, ಕಾಂಗ್ರೆಸ್, ಜೆಡಿ(ಎಸ್) ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ರಾಜಕೀಯ ಮಾತುಕತೆ ನಡೆಸುವ ಜವಾಬ್ದಾರಿಯನ್ನು ಹೊಂದಿದೆ. ಕಾಂಗ್ರೆಸ್ ಅದನ್ನು ಮಾಡದಿದ್ದರೆ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಪ್ರಕ್ರಿಯೆಯನ್ನು ಪ್ರಾರಂಭಿಸಲು ಒತ್ತಡ ಹೇರಬೇಕಾಗುತ್ತದೆ.



ಕ್ರೂರ ಮೆದುಳು ಮತ್ತದರ ಮೇಲಿನ ಮುಖವಾಡಗಳು

ತಮಿಳುನಾಡಿನಲ್ಲಿ ಆರೆಸ್ಸೆಸ್ ನ ಪಥಸಂಚಲಕ್ಕೆ ಅಲ್ಲಿನ ರಾಜ್ಯ ಸರ್ಕಾರ ಅನುಮತಿ ನಿರಾಕರಿಸಿದ್ದು, ನಂತರ ಆರ್ ಎಸ್‌ಎಸ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ಅನುಮತಿ ಪಡೆದು, ತಮಿಳುನಾಡಿನ ಹಲವೆಡೆ ಪಥ ಸಂಚಲನ ಮಾಡಿದ್ದು ಇತ್ತೀಚಿನ ಸುದ್ದಿಯಾಗಿದೆ. ಈ ಸಂಭಂದ 'ಪ್ರಜಾಪ್ರಭುತ್ವದ ಹಕ್ಕುಗಳ' ಕುರಿತಾಗಿ ಚರ್ಚೆ ನಡೆಯುತ್ತಿದೆ. ಈ ಸಂಬಂಧ ಒಂದು ಲೇಖನ ಇಲ್ಲಿದೆ.

“ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಎಲ್ಲರಿಗೂ ಹಕ್ಕುಗಳಿರುವಂತೆ ಆರ್.ಎಸ್.ಎಸ್ ಸಂಘಟನೆಗೆ ಹಕ್ಕಿಲ್ಲವೇ..? ಎಲ್ಲರೂ ಮೆರವಣಿಗೆ ಮಾಡಬಹುದಾದರೆ ಆರ್.ಎಸ್.ಎಸ್. ಮಾಡಬಾರದೆ? ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಡುವವರೂ ಈ ರೀತಿ ಪ್ರಜಾಪ್ರಭುತ್ವವನ್ನು ನಿರಾಕರಿಸಬಹುದೇ..?” ಇಂತಹ ಪ್ರಬಲವಾದ ಪ್ರಜಾಸತ್ತಾತ್ಮಕ ಪ್ರಶ್ನೆಗಳನ್ನು ನಾವಿಂದು ಎದುರಿಸುತ್ತಿದ್ದೇವೆ.

ಆದರೆ ನಾವು ಒಂದು ವಿಷಯವನ್ನು ಮರೆಯಬಾರದು. ಇವೆಲ್ಲವೂ ಪ್ರಜಾಸತ್ತಾತ್ಮಕ ಸಂಘಟನೆಗಳಿಗೆ ಮಾತ್ರ ಅನ್ವಯ. ಆರ್‌ಎಸ್‌ಎಸ್ ಮಾತಿಗಾದರೂ ಪ್ರಜಾಪ್ರಭುತ್ವವನ್ನು ಒಪ್ಪುವುದಿಲ್ಲ. ಆರ್.ಎಸ್.ಎಸ್ ಭಾರತದ ಸಂವಿಧಾನಕ್ಕೆ ವಿರುದ್ಧವಾಗಿದ್ದು, ಅದರ ಆರಂಭದಿಂದಲೂ ಸಂಘಟನೆಯ ಮುಖಂಡರನ್ನು ಜಾತಿ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತಿದೆ. ಆರ್‌ಎಸ್‌ಎಸ್ ತನ್ನ ಸದಸ್ಯತ್ವ ಪಟ್ಟಿಯನ್ನು ಸಹ ಪ್ರಕಟಿಸದ ರಹಸ್ಯ ಸಂಘಟನೆಯಾಗಿದೆ. ಸಂಘಟನೆ ಆರಂಭಿಸಿದ ದಿನದಿಂದ ಒಮ್ಮೆಯಾದರೂ ಆರ್.ಎಸ್.ಎಸ್. ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ನೀಡಿದ ಭರವಸೆಗಳನ್ನು ಈಡೇರಿಸಿಲ್ಲ ಎಂಬುದನ್ನು ಇತಿಹಾಸ ತೋರಿಸುತ್ತದೆ.

1948ರಲ್ಲಿ ಗಾಂಧೀಜಿಯವರ ಹತ್ಯೆಯ ನಂತರ ಆರ್.ಎಸ್.ಎಸ್ ಸಂಘಟನೆಯನ್ನು ನಿಷೇಧಿಸಲಾಯಿತು. ಆಗ ಅದರ ನಾಯಕ ಗೋಳ್ವಾಲ್ಕರ್ ತಮ್ಮ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳಲು ಪ್ರಧಾನಿ ನೆಹರೂ ಅವರನ್ನು ಖುದ್ದಾಗಿ ಭೇಟಿ ಮಾಡಲು ಹಲವಾರು ಬಾರಿ ಪ್ರಯತ್ನಿಸಿದರು. ಅವರನ್ನು ಭೇಟಿಯಾಗಲು ಎಂದಿಗೂ ನೆಹರೂ ಒಪ್ಪಲಿಲ್ಲ. ಹೀಗಿದ್ದರೂ ಅವರು ಗೋಳ್ವಾಲ್ಕರ್‌ಗೆ ನಿಷ್ಠುರವಾದ ಪತ್ರ ಬರೆದಿದ್ದಾರೆ. “ಕಳೆದ ವರ್ಷಾಂತ್ಯದಲ್ಲಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಕ್ಕೆ ಆರ್.ಎಸ್. ಎಸ್. ಚಟುವಟಿಕೆಗಳ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಿದೆ. ನಿಮ್ಮ ಪತ್ರದಲ್ಲಿ ವ್ಯಕ್ತಪಡಿಸಿರುವ ಭರವಸೆಗಳು ನಂಬಲರ್ಹವಾಗಿಲ್ಲ. ನಿಮ್ಮ ನೀತಿ, ನೀವು ಘೋಷಿಸಿದ್ದಕ್ಕೂ ಆರ್‌ಎಸ್‌ಎಸ್ ಕಾರ್ಯಕರ್ತರು ಕೈಗೊಂಡ ಕ್ರಮಗಳಿಗೂ ಯಾವುದೇ ಸಂಬಂಧವಿಲ್ಲ. ಭಾರತೀಯ ಸಂಸತ್ತಿನ ನೀತಿ ಮತ್ತು ಅಸ್ತಿತ್ವದಲ್ಲಿರುವ ಸಂವಿಧಾನವನ್ನು ವಿರೋಧಿಸುವುದು ನಿಮ್ಮ ಬಲವಾದ ನೀತಿಯಾಗಿದೆ. ನಮಗೆ ಲಭ್ಯವಾಗಿರುವ ಮಾಹಿತಿ ಪ್ರಕಾರ ಆರ್. ಎಸ್.ಎಸ್ ಸಂಘಟನೆಯ ಚಟುವಟಿಕೆಗಳು ದೇಶ ವಿರೋಧಿ, ಕುತಂತ್ರ ಮತ್ತು ಹಿಂಸಾತ್ಮಕವಾಗಿವೆ”. ಪ್ರಜಾಪ್ರಭುತ್ವದ ಬಗ್ಗೆ ಅಪಾರ ಗೌರವ ಹೊಂದಿದ್ದ ನೆಹರೂ ಅವರ ಈ ಮಾತುಗಳೇ ಇದಕ್ಕೆ ಸಾಕ್ಷಿ. ಇದರ ವಿರುದ್ಧ ನಿಮ್ಮ ಆಶ್ವಾಸನೆಯನ್ನು ಮಾತ್ರ ನಾವು ನೆಚ್ಚಿಕೊಳ್ಳುವಂತಿಲ್ಲ. ಆರ್‌ಎಸ್‌ಎಸ್ ಸಂಘಟನೆಯು ಪ್ರಜಾಸತ್ತಾತ್ಮಕ, ದೇಶವಿರೋಧಿ ಸಂಘಟನೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಪುರಾವೆ ಬೇಕಿಲ್ಲ. ಇಂತಹ ನೆಹರೂ ಅವರಿಗೆ ಹೊಸ ವೇಷದೊಂದಿಗೆ "ಮತ್ತೆ ರಾಜಕೀಯದಲ್ಲಿ ತೊಡಗುವುದಿಲ್ಲ" ಎಂದು ಭರವಸೆ ನೀಡಿದರು. ಆದರೆ, ಆರ್‌ಎಸ್‌ಎಸ್ ಎಂದಿಗೂ ತಾನು ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲ.

ಜನಸಂಘದ ಹೆಸರಿನಲ್ಲಿ

ಸ್ವಾತಂತ್ರ್ಯ ಹೋರಾಟಗಾರ ಜಯಪ್ರಕಾಶ್ ನಾರಾಯಣನ್ ಅವರು ಕಾಂಗ್ರೆಸ್ ಪಕ್ಷದ ವಿರುದ್ಧ ಹಲವು ವಿರೋಧ ಪಕ್ಷಗಳನ್ನು ಸೇರಿಸಿಕೊಂಡ ಸಮಯದಲ್ಲಿ, ಸ್ವದೇಶಿ ಮತ್ತು ದೇಶಪ್ರೇಮದ ಬಗ್ಗೆ ಮಾತನಾಡುತ್ತಿದ್ದ ಜನಸಂಘದ ಹೆಸರಿನಲ್ಲಿ ಇವರು ಕಾಂಗ್ರೆಸ್ ವಿರೋಧಿ ಕೂಟ ಸೇರಿಕೊಂಡರು. ಆರ್‌ಎಸ್‌ಎಸ್ ಅನ್ನು ಅಲ್ಪಾವಧಿಯಲ್ಲಿಯೇ ಜೆಪಿ ಅರ್ಥಮಾಡಿಕೊಂಡರು. “ಜನಸಂಘವು ಜಾತ್ಯತೀತ ಸಂಘಟನೆ ಎಂದು ಹೇಳಿಕೊಳ್ಳುತ್ತಿದೆ. ಆದರೆ, ಜನಸಂಘದವರು ಆರ್.ಎಸ್.ಎಸ್. ಅಣತಿಯಂತೆ ನಡೆಸಲ್ಪಡುತ್ತಾರೆ. ಆರ್.ಎಸ್.ಎಸ್ ಒಂದು ಫ್ಯಾಸಿಸ್ಟ್ ಶೈಲಿಯ ಚಳುವಳಿ” ಎಂಬ ಸಾರ್ವಜನಿಕ ಹೇಳಿಕೆಯನ್ನು ಜೆಪಿ ನೀಡಿದರು. ಬಿಕ್ಕಟ್ಟಿನ ನಂತರದ ಜನತಾ ಸರ್ಕಾರದ ನಾಯಕತ್ವವನ್ನು ಆರೆಸ್ಸೆಸ್ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಜೆಪಿ ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿ ಅವರಿಗೆ ಎಚ್ಚರಿಕೆ ಪತ್ರ ಬರೆದಿದ್ದರು. ನಂತರ, ಎರಡು ಸದಸ್ಯತ್ವದ ಸಮಸ್ಯೆ ಉದ್ಭವಿಸಿದಾಗ, ಇದರ ಪರಿಣಾಮವಾಗಿ ಜನತಾ ಸರ್ಕಾರವನ್ನು ಉರುಳಿಸಿ ಖಖಖ ಜನಸಂಘದ ಮುಖವಾಡವನ್ನು ಹರಿದುಕೊಂಡು ಹೊರಬಂದಿತು. 80ರ ದಶಕದ ನಂತರ ಆರ್‌ಎಸ್‌ಎಸ್ ಭಾರತೀಯ ಜನತಾ ಪಕ್ಷ ಎಂಬ ಹೊಸ ಮುಖವಾಡದೊಂದಿಗೆ ರಾಜಕೀಯ ಕ್ಷೇತ್ರಕ್ಕೆ ಬಂದಿದ್ದು, ಭಾರತೀಯ ಪದವನ್ನು ಜನಪ್ರಿಯ ಜನತಾ ಎಂಬ ಪದದೊಂದಿಗೆ ಸೇರಿಸಿಕೊಂಡು ತಾನು ಭಾರತದ ಜನಸಾಮಾನ್ಯರ ಪರ ಎಂಬಂತೆ ತೋರ್ಪಡಿಸಿಕೊಳ್ಳಲು ಮುಂದಾಯಿತು. ಬಾಬರಿ ಮಸೀದಿ ಧ್ವಂಸದ ನಂತರ ಜನರಿಂದ ಎದುರಾದ ಅಡೆತಡೆ ಎದುರಿಸಲು ಹಲವು ಹೊಸ ಮುಖವಾಡಗಳು ಸೃಷ್ಟಿಯಾದವು. 2002ರ ಗುಜರಾತ್ ದಂಗೆಯ ನಂತರ ಅಬ್ದುಲ್ ಕಲಾಂ ಎಂಬ ಮುಸ್ಲೀಂ ರಾಷ್ಟ್ರಪತಿ ಮುಖವಾಡ, 2004ರಲ್ಲಿ 'ಹೊಳೆಯುತ್ತಿರುವ ಭಾರತ' ಮುಖವಾಡ, 2014ರಲ್ಲಿ 'ಭ್ರಷ್ಟಾಚಾರ ನಿವ್ಂೂರ್ಲನ್'' ವ್ಂಂಖವಾಡ್', 'ಅಭಿವೃದ್ಧಿಂ್ಂ ನಾಯಕ ಮೋದಿ'ಯ ಮುಖವಾಡ, ಇಂದು ರಾಷ್ಟ್ರದ ಸಂಪತ್ತನ್ನು ರಕ್ಷಿಸಲು ಅದಾನಿ ಭದ್ರತೆಯಂತಹ ಕಾರ್ಪೊರೇಟ್ ರಾಷ್ಟ್ರೀಯ ಮುಖವಾಡಗಳಾಗಿ ಮುಂದುವರಿಯುತ್ತವೆ.

1980ರಲ್ಲಿ ಮೀಸಲಾತಿಯನ್ನು ವಿರೋಧಿಸಿ ದಂಗೆಯೆದ್ದು..

ಸಂಘಟನೆಯ ಹೆಸರಿನಲ್ಲಿ ದೀನದಲಿತರ ಮೇಲೆ ನೇರವಾಗಿ ದಬ್ಬಾಳಿಕೆ ನಡೆಸಿದವರು ಇವರು. 1980ರಲ್ಲಿ ಗುಜರಾತ್‌ನ ಚೆಕ್‌ಪಾಯಿಂಟ್‌ನಲ್ಲಿ ದೇಶದ ಕೆಳಜಾತಿಗಳಿಗೆ ಮೊದಲ ಮೀಸಲಾತಿಯನ್ನು ವಿರೋಧಿಸಿ ದಂಗೆಯೆದ್ದು ರಕ್ತದ ನದಿಯನ್ನೇ ಹರಿಸಿದರು. ಅಂದು ಆ ಸೇನೆಯ ಕಮಾಂಡರ್ ಒಬ್ಬರು ಇಂದಿನ ಪ್ರಧಾನಿ. ಆದರೆ ಇದು ಅನೇಕ ಸ್ಥಳಗಳಲ್ಲಿ ನಿಷ್ಪರಿಣಾಮಕಾರಿ ಮತ್ತು ನಕಾರಾತ್ಮಕವಾಗಿ ಹೊರಹೊಮ್ಮಿತು. 1982ರ ಫೆಬ್ರವರಿ 2ರಂದು ತಮಿಳುನಾಡಿನ ದಕ್ಷಿಣ ಭಾಗದಲ್ಲಿರುವ ಮೀನಾಕ್ಷಿಪುರಂನಲ್ಲಿ ಸಾವಿರಕ್ಕೂ ಹೆಚ್ಚು ದಲಿತರು ಇಸ್ಲಾಂಗೆ ಮತಾಂತರಗೊಂಡಿದ್ದು ಇದರ ಉತ್ತುಂಗವಾಗಿತ್ತು. ದೇಶದ ಪರಿಸ್ಥಿತಿ ಅವರ ವಿರುದ್ಧ ತಿರುಗಿ ಬಿದ್ದಾಗ ಅದೇ ರಕ್ತದ ಕಲೆಯೊಂದಿಗೆ ದಲಿತರನ್ನು ಅಪ್ಪಿಕೊಳ್ಳತೊಡಗಿದರು. ಆ ನಂತರದ ಎರಡು ತಿಂಗಳಲ್ಲಿ 1982ರ ಏಪ್ರಿಲ್ 14ರಂದು ಹೈದರಾಬಾದ್ ನಲ್ಲಿ ಮೊಟ್ಟಮೊದಲ ಬಾರಿಗೆ ಅಂಬೇಡ್ಕರ್ ಅವರ ಜನ್ಮದಿನವನ್ನು ಆಚರಿಸಲಾಯಿತು. ಅವರು "ಸಾಮಾಜಿಕ ಸಮಾನತೆ ದಿನ" ಎಂಬ ರ್ಯಾಲಿಯನ್ನು ಸಹ ಆಯೋಜಿಸಿದರು. ಇತಿಹಾಸದಲ್ಲಿ ಒಂದು ದಿನವೂ ಆರ್.ಎಸ್. ಎಸ್. ವ್ಯವಸ್ಥೆಯತ್ತ ತಿರುಗಿಯೂ ನೋಡದ ಅಂಬೇಡ್ಕರರ ಬಗ್ಗೆ, ಇವರಿಗೆ ಸಮಸ್ಯೆಗಳು ಎದುರಾದಾಗ ಅಂಬೇಡ್ಕರ್ ಬಗ್ಗೆ ತಿರುಚಿದ ಇತಿಹಾಸ ಬರೆಯುತ್ತಾರೆ. ಅಂಬೇಡ್ಕರ್ ಆರ್.ಎಸ್.ಎಸ್ ಶಿಬಿರಕ್ಕೆ ತೆರಳಿ ಅಲ್ಲಿ ಜಾತಿ ತಾರತಮ್ಯ ಇಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಬಣ್ಣ ಬಣ್ಣದ ಕಥೆಗಳನ್ನು ಹೇಳುತ್ತಾರೆ.

ಸಂಘಟನೆಯ ಹೆಸರಿನಲ್ಲಿ ದೀನದಲಿತರ ಮೇಲೆ ನೇರವಾಗಿ ದಬ್ಬಾಳಿಕೆ ನಡೆಸಿದವರು ಇವರು. 1980ರಲ್ಲಿ ಗುಜರಾತ್‌ನ ಚೆಕ್‌ಪಾಯಿಂಟ್‌ನಲ್ಲಿ ದೇಶದ ಕೆಳಜಾತಿಗಳಿಗೆ ಮೊದಲ ಮೀಸಲಾತಿಯನ್ನು ವಿರೋಧಿಸಿ ದಂಗೆಯೆದ್ದು ರಕ್ತದ ನದಿಯನ್ನೇ ಹರಿಸಿದರು. ಅಂದು ಆ ಸೇನೆಯ ಕಮಾಂಡರ್ ಒಬ್ಬರು ಇಂದಿನ ಪ್ರಧಾನಿ.

ಅಂಬೇಡ್ಕರ್ ಅವರ ಇತಿಹಾಸದಲ್ಲಿ ಅವರು ಯಾವುದೇ ಆರ್‌ಎಸ್‌ಎಸ್ ಶಿಬಿರಕ್ಕೆ ಹೋಗಿದ್ದರು ಎಂಬ ಕುರಿತಾಗಿ ಒಂದೇ ಒಂದು ಉಲ್ಲೇಖವಿಲ್ಲ. ಇದಕ್ಕೆ ವಿರುದ್ಧವಾಗಿ, ಅಂಬೇಡ್ಕರ್ ಅವರು ಗಾಂಧಿವಾದಿಗಳನ್ನು ಟೀಕಿಸುವ "ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಏನು ಮಾಡಿದರು"ಎಂಬ ತಮ್ಮ ಪುಸ್ತಕದಲ್ಲಿಯೂ ಸಹ ಹಿಂದೂ ಸಂಘಟನೆಗಳನ್ನು ಕಟುವಾಗಿ ಟೀಕಿಸಿದ್ದಾರೆ. “ಹಿಂದೂ ಮಹಾಸಭಾದಂತಹ ಸಂಘಟನೆಗಳು ಜಾತಿ ಮತ್ತು ಜಾತಿಯ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಲು ಯೋಗ್ಯವಾಗಿಲ್ಲ. ಭಾರತದ ರಾಜಕೀಯದಲ್ಲಿ ಮುಸ್ಲಿಮರನ್ನು ಶತ್ರುವನ್ನಾಗಿ ಮಾಡುವುದು ಅವರ ಏಕೈಕ ಗುರಿಯಾಗಿದೆ” ಎಂದು ಟೀಕಿಸಿ ಬರೆದಿದ್ದಾರೆ. 1946 ರಲ್ಲಿ ಬರೆದ ಲೇಖನದಲ್ಲಿ ಅವರು "ಆರ್.ಎಸ್. ಎಸ್. ಮತ್ತು ಅಕಾಲಿದಳ ಎರಡೂ ಅಪಾಯಕಾರಿ ಸ್ಂಘ್ಟನ್ಗ್ಳ್ಂ" ಎಂದು ಎಚ್ಚರಿಸಿದ್ದಾರೆ. 1956ರಲ್ಲಿ ಅಂಬೇಡ್ಕರ್ ಅವರು ಸಾಮೂಹಿಕವಾಗಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡಾಗ ಅದನ್ನು ಬಲವಾಗಿ ವಿರೋಧಿಸಿದ ಏಕೈಕ ಸಂಘಟನೆ ಎಂದರೆ ಅದು ಆರೆಸ್ಸೆಸ್. ಸಾವರ್ಕರ್, “ಬೌದ್ಧ ಧರ್ಮ ಹೇಡಿಗಳ ಧರ್ಮ. ಅದು ದ್ರೋಹ ಬಗೆದ ಧರ್ಮ' ಎಂದು ಆಕ್ರೋಶದ ಧ್ವನಿಯಲ್ಲಿ ಟೀಕಿಸಿದರು. ಅಂಬೇಡ್ಕರ್ ಬೆಂಬಲಿಗರು ಸಾವರ್ಕರ್ ಅವರ ಈ ಹೇಳಿಕೆಗೆ ಪ್ರತಿಕ್ರಿಯಿಸಿ, 'ಸಾವರ್ಕರ್ ಅವರಂತಹವರು ದ್ರೋಹದ ಬಗ್ಗೆ ಮಾತನಾಡಬಹುದೇ?' ಎಂದಿದ್ದರು.

ತಮ್ಮ ಬರಹಗಳು ಮತ್ತು ಚಟುವಟಿಕೆಗಳ ಮೂಲಕ ತಮ್ಮ ಜೀವನದುದ್ದಕ್ಕೂ ಆರ್.ಎಸ್. ಎಸ್. ವಿರುದ್ಧ ಇದ್ದ ಅಂಬೇಡ್ಕರ್ ಅವರನ್ನು ಆರ್.ಎಸ್.ಎಸ್. "ಅಸ್ಪೃಶ್ಯತೆಯನ್ನು ತೀವ್ರವಾಗಿ ವಿರೋಧಿಸಿದ ಹಿಂದೂ ಸಮಾಜ ಸೇವಕ" ಎಂದು ಮುಜುಗರವಿಲ್ಲದೆ ಉಲ್ಲೇಖಿಸುತ್ತದೆ. ಅದೇ ರೀತಿ ಗಾಂಧೀಜಿ ಆರೆಸ್ಸೆಸ್ ಅನ್ನು ಹೊಗಳಿದ ಇತಿಹಾಸದಲ್ಲಿ ಇಲ್ಲದ ದಾಖಲೆಗಳನ್ನು ಬರೆದು ಪ್ರಚಾರ ಮಾಡುತ್ತಿದೆ. ಭಗತ್ ಸಿಂಗ್ ಸೇರಿದಂತೆ ಹಲವು ನಾಯಕರ ಇತಿಹಾಸಗಳನ್ನು ದಣಿವರಿಯದೆ ಪುಟಗಟ್ಟಲೆ ಬರೆಯುತ್ತಿದ್ದಾರೆ. ಅದನ್ನು ಜನರ ಬಳಿಗೆ ಕೊಂಡೊಯ್ಯಲು ಆರ್‌ಎಸ್‌ಎಸ್ ಪಥಸಂಚಲನದ ಹೆಸರಿನಲ್ಲಿ ಮೆರವಣಿಗೆ ನಡೆಸುತ್ತದೆ. ತಮ್ಮ ಮೆರವಣಿಗೆಯಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಚಿತ್ರಗಳನ್ನು ಬಳಸುತ್ತಾರೆ, ಸಾರ್ವಜನಿಕರನ್ನು ತನ್ನ ವಿಕೃತ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಿರುವ ಎಲ್ಲವನ್ನೂ ಅದು ಮಾಡುತ್ತದೆ. ಮೆರವಣಿಗೆ ಜನರ ಗಮನ ಸೆಳೆಯದಿದ್ದರೆ ಮೆರವಣಿಗೆಯನ್ನು ಗಲಭೆಯ ಮೈದಾನವಾಗಿ ಮಾರ್ಪಡಿದುವ ಮೂಲಕ ಗಮನ ಸೆಳೆಯುತ್ತದೆ. ಆರೆಸ್ಸೆಸ್ ಮತ್ತು ಬಿಜೆಪಿಯವರು ತಮ್ಮ ಗುರಿಗಳನ್ನು ಸಾಧಿಸಲು ಹಲವು ಮುಖವಾಡಗಳನ್ನು ಧರಿಸುತ್ತಾರೆ. ಏಕೆಂದರೆ ಅವರಿಗೆ ಒಂದು ಮುಖವಿಲ್ಲ. ಅವರಿಗೆ ಜಾತಿ ಆಧಾರಿತ ಕ್ರೂರ ಮಿದುಳುಗಳಿವೆ.

ಕೃಪೆ– ತೀಕದೀರ್

ಅನು: ಸಿಚಿ

“ಹಿಂದೂ ಮಹಾಸಭಾದಂತಹ ಸಂಘಟನೆಗಳು ಜಾತಿ ಮತ್ತು ಜಾತಿಯ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಲು ಯೋಗ್ಯವಾಗಿಲ್ಲ. ಭಾರತದ ರಾಜಕೀಯದಲ್ಲಿ ಮುಸ್ಲಿಮರನ್ನು ಶತ್ರುವನ್ನಾಗಿ ಮಾಡುವುದು ಅವರ ಏಕೈಕ ಗುರಿಯಾಗಿದೆ” ಎಂದು ಅಂಬೇಡ್ಕರ್ ಅವರು ಟೀಕಿಸಿ ಬರೆದಿದ್ದಾರೆ. 1946 ರಲ್ಲಿ ಬರೆದ ಲೇಖನದಲ್ಲಿ ಅವರು "ಆರ್.ಎಸ್.ಎಸ್. ಮತ್ತು ಅಕಾಲಿದಳ ಎರಡೂ ಅಪಾಯಕಾರಿ ಸಂಘಟನೆಗಳು" ಎಂದು ಎಚ್ಚರಿಸಿದ್ದರು. 1956ರಲ್ಲಿ ಅಂಬೇಡ್ಕರ್ ಅವರು ಸಾಮೂಹಿಕವಾಗಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡಾಗ ಅದನ್ನು ಬಲವಾಗಿ ವಿರೋಧಿಸಿದ ಏಕೈಕ ಸಂಘಟನೆ ಎಂದರೆ ಅದು ಆರೆಸ್ಸೆಸ್. “ಬೌದ್ಧ ಧರ್ಮ ಹೇಡಿಗಳ ಧರ್ಮ. ಅದು ದ್ರೋಹ ಬಗೆದ ಧರ್ಮ' ಎಂದು ಸಾವರ್ಕರ್, ಆಕ್ರೋಶದ ಧ್ವನಿಯಲ್ಲಿ ಟೀಕಿಸಿದರು.

ಎರಡು ಸುಪ್ರಿಂ ಕೋರ್ಟ್ ತೀರ್ಪುಗಳು ಮತ್ತು.....

ಮೇ 11ರಂದು ಸುಪ್ರೀಂಕೋರ್ಟ್ ಎರಡು ಮಹತ್ವದ ತೀರ್ಪುಗಳನ್ನು ಪ್ರಕಟಿಸಿದೆ.

ಇವುಗಳಲ್ಲಿ ಒಂದು, ಸಾರ್ವಜನಿಕ ಸುವ್ಯವಸ್ಥೆ, ಪೊಲೀಸ್ ಮತ್ತು ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಬೇರೆಲ್ಲ ಆಡಳಿತಾತ್ಮಕ ಸೇವೆಗಳ ಮೇಲೆ ದೆಹಲಿಯ ಎನ್‌ಸಿಟಿ(ರಾಷ್ಟ್ರೀಯ ರಾಜಧಾನಿ ಪ್ರದೇಶ) ಸರ್ಕಾರವು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರವನ್ನು ಹೊಂದಿದೆ ಎಂದು ಸರ್ವಾನುಮತದಿಂದ ಸ್ಪಷ್ಟಪಡಿಸಿದೆ. ಕೇಂದ್ರ ಸರಕಾರ ತಾನು ನೇಮಿಸಿದ ಉಪರಾಜ್ಯಪಾಲರ ಮೂಲಕ ಈ ಅಧಿಕಾರವನ್ನು ಅದಕ್ಕೆ ನಿರಾಕರಿಸುತ್ತ ತಾನೇ ಚಲಾಯಿಸಿ ಗೊಂದಲ ಉಂಟು ಮಾಡುತ್ತಿದ್ದ ಹಿನ್ನೆಲೆಯಲ್ಲಿ ಈ ತೀರ್ಪು ಬಂದಿದೆ. ಅಂದರೆ ದೆಹಲಿ ಸರ್ಕಾರದ ನಿಯಂತ್ರಣದ ಹೊರಗೆ ಮೇಲೆ ಹೇಳಿದ ಮೂರು ಕ್ಷೇತ್ರಗಳಿದ್ದು, ಇವನ್ನು ಬಿಟ್ಟು ಮತ್ತೆಲ್ಲವೂ ದಿಲ್ಲಿಯ ಚುನಾಯಿತ ಸರಕಾರದ ನಿಯಂತ್ರಣಕ್ಕೆ ಒಳಪಡಬೇಕು. **ಇದು ಕೇಂದ್ರ ಸರಕಾರಕ್ಕೆ ಒಂದು ಚಾಟಿಯೇಟು ಎಂದು ಪರಿಣಿತರು ಹೇಳುತ್ತಿದ್ದಾರೆ.**

ಮತ್ತೊಂದು ನಿರ್ಣಾಯಕ ತೀರ್ಪಿನಲ್ಲಿ, ಮುಖ್ಯ ನ್ಯಾಯಾಧೀಶರ ನೇತೃತ್ವದ ಐದು ನ್ಯಾಯಾಧೀಶರ ಸಂವಿಧಾನ ಪೀಠವು ಸರ್ವಾನುಮತದ ತೀರ್ಪಿನಲ್ಲಿ, ಅಂದಿನ ಮಹಾರಾಷ್ಟ್ರದ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ವಿಶ್ವಾಸ ಮತ ತೆಗೆದುಕೊಳ್ಳಬೇಕು ಎಂದು ಉದ್ಧವ್ ಠಾಕ್ರೆಯವರಿಗೆ ಹೇಳಿದ್ದು ಕಾನೂನುಬಾಹಿರ ಎಂದು ಹೇಳಿದೆ. ಇದು ಠಾಕ್ರೆ ನೇತೃತ್ವದ ಎಂವಿಎ ಸರಕಾರದ ರಾಜೀನಾಮೆಗೆ ಕಾರಣವಾಯಿತು. ಎಂವಿಎ ಸರಕಾರದ ಬಹುಮತವನ್ನು ಸಂದೇಹಿಸುವ ಯಾವ ವಿಷಯವೂ ರಾಜ್ಯಪಾಲರ ಬಳಿಯಿರಲಿಲ್ಲ ಎಂಬ ಸಂಗತಿಯತ್ತ ಅದು ಗಮನ ಸೆಳೆದಿದೆ.

ಎರಡನೆಯದಾಗಿ, ಸಭಾಧ್ಯಕ್ಷರು ಶಿಂಧೆ ಶಿವಸೇನಾ ಶಾಸಕಾಂಗ ಪಕ್ಷದ ಮುಖ್ಯಸ್ಥರು ಎಂದು ಮಾನ್ಯತೆ ನೀಡಿದ್ದು ಕಾನೂನುಬಾಹಿರ ಎಂದಿದೆ.

ಮೂರನೆಯದಾಗಿ, ಭರತ್ ಗೊಗವಾಲೆಯವರು ಶಿವಸೇನೆಯ ಮುಖ್ಯ ಸಚೇತಕ ಎಂದು ಮಾನ್ಯತೆ ನೀಡಿದ್ದು ಕೂಡ ಕಾನೂನುಬಾಹಿರ ಎಂದು ಹೇಳಿದೆ. ಶಿಂಧೆ ಬಣದ ಶಾಸಕರ ಅನರ್ಹತೆಯ ವಿಚಾರಣೆಯನ್ನು ಎರಡು ಬಣಗಳಲ್ಲಿ ನಿಜವಾದ ಶಿವಸೇನೆ ಯಾವುದು ಎಂದು ಚುನಾವಣಾ ಆಯೋಗ ನಿರ್ಧರಿಸುವ "ನಿರೀಕ್ಷೆ"ಯಲ್ಲಿ ತಡೆಹಿಡಿದದ್ದು ಕೂಡ ತಪ್ಪು ಎಂದೂ ಅದು ಹೇಳಿದೆ.

ಆದರೆ ಉದ್ಧವ್ ಠಾಕ್ರೆಯವರು ತಾವಾಗಿ ರಾಜೀನಾಮೆ ನೀಡಿದ್ದರಿಂದ ಅವರ ರಾಜೀನಾಮೆಯನ್ನು ರದ್ದುಪಡಿಸಲು ಸಾಧ್ಯವಿಲ್ಲ, ಹೀಗಾಗಿ ಅವರನ್ನು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಮರುಸ್ಥಾಪಿಸಲು ಸಾಧ್ಯವಾಗುವುದಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಜೂನ್ 2022ರಲ್ಲಿ ಮಹಾರಾಷ್ಟ್ರ ಒಂದು ರಾಜಕೀಯ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪ್ರಸ್ತುತ ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದಲ್ಲಿ ಶಿವಸೇನೆಯ 40 ಶಾಸಕರು ಆಗಿನ ಮಹಾ ವಿಕಾಸ್ ಅಘಾಡಿ(ಎಂವಿಎ) ಸರಕಾರದ ಮುಖ್ಯಮಂತ್ರಿ ಉದ್ಧವ್ ಬಿ. ಠಾಕ್ರೆ ವಿರುದ್ಧ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಬಂಡಾಯವೆದ್ದರು. ಶಿವಸೇನೆ, ಎನ್‌ಸಿಪಿ ಮತ್ತು ಕಾಂಗ್ರೆಸ್ ಎಂವಿಎ ಸರಕಾರದ ಭಾಗವಾಗಿದ್ದವು.

ಜೂನ್ 20ರಂದು ಎಂಎಲ್‌ಸಿ ಚುನಾವಣೆಯಲ್ಲಿ ಶಿಂಧೆ ಮತ್ತು ಅವರ ಬಣದವರು ಅಡ್ಡ ಮತದಾನ ಮಾಡಿದ ಬಗ್ಗೆ ವಿಚಾರಿಸಲು ಠಾಕ್ರೆ ಪಕ್ಷದ ತುರ್ತುಸಭೆ ಕರೆದರು. ಇದರಿಂದ ತಪ್ಪಿಸಿಕೊಳ್ಳಲು ಜೂನ್ 22ರಂದು ಅವರು 40 ಮಂದಿ ಶಾಸಕರೊಂದಿಗೆ ಸೂರತ್ ಮೂಲಕ ಗುವಾಹಟಿಗೆ ಪರಾರಿಯಾದರು. ಜೂನ್ 23 ರಂದು ಈ ಶಾಸಕರು ಶಿಂಧೆ ಅವರನ್ನು ಶಿವಸೇನೆಯ ನಾಯಕ ಎಂದು ಘೋಷಿಸಿದರು. ಠಾಕ್ರೆ ಅವರು ಶಿಂಧೆ ವಿರುದ್ಧ ಸೇರಿದಂತೆ 16 ಅನರ್ಹತೆಯ ನೋಟಿಸ್‌ಗಳನ್ನು ಜೂನ್ 25, 2022 ರಂದು ಉಪ ಸಭಾಧ್ಯಕ್ಷರಿಗೆ ಸಲ್ಲಿಸಿದರು.(ಆಗ ಸಭಾದ್ಯಕ್ಷರ ಹುದ್ದೆ ಖಾಲಿಯಿತ್ತು).

ಈ ನೋಟಿಸ್‌ಗಳಿಗೆ ಉತ್ತರಿಸಲು ಶಾಸಕರಿಗೆ ಎರಡು ದಿನಗಳ ಕಾಲಾವಕಾಶ ನೀಡಲಾಗಿತ್ತು. ಉಪಸಭಾಪತಿ ಪದಚ್ಯುತಿಗೆ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆಯಾದ್ದರಿಂದ(ಇದನ್ನು ಹಿಂದಿನ ದಿನ ಶಿಂಧೆ ಬಣ ಮಂಡಿಸಿತ್ತು) ಅವರು ಅನರ್ಹತೆ ಅರ್ಜಿಗಳ ಬಗ್ಗೆ ನಿರ್ಧರಿಸಲು ಸಾಧ್ಯವಿಲ್ಲ, ಅಲ್ಲದೆ 2 ದಿನಗಳ ಕಾಲಾವಕಾಶ ತೀರಾ ಕಡಿಮೆ ಎಂದು ಶಿಂಧೆ ಬಣವು ಜೂನ್ 26 ರಂದು ಸುಪ್ರೀಂ ಕೋರ್ಟ್‌ನಲ್ಲಿ ನೋಟಿಸ್‌ಗಳನ್ನು ಪ್ರಶ್ನಿಸಿತು. ನ್ಯಾಯಾಲಯ ಅನರ್ಹತೆಯ ಪ್ರಕ್ರಿಯೆಗೆ ತಡೆ ನೀಡಿ, ಶಿಂಧೆ ನೇತೃತ್ವದ 16 ಶಾಸಕರಿಗೆ 12 ದಿನಗಳ ಕಾಲಾವಕಾಶ ನೀಡಿತು..

ಈ ನಡುವೆ ಶಿಂಧೆ ಬಣ ಮತ್ತು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಆಗಿನ ವಿರೋಧ ಪಕ್ಷದ ನಾಯಕ, ಬಿಜೆಪಿಯ ದೇವೇಂದ್ರ ಫಡ್ನವೀಸ್, ಆಗಿನ ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಅವರನ್ನು ವಿಧಾನಸಭೆಯಲ್ಲಿ ಸರಕಾರ ವಿಶ್ವಾಸಮತ ತಗೊಳ್ಳುವಂತೆ ನಿರ್ದೇಶಿಸಬೇಕೆಂದು ಕೇಳಿದರು. ಕೋಶ್ಯಾರಿ ಜೂನ್ 30 ರಂದು ವಿಶ್ವಾಸ ಮತ ಪಡೆಯುವಂತೆ ಆದೇಶಿಸಿದರು.

ಇದನ್ನು ಠಾಕ್ರೆ ನೇತೃತ್ವದ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರೂ ಅದು ಮಧ್ಯಪ್ರವೇಶಿಸಲು ನಿರಾಕರಿಸಿತು. ಠಾಕ್ರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು ಮತ್ತು ಶಿಂಧೆ ಸರ್ಕಾರ ರಚಿಸಲು ಹಕ್ಕು ಮಂಡಿಸಿದರು. ಜೂನ್ 30 ರಂದು ಶಿಂಧೆ ಮುಖ್ಯಮಂತ್ರಿಯಾದರು. ನಂತರ ಫಡ್ನವೀಸ್ ಉಪಮುಖ್ಯಮಂತ್ರಿಯಾಗಿರುವ ಪ್ರಸಕ್ತ ಶಿವಸೇನೆಯ ಬಂಡಾಯ ಸದಸ್ಯರು ಮತ್ತು ಬಿಜೆಪಿಯ ಸಮ್ಮಿಶ್ರ ಸರಕಾರ ಅಧಿಕಾರ ವಹಿಸಿಕೊಂಡ ವೈಖರಿಯಿದು.

ಸುಪ್ರಿಂ ಕೋರ್ಟಿನ ಈ ತೀರ್ಪು ಈ ವೈಖರಿ ಸರಿಯಾದದ್ದಲ್ಲ, ಎಂದು ಸಪಷ್ಟವಾಗಿ ಹೇಳಿರುವ ತೀರ್ಪಾದರೂ, ಈ ತಪ್ಪನ್ನು ಸರಿಪಡಿಸಲು ಹೋಗದೆ ಯಥಾಸ್ಥಿತಿ ಮುಂದುವರೆಯುವಂತೆ ಮಾಡಿರುವುದರ ಬಗ್ಗೆ ಬಹಳಷ್ಟು ಟೀಕೆ–ಟಿಪ್ಪಣಿಗಳು ಬರುತ್ತಿವೆ. ಠಾಕ್ರೆಯವರು ಆಗ ರಾಜೀನಾಮೆ ನೀಡಿದ್ದು ಸುಪ್ರಿಂ ಕೋರ್ಟ್ ಈಗ ಕಾನೂನುಬಾಹಿರ ಎಂದಿರುವ ಕ್ರಿಯೆಯನ್ನು ತಡೆಯಲು ನಿರಾಕರಿಸಿದ್ದರಿಂದ ತಾನೇ, ಹಾಗಿರುವಾಗ ಅವರು ರಾಜೀನಾಮೆ ನೀಡಿದ್ದನ್ನು ಈಗ ಕಾರಣವಾಗಿ ನೀಡುವುದು ಎಷ್ಟು ಸರಿ ಎಂಬುದು ಅವರ ಪ್ರಶ್ನೆ.

ಅದೇನೇ ಇರಲಿ, ಒಟ್ಟಿನಲ್ಲಿ ವಾಸ್ತವವಾಗಿ ಈ ತೀರ್ಪು ಶಿವಸೇನೆಯಿಂದ ಪಕ್ಷಾಂತರಗೊಂಡಿದ್ದಕ್ಕಾಗಿ ಮಹಾರಾಷ್ಟ್ರದ ಪ್ರಸಕ್ತ ಮುಖ್ಯಮಂತ್ರಿ ಏಕನಾಥ್ ಶಿಂಧೆಯವರ ಅನರ್ಹತೆಗೆ ಬಾಗಿಲು ತೆರೆದಿದೆ ಎಂದು ಪರಿಣಿತರು ಹೇಳುತ್ತಿದ್ದರೆ, ಇದು ತಮಗೆ ದೊರೆತಿರುವ ಮಾನ್ಯತೆ ಎಂದು ಶಿಂಧೆ–ಫಡ್ನವೀಸ್ ಸರಕಾರ ಹೇಳಿಕೊಳ್ಳುತ್ತಿದೆಯಂತೆ.

"ಅನೈತಿಕ ಮತ್ತು ಕಾನೂನುಬಾಹಿರ ಶಿಂಧೆ–ಫಡ್ನವೀಸ್ ಸರ್ಕಾರ ಮುಂದುವರಿಯುವುದು ಸರಿಯಲ್ಲ"

ಈ ಹಿನ್ನೆಲೆಯಲ್ಲಿ ಪ್ರಸ್ತುತ ರಾಜಕೀಯ ಗೊಂದಲಕ್ಕೆ ಏಕೈಕ ಪರಿಹಾರವೆಂದರೆ ಮಹಾರಾಷ್ಟ್ರ ವಿಧಾನಸಭೆಗೆ ಹೊಸ ಚುನಾವಣೆ. ಆದ್ದರಿಂದ ವಿಧಾನಸಭೆಯನ್ನು ವಿಸರ್ಜಿಸಿ ತಕ್ಷಣವೇ ಚುನಾವಣೆ ನಡೆಸಬೇಕು ಎಂದು ಸಿಪಿಐ(ಎಂ)ನ ಮಹಾರಾಷ್ಟ್ರ ರಾಜ್ಯ ಸಮಿತಿಯು ಒತ್ತಾಯಿಸಿದೆ.


ಬಿಜೆಪಿ ನೇತೃತ್ವದ ಶಿಂಧೆ–ಫಡ್ನವೀಸ್ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರಿಯಲು ನೈತಿಕ ಆಧಾರವಾಗಲೀ, ಕಾನೂನಾತ್ಮಕ ಹಕ್ಕಾಗಲೀ ಇಲ್ಲ. ಇದನ್ನು ಬಹಳ ಸಮಯದಿಂದ ಸಿಪಿಐ(ಎಂ) ಹೇಳಿಕೊಂಡು ಬಂದಿದೆ. ಈಗ ಸುಪ್ರೀಂ ಕೋರ್ಟ್ ತೀರ್ಪಿನಿಂದ ಅದು ಸಾಬೀತಾಗಿದೆ. ರಾಜ್ಯದ ಜನತೆ ಪರ್ಯಾಯ ಸರ್ಕಾರಕ್ಕೆ ಅರ್ಹರು, ಆದರೆ ಪ್ರಸ್ತುತ ವಿಧಾನಸಭೆಯ ಸಂಯೋಜನೆಯಲ್ಲಿ ಅದು ಅಸಾಧ್ಯ.

ಪಕ್ಷಾಂತರಿಗಳ ಮೇಲೆ ವಜಾದ ಖಡ್ಗ ತೂಗಾಡುತ್ತಿದೆ ಮತ್ತು ಅವರ ಸಹಾಯ ಅಥವಾ ಭಾಗವಹಿಸುವಿಕೆ ಇರುವ ಯಾವುದೇ ಸರ್ಕಾರವನ್ನು ಜನರ ಮೇಲೆ ಹೇರಬಾರದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಇದು ಖಂಡಿತವಾಗಿಯೂ ಈ ಅಸ್ಥಿರತೆ ಮುಂದುವರಿಯುತ್ತದೆ, ಬಿಜೆಪಿ ಬಹುಮತ ಪಡೆಯಲು ಕುದುರೆ ವ್ಯಾಪಾರಕ್ಕೆ ಇಳಿಯುತ್ತದೆ.

ಸದನದಲ್ಲಿ ರಾಜಕೀಯ ಪಕ್ಷಗಳ ಪ್ರಸ್ತುತ ಬಲಾಬಲದಲ್ಲಿ ಒಂದು ಪರ್ಯಾಯ ಸರ್ಕಾರದ ರಚನೆ ಸಾಧ್ಯವಿಲ್ಲ. ಅದೇ ಸಮಯದಲ್ಲಿ ಈ ಅನೈತಿಕ ಮತ್ತು ಕಾನೂನುಬಾಹಿರ ಶಿಂಧೆ–ಫಡ್ನವೀಸ್ ಸರ್ಕಾರ ಮುಂದುವರಿಯುವುದು ಜನಗಳ ಹಿತದೃಷ್ಟಿಯಿಂದ ಸರಿಯಲ್ಲ. ಈ ಪರಿಸ್ಥಿತಿಯಲ್ಲಿ ಹೊಸ ಜನಾದೇಶವೊಂದೇ ಇದಕ್ಕಿರುವ ದಾರಿ.

ಆದ್ದರಿಂದ ತಕ್ಷಣವೇ ಮಹಾರಾಷ್ಟ್ರದ ಪ್ರಸ್ತುತ ವಿಧಾನಸಭೆಯನ್ನು ವಿಸರ್ಜಿಸಿ ಹೊಸದಾಗಿ ಚುನಾವಣೆ ನಡೆಸಬೇಕೆಂದು ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯಸಮಿತಿ ಬಲವಾಗಿ ಆಗ್ರಹಿಸಿದೆ.

... ಒಂದು 'ಸ್ಟೋರಿ'



ದಿ ಕರ್ನಾಟಕ ಸ್ಟೋರಿ
ಕೃಪೆ: ಸಂದೀಪ ಅಧ್ವರ್ಯು

ಈ ಎರಡು ತೀರ್ಪುಗಳಿಗಿಂತ ಸ್ವಲ್ಪವೇ ಮೊದಲು ಪ್ರಧಾನಿಗಳು ಉಲ್ಲೇಖಿಸಿದ ಒಂದು 'ಸ್ಟೋರಿ' ಕೂಡ ಆಳುವವರಿಗೆ 'ಅಮೃತ ಕಾಲ'ದ ಪಾಟಗಳನ್ನು ಕೊಟ್ಟಿದೆ–ನಿಜ, ಅದರಿಂದ ಕಲಿಯಲು ಸಿದ್ಧವಿರುವವರಿಗೆ.

ಮೇಲಿನ ವ್ಯಂಗ್ಯಚಿತ್ರ ಪ್ರಧಾನಿಗಳು ಉಲ್ಲೇಖಿಸಿದ 'ಸ್ಟೋರಿ' ಯ ಕುರಿತಾದ್ದಲ್ಲ, ಅದಕ್ಕೆ ಕರ್ನಾಟಕದ ಮತದಾರರು ಕಲಿಸಿದ ಪಾಟದ ಕುರಿತಾದ್ದು.


ಮೇ 5 ರಂದು ಬಳ್ಳಾರಿಯಲ್ಲಿ ಒಂದು ಚುನಾವಣಾ ಸಭೆಯಲ್ಲಿ ಮಾತಾಡುತ್ತ ಪ್ರಧಾನಿಗಳು ಆಗಷ್ಟೇ ಬಿಡಗಡೆಯಾದ 'ದಿ ಕೇರಳ ಸ್ಟೋರಿ'ಯ ಬಗ್ಗೆ ಮಾತಾಡಿದರು. "ಇದು ಒಂದು ಭಯೋತ್ಪಾದನಾ ಪಿತೂರಿಯನ್ನು ಆಧರಿಸಿದೆ. ನೋಡಿ. ಕಾಂಗ್ರೆಸ್ ಇದನ್ನು ವಿರೋಧಿಸಿ ಭಯೋತ್ಪಾದನೆಯ ಪರವಾಗಿ ನಿಂತಿದೆ" ಎಂದು ಕರ್ನಾಟಕದ ಮತದಾರರು ತೀರ್ಮಾನಿಸಬೇಕೆಂಬುದು ಅವರ ಆಶಯವಿರಬೇಕು. ಆದರೆ ಅದೇ ದಿನ, ಇದು ಕೇರಳದಲ್ಲಿ ಬಲವಂತದ ಮತಾಂತರಕ್ಕೊಳಗಾಗಿ ಐಸಿಸ್ ಗೆ ಸೇರಿಸಲ್ಪಟ್ಟ ಕೇರಳದ 32000 ಮಹಿಳೆಯರ ಕತೆ ಎಂದು ಅದುವರೆಗೆ ಪ್ರಚಾರ ಮಾಡುತ್ತಿದ್ದ ಇದರ ತಯಾರಕರು 32000ಕ್ಕೆ ಆಧಾರವೇನು ಎಂಬ ಪ್ರಶ್ನೆಗೆ ಉತ್ತರಿಸಲಾಗದೆ 32000 ಎಂಬುದನ್ನು ಕೈಬಿಡುವುದಾಗಿ ಹೇಳಿದರು ಎಂಬುದು ಅವರಿಗೆ ತಿಳಿಯಿತೋ ಇಲ್ಲವೋ ಗೊತ್ತಾಗಲಿಲ್ಲ.

ಪ್ರಧಾನಿಗಳು ಹೀಗೆ ಚಿತ್ರವಿಮರ್ಶಕನ ಪಾತ್ರ ವಹಿಸಿಕೊಂಡ ಮರುದಿನವೇ ಅವರ ಮಾತೃ ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ 40ಸಾವಿರ ಮಹಿಳೆಯರು ಕಾಣೆಯಾಗಿದ್ದಾರೆ ಎಂದು ಎನ್‌ಸಿಆರ್‌ಬಿ ದತ್ತಾಂಶಗಳು ತಿಳಿಸಿರುವ ಸುದ್ದಿ ಬಂತು. ಇದರ ಮೇಲೇಕೆ 'ದ ಗುಜರಾತ್ ಸ್ಟೋರಿ' ಚಿತ್ರ ತಯಾರಿಸಬಾರದು ಎಂಬ ಪ್ರಶ್ನೆ ಸಹಜವಾಗಿಯೇ ಹಲವೆಡೆಗಳಿಂದ ಕೇಳಬಂತು.

ಅಲ್ಲದೆ ಪ್ರಧಾನಿಗಳು ಈ ಸ್ಟೋರಿಯ ಬಗ್ಗೆ ಹೇಳುವಾಗ ಡಬಲ್ ಇಂಜಿನ್ ಸರಕಾರವಿರುವ ಮಣಿಪುರ ಹೊತ್ತಿ ಉರಿಯುತ್ತಿತ್ತು. ಅದರ ಬಗ್ಗೆ ಪ್ರಧಾನಿಗಳ, ಗೃಹಮಂತ್ರಿಗಳ ಚಕಾರವಿಲ್ಲ, ಅದರ ಮೇಲೆ ಫಿಲ್ಮ್ ಮಾಡಿದ ಮೇಲೆಯೇ ಅತ್ತ ಗಮನ ಹರಿಸುವುದೇ ಎಂದೂ ಹಲವರು ಕೇಳಿದರು.

ಕರ್ನಾಟಕದ ಮತದಾರರಂತೂ ಪ್ರಧಾನಿಗಳ ಆಶಯವನ್ನು ಸಂಪೂರ್ಣವಾಗಿ ತಿರಸ್ಕರಿಸಿದ 'ಕರ್ನಾಟಕ ಸ್ಟೋರಿ' ಬರೆದಿದ್ದಾರೆ.

ಈ ಫಿಲ್ಮ್ ನೋಡಿ | ಆ ಫಿಲ್ಮ್ ನೋಡಿ | ಯಾರಾದರೂ ನನ್ನ ಮೇಲೆ ಒಂದು ಫಿಲ್ಮ್ ಮಾಡ್ತೀರಾ?



ಮಣಿಪುರ

ವ್ಯಂಗ್ಯಚಿತ್ರ ಕೃಪೆ: ಅಲೋಕ್ ನಿರಂತರ್, ಫೇಸ್‌ಬುಕ್

ಯಾರಾದರೂ ಇದರ ಮೇಲೆ **ದ ಗುಜರಾತ್ ಸ್ಟೋರಿ** ಮಾಡುವ ಮೊದಲೇ ನಾವು ಸ್ಟೇ ತಗೊಳ್ಳಬೇಕು



ಗುಜರಾತಿನಲ್ಲಿ 5 ವರ್ಷಗಳಲ್ಲಿ 40 ಸಾವಿರ ಮಹಿಳೆಯರು ಕಾಣೆಯಾಗಿದ್ದಾರೆ -ಎನ್‌ಸಿಆರ್‌ಬಿ
ವ್ಯಂಗ್ಯಚಿತ್ರ ಕೃಪೆ: ಇರ್ಫಾನ್, ನ್ಯೂಸ್‌ಕ್ಲಿಕ್

ಮಾರ್ಚ್ 2023ರಲ್ಲಿ ಉದ್ಯೋಗ ಹೊಂದಿದ್ದ ವ್ಯಕ್ತಿಗಳ ಸಂಖ್ಯೆಯು 2019–20ರಲ್ಲಿ ಇದ್ದುದಕ್ಕಿಂತಲೂ ಕೆಳಗಿದೆ. ಅಂದರೆ, ಇದ್ದ ಉದ್ಯೋಗಗಳೂ ನಾಶವಾಗಿವೆ. ಇದು ನಿಜಕ್ಕೂ ಒಂದು ಭಯಂಕರ ಸನ್ನಿವೇಶವೇ ಸರಿ. ಭಾರತದ ನಿರುದ್ಯೋಗದ ಅಂಕಿಅಂಶಗಳು ನವ ಉದಾರವಾದಿ ಬಂಡವಾಳಶಾಹಿಯು ನಮ್ಮ ದೇಶದಲ್ಲಿ ನಿರುದ್ಯೋಗದ ಸಮಸ್ಯೆಯನ್ನು ನಿವಾರಿಸುವ ಸಾಮಾಜಿಕ ವ್ಯವಸ್ಥೆಯಾಗುವುದು ಸಾಧ್ಯವಿಲ್ಲ ಎಂಬ ಒಂದು ಮೂಲಭೂತ ಅಂಶವನ್ನು ಸೂಚಿಸುತ್ತವೆ. ನಿರುದ್ಯೋಗ ನಿವಾರಣೆ ಎಂದರೆ ಅದು ನವ ಉದಾರವಾದಿ ಬಂಡವಾಳಶಾಹಿ ಆಳ್ವಿಕೆಯಲ್ಲಿ ಕೆಲವು "ಬದಲಾವಣೆ"ಗಳನ್ನು ಮಾಡುವ ಮೂಲಕ ಸಂಭವಿಸಬಹುದಾದ ವಿಷಯವಲ್ಲ, ನವ ಉದಾರವಾದಿ ಬಂಡವಾಳಶಾಹಿಯಿಂದ ಸಂಪೂರ್ಣವಾಗಿ ಭಿನ್ನವಾದ ಒಂದು ಸಾಮಾಜಿಕ–ಆರ್ಥಿಕ ವ್ಯವಸ್ಥೆಗೆ ಸಾಗುವ ವಿಷಯವಾಗಿದೆ. ಈ ಹೊಸ ವ್ಯವಸ್ಥೆಯು ನಿರುದ್ಯೋಗಿಗಳ ಪಡೆಯನ್ನು ನಿರ್ಮಿಸದೆ ಕಾರ್ಯನಿರ್ವಹಿಸುವುದು ಮಾತ್ರವಲ್ಲದೆ, ಪ್ರಭುತ್ವವು ದುಡಿಯುವ ಜನರ ಪರವಾಗಿ ಅರ್ಥವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುವ ಅವಕಾಶವನ್ನು ಪ್ರಜ್ಞಾಪೂರ್ವಕವಾಗಿ ನೀಡುವ ವ್ಯವಸ್ಥೆಯಾಗಬೇಕು.



ಭಯಂಕರ ನಿರುದ್ಯೋಗದ ಸನ್ನಿವೇಶ

ನವ–ಉದಾರವಾದೀ ಗಾಳಿಯಲ್ಲಿ ತೂರಿ ಹೋಗುತ್ತಿವೆ ಉದ್ಯೋಗಗಳು!

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ನಿರುದ್ಯೋಗ ಪರಿಸ್ಥಿತಿಯ ಬಗ್ಗೆ ಸೆಂಟರ್ ಫಾರ್ ಮಾನಿಟರಿಂಗ್ ದಿ ಇಂಡಿಯನ್ ಎಕಾನಮಿ (ಸಿಎಂಐಇ) ಹೊರತಂದಿರುವ ದತ್ತಾಂಶವು ಒಂದು ಭೀಕರ ಚಿತ್ರವನ್ನು ಮೂಡಿಸುತ್ತದೆ. ಕೋವಿಡ್–19 ಹರಡುವ ಮೊದಲೇ ಕೆಲವು ವರ್ಷಗಳಿಂದ ಇಂದಿನವರೆಗೂ ನಿರುದ್ಯೋಗ ದರವು ತೀವ್ರವಾಗಿ ಏರುತ್ತಲೇ ಇದೆ. ಕೋವಿಡ್ ಸಮಯದಲ್ಲಿ ನಿರುದ್ಯೋಗವು ಒಂದು ಉತ್ತುಂಗವನ್ನು ತಲುಪಿತ್ತು ಮತ್ತು ಜಿಡಿಪಿಯು ಪಾತಾಳಕ್ಕೆ ಇಳಿದಿತ್ತು. ಆನಂತರದಲ್ಲಿ ಜಿಡಿಪಿಯು ಚೇತರಿಸುತ್ತಾ ಬಂದಿದೆಯಾದರೂ ಸಹ, ನಿರುದ್ಯೋಗ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ.

2017–18ರಲ್ಲಿ ಶೇ. 4.7ರಷ್ಟಿದ್ದ ನಿರುದ್ಯೋಗ ದರವು 2018–19ರ ವೇಳಗೆ ಶೇ.6.3ರ ಮಟ್ಟಕ್ಕೆ ಏರಿತ್ತು. ಕೋವಿಡ್ ಸಂಬಂಧವಾಗಿ ಹೇರಿದ ಲಾಕ್‌ಡೌನ್ ಅವಧಿಯಲ್ಲಿ ಅದು ಒಂದು ಉತ್ತುಂಗವನ್ನು ತಲುಪಿತು: ಉದಾಹರಣೆಗೆ, ಡಿಸೆಂಬರ್ 2020ರಲ್ಲಿ, ಶೇ. 9.1ರಷ್ಟಿತ್ತು. ಆನಂತರದಲ್ಲಿ ಸ್ವಲ್ಪ ಇಳಿಯಿತು. ಆದರೆ, ಜಿಡಿಪಿಯು ದಾಖಲಿಸಿದ ಅಲ್ಪ ಚೇತರಿಕೆಗೆ ತಕ್ಕಂತೆ ನಿರುದ್ಯೋಗ ಕಡಿಮೆಯಾಗಲಿಲ್ಲ. ಲಭ್ಯವಿರುವ ಸಿಎಂಐಇ ನ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ, ಡಿಸೆಂಬರ್ 2022ರಲ್ಲಿ ಶೇ. 8.3ರಷ್ಟಿದ್ದ ನಿರುದ್ಯೋಗವು ಜನವರಿ 2023ರಲ್ಲಿ ಶೇ. 7.14ಕ್ಕೆ ಇಳಿದಿತ್ತು. ಮಾರ್ಚ್‌ನಲ್ಲಿ ಮತ್ತೆ ಶೇ. 7.8ಕ್ಕೆ ಏರಿತ್ತು. ಜಿಡಿಪಿಯ ಚೇತರಿಕೆಯು ಕುಂಠಿತವಾಗಿತ್ತಾದರೂ, 2022–23ರ ವರ್ಷದ ಜಿಡಿಪಿಯ ಅಂದಾಜು ಬೆಳವಣಿಗೆಯನ್ನು 2019–20ಕ್ಕೆ ಹೋಲಿಸಿದರೆ ಶೇ. 8.4ರಷ್ಟು ವೃದ್ಧಿಸುತ್ತದೆ ಮತ್ತು 2018–19ಕ್ಕೆ ಹೋಲಿಸಿದರೆ ಶೇ. 12.95 ರಷ್ಟು ವೃದ್ಧಿಸುತ್ತದೆ ಎಂದು ಹೇಳಲಾಗಿತ್ತು. ಜಿಡಿಪಿಯು ಶೇ. 12.95ರಷ್ಟು ವೃದ್ಧಿಸಿತಾದರೂ, 2022–23ರ ಕೊನೆಯಲ್ಲಿ ನಿರುದ್ಯೋಗ ದರವು, 2018–19ರ ಶೇ. 6.3ಕ್ಕೆ ಹೋಲಿಸಿದರೆ, ಶೇ. 7.8ರ ಮಟ್ಟಕ್ಕೆ ಏರಿಕೆಯಾಗಿತ್ತು. ಈ ನಾಲ್ಕು ವರ್ಷಗಳಲ್ಲಿ ಕಾರ್ಮಿಕ ಬಲವು ಶೇ. 12.95ಕ್ಕಿಂತ ಹೆಚ್ಚು ಅಥವಾ ಶೇ. 12.95ರಷ್ಟಾದರೂ ಹೆಚ್ಚಿರುವ ಸಾಧ್ಯತೆ ಇಲ್ಲದ ಕಾರಣ, 2018–19 ಮತ್ತು 2022–23ರ ನಡುವೆ ಪ್ರತಿ ಯೂನಿಟ್ ಜಿಡಿಪಿಯ ಉದ್ಯೋಗ ಪ್ರಮಾಣವು ಇಳಿಕೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಇಳಿಕೆಯು, ಇಷ್ಟು ಸಣ್ಣ ಅವಧಿಯಲ್ಲಿ, ಉತ್ಪಾದನಾ ಚಟುವಟಿಕೆಗಳಲ್ಲಿ ಜಾರಿಗೆ ತಂದ ತಾಂತ್ರಿಕ ಬದಲಾವಣೆಗಳ ಮೂಲಕ ಸಂಭವಿಸಿದೆ ಎಂದು ಹೇಳಲಾಗದು.

ಆದ್ದರಿಂದ, ಕೋವಿಡ್ ಹರಡುವ ಮೊದಲಿನ ಪರಿಸ್ಥಿತಿಗೆ ಹೋಲಿಸಿದರೆ ಸಧ್ಯದಲ್ಲಿ ಮೇಲ್ಮಟ್ಟದಲ್ಲಿರುವ ನಿರುದ್ಯೋಗ ದರವು ಈ ಕೆಳಗಿನ ಎರಡು ಅಂಶಗಳ ಪರಿಣಾಮವೆಂದು ಹೇಳಬಹುದು: ಒಂದು, ಚೇತರಿಕೆಯು ಪ್ರಧಾನವಾಗಿ ಕಾರ್ಮಿಕರನ್ನು ಹೆಚ್ಚಾಗಿ ಬಳಸದ ಕೈಗಾರಿಕೆಗಳಲ್ಲಿ



ಹಾಗೂ ಇತರ ಚಟುವಟಿಕೆಗಳಲ್ಲಿ ಸಂಭವಿಸಿದೆ. ಅಂದರೆ, ಹೆಚ್ಚು ಉದ್ಯೋಗಗಳಿಂದ ಕೂಡಿದ ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ಕೈಗಾರಿಕೆಗಳ ವಲಯವನ್ನು ಚೇತರಿಕೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಎರಡನೆಯದು, ಬೇಡಿಕೆ–ಇಳಿಕೆಗೆ ಪ್ರತಿಕ್ರಿಯೆಯಾಗಿ ಅಥವಾ "ಮಿತವ್ಯಯ" ಪಾಲನೆಯ ದೃಷ್ಟಿಯಲ್ಲಿ ಇತ್ತೀಚೆಗೆ ಗಮನಾರ್ಹ ಸಂಖ್ಯೆಯ ಕೆಲಸಗಾರರನ್ನು ಕೊನೆಯ ಪಕ್ಷ ತಾತ್ಕಾಲಿಕವಾಗಿಯಾದರೂ ವಜಾ ಮಾಡಲಾಗಿದೆ.

ಈ ತಾತ್ಕಾಲಿಕ ವಜಾಗಳು ಸಂಭವಿಸಿದ್ದವು ಎಂಬುದಕ್ಕೆ ಸಿಎಂಐಇ ಒದಗಿಸಿರುವ ಅಂಕಿ–ಅಂಶಗಳು ಪುರಾವೆಗಳಾಗುತ್ತವೆ. ಈ ವರ್ಷದ ಫೆಬ್ರವರಿಯಲ್ಲಿ 409.9 ಮಿಲಿಯನ್ ಇದ್ದ ಉದ್ಯೋಗಿಗಳ ಸಂಖ್ಯೆಯು ಮಾರ್ಚ್ ತಿಂಗಳ ಅಂತ್ಯದ ವೇಳೆಗೆ 407.6 ಮಿಲಿಯನ್‌ಗಳಿಗೆ ಇಳಿದಿದೆ ಎಂಬುದು ಸಿಎಂಐಇ ನ ಅಂದಾಜು. ಪ್ರಾಸಂಗಿಕವಾಗಿ ಹೇಳುವುದಾದರೆ, 2019–20ರಲ್ಲಿ ಭಾರತದ ಒಟ್ಟು ಉದ್ಯೋಗಿಗಳ ಸಂಖ್ಯೆಯು 408.9 ಮಿಲಿಯನ್‌ಅಷ್ಟಿತ್ತು. ಅಂದರೆ, ಮಾರ್ಚ್ 2023ರಲ್ಲಿ ಉದ್ಯೋಗ ಹೊಂದಿದ್ದ ವ್ಯಕ್ತಿಗಳ ಸಂಖ್ಯೆಯು 2019–20ರಲ್ಲಿ ಇದ್ದುದಕ್ಕಿಂತಲೂ ಕೆಳಗಿದೆ. ಅಂದರೆ, ಇದ್ದ ಉದ್ಯೋಗಗಳೂ ನಾಶವಾಗಿವೆ. ಇದು ನಿಜಕ್ಕೂ ಒಂದು ಭಯಂಕರ ಸನ್ನಿವೇಶವೇ ಸರಿ.

ವಿಪರ್ಯಾಸ

ಈ ಸನ್ನಿವೇಶದಲ್ಲಿ ದೇಶದ ಉದ್ಯೋಗ ಪರಿಸ್ಥಿತಿ ಸುಧಾರಿಸಿದೆ ಎಂದು ಸರ್ಕಾರದ ವಕ್ತಾರರು ಹೇಳುತ್ತಿರುವುದು ಒಂದು ವಿಪರ್ಯಾಸವೇ ಸರಿ. ತಮ್ಮ ಈ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಈ ವಕ್ತಾರರು ಎರಡು ವಾದಗಳನ್ನು ಮಂಡಿಸುತ್ತಾರೆ: ಮೊದಲನೆಯದು, ಸಿಎಂಐಇ ದತ್ತಾಂಶವು ವಿಶ್ವಾಸಾರ್ಹವಲ್ಲ ಎಂಬುದು ಮತ್ತು ಅಧಿಕೃತ ಆವರ್ತಕ ಕಾರ್ಮಿಕ ಬಲ ಸಮೀಕ್ಷೆಗಳು (PLFS) ಸೂಚಿಸುವದಕ್ಕಿಂತ ಭಿನ್ನವಾಗಿದೆ ಎಂಬುದು. ಅಂದರೆ, ಈ ಸಮೀಕ್ಷೆಗಳ ಪ್ರಕಾರ ಉದ್ಯೋಗ ಪರಿಸ್ಥಿತಿ ಸುಧಾರಿಸಿದೆ. ಎರಡನೆಯದು, ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿದವರ ಸಂಖ್ಯೆಯೇ ಇಳಿದಿದೆ. ಆದ್ದರಿಂದ ಉದ್ಯೋಗ ಪರಿಸ್ಥಿತಿ ಸುಧಾರಿಸಿದೆ ಎಂಬುದು.

ಈ ಎರಡೂ ವಾದಗಳಲ್ಲೂ ಹುರುಳಿಲ್ಲ. ಉದ್ಯೋಗ ಪರಿಸ್ಥಿತಿಯ ಬಗ್ಗೆ PLFS ಮತ್ತು CMIE ದತ್ತಾಂಶಗಳ ನಡುವೆ ಇರುವ ಒಂದು ಪ್ರಮುಖ ವ್ಯತ್ಯಾಸವೆಂದರೆ, PLFS ವ್ಯಾಪ್ತಿಯು ಆಂತರಿಕ ಆರ್ಥಿಕ ಚಟುವಟಿಕೆಗಳಲ್ಲಿ ವೇತನರಹಿತ ಕೆಲಸಗಳನ್ನೂ ಒಳಗೊಳ್ಳುತ್ತದೆ ಮತ್ತು CMIE ದತ್ತಾಂಶಗಳು ವೇತನರಹಿತ ಕೆಲಸಗಳನ್ನು ಒಳಗೊಂಡಿಲ್ಲ. ಆದರೆ, ಆಂತರಿಕ ಆರ್ಥಿಕ ಚಟುವಟಿಕೆಗಳಲ್ಲಿ ವೇತನರಹಿತ ಕೆಲಸಗಳನ್ನು ಸೇರಿಸುವುದರಿಂದ ಉದ್ಭವಿಸುವ ಸಮಸ್ಯೆಯೆಂದರೆ, ತಾವು ತೊಡಗಿದ್ದ ಹೊರಗಿನ ಉದ್ಯೋಗದಿಂದ ಹೊರದಬ್ಬಲ್ಪಟ್ಟಾಗ, ಕುಟುಂಬದ ಸದಸ್ಯರು ಲಭ್ಯವಿರುವ ತಮ್ಮದೇ ಕುಟುಂಬ–ಸಂಬಂಧಿತ ಕೆಲಸಕಾರ್ಯಗಳನ್ನು ಹಂಚಿಕೊಳ್ಳುತ್ತಾರೆ. ಈ ವಿದ್ಯಮಾನವನ್ನು ನಿರುದ್ಯೋಗದ ಹೆಚ್ಚಳವೆಂದು PLFS ತೋರಿಸುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅದೃಷ್ಟ ಕೈಕೊಟ್ಟಾಗ ಕುಟುಂಬವು ತನ್ನ ಕುಟುಂಬ–ಸಂಬಂಧಿತ ಸಣ್ಣ ಪುಟ್ಟ ಕೆಲಸಕಾರ್ಯಗಳಲ್ಲಿ ತೊಡಗಿಕೊಳ್ಳುವ ಅನಿವಾರ್ಯತೆಗೆ ಒಳಗಾಗುತ್ತದೆ. PLFS ಅದನ್ನು ನಿರುದ್ಯೋಗವೆಂದು ಪರಿಗಣಿಸುವುದಿಲ್ಲ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ದೇಶದೊಳಗಿನ ಆರ್ಥಿಕ ಚಟುವಟಿಕೆಗಳಲ್ಲಿ ಲಾಭದಾಯಕವಾಗಿ ಉದ್ಯೋಗದಲ್ಲಿ ತೊಡಗಿಕೊಳ್ಳುವುದಕ್ಕೂ ಮತ್ತು ಅಂತಹ ಒಂದು ಹೊರಗಿನ ಉದ್ಯೋಗದಿಂದ ಹೊರದಬ್ಬಲ್ಪಟ್ಟಾಗ ಅನಿವಾರ್ಯವಾಗಿ ಕುಟುಂಬ–ಸಂಬಂಧಿತ ಸಣ್ಣ ಪುಟ್ಟ ಕೆಲಸಕಾರ್ಯಗಳಲ್ಲಿ ತೊಡಗಿಕೊಳ್ಳುವಂತೆ ಕಟ್ಟಿಹಾಲ್ಪಡುವುದಕ್ಕೂ ನಡುವೆ ಇರುವ ವ್ಯತ್ಯಾಸವನ್ನು PLFS ಗುರುತಿಸುವುದಿಲ್ಲ.

CMIE ದತ್ತಾಂಶಗಳು ಈ ನ್ಯೂನತೆಯಿಂದ ಮುಕ್ತವಾಗಿವೆ. ತನ್ನ ಸರ್ವೆಯಲ್ಲಿ, ದೇಶದೊಳಗಿನ ಆರ್ಥಿಕ ಚಟುವಟಿಕೆಗಳಲ್ಲಿ ವೇತನರಹಿತ ಕೆಲಸಗಳನ್ನು CMIE ಹೊರಗಿಟ್ಟಿದೆ, ನಿಜ. ಆದರೆ, ಅರ್ಥವ್ಯವಸ್ಥೆಯಲ್ಲಿ ವೇತನದ ಉದ್ಯೋಗಾವಕಾಶಗಳಿಗೆ ನಿಖರವಾಗಿ ಏನಾಗುತ್ತಿದೆ ಎಂಬುದನ್ನು ಸುಸಂಗತವಾಗಿ ಹಿಡಿದಿಡುವ ಹೆಚ್ಚುಗಾರಿಕೆಯನ್ನು ಅದು ಹೊಂದಿದೆ. ಹೆಚ್ಚುತ್ತಿರುವ ನಿರುದ್ಯೋಗದ ಅವಧಿಯಲ್ಲಿ ಉದ್ಯೋಗಗಳು ಇಳಿಯುತ್ತಿವೆ. ಆದ್ದರಿಂದ, CMIE ಅನುಸರಿಸುವ ಕ್ರಮವು ಒಟ್ಟಾರೆ ನಿರುದ್ಯೋಗ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಒಂದು ಸಮಂಜಸ ಮತ್ತು ನಿಖರ ಬದಲಿ (proxy) ವಿಧಾನವನ್ನು ಒದಗಿಸುತ್ತದೆ.

ಅಂತೆಯೇ, ಹೊಟ್ಟೆಪಾಡಿಗಾಗಿ ದೂರದ ನಗರಗಳಲ್ಲಿ ಕೂಲಿ ಮಾಡುತ್ತಿದ್ದ ಜನರು ಕೋವಿಡ್ ಸಂದರ್ಭದಲ್ಲಿ ಹೇರಿದ ವಿಚಾರ–ಹೀನ ಲಾಕ್‌ಡೌನ್‌ನಿಂದಾಗಿ ಅನ್ನ ಮತ್ತು ವಸತಿ ಎರಡನ್ನೂ ಕಳೆದುಕೊಂಡರು. ಆದ್ದರಿಂದ ಅವರು ತಮ್ಮ ತಮ್ಮ ಹಳ್ಳಿಗಳಿಗೆ ಮರಳಿದರು. ಅವರ ಪೈಕಿ ಕೆಲವರು ನಗರಗಳಿಗೆ ಮರಳಿದರು. ಹಾಗಾಗಿ, ಲಾಕ್‌ಡೌನ್ ಅವಧಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಮೇಲೆ ಬಿದ್ದ ಭಾರಿ ಹೊರೆ ಕಡಿಮೆಯಾಗಿದೆ. ಅದೇನೂ ಆಶ್ಚರ್ಯದ ಸಂಗತಿಯಲ್ಲ. ಲಾಕ್‌ಡೌನ್ ಅವಧಿಗೆ ಹೋಲಿಸಿದರೆ ನಿರುದ್ಯೋಗ ದರ ಸ್ವಲ್ಪ ಇಳಿದಿದೆ ಎಂಬುದನ್ನು ಇದು ಸೂಚಿಸುತ್ತದೆಯಾದರೂ, ಸಾಂಕ್ರಾಮಿಕ ಪೂರ್ವದ ಮಟ್ಟಗಳಿಗೆ ಹೋಲಿಸಿದರೆ ನಿರುದ್ಯೋಗ ದರ ಏರುತ್ತಿರುವುದನ್ನಾಗಲಿ ಅಥವಾ ಲಾಕ್‌ಡೌನ್ ನಂತರ ನಿರುದ್ಯೋಗ ಕುಸಿದ ದರ ಕ್ಷುಲ್ಲಕವಾಗಿತ್ತು ಎಂಬ ಅಂಶವನ್ನಾಗಲಿ ಇದು ಅಲ್ಲಗಳೆಯುವುದಿಲ್ಲ.

ಅದಲ್ಲದೆ, ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆಯೇ ಕೇಂದ್ರ ಸರ್ಕಾರವು ಸ್ನೇಹ ಭಾವ ಹೊಂದಿಲ್ಲ. ಹಾಗಾಗಿ ಅದು ಈ ಯೋಜನೆಯಡಿಯಲ್ಲಿ ರಾಜ್ಯಗಳಿಗೆ ಹಣ ಬಿಡುಗಡೆ ಮಾಡುವಲ್ಲಿ ವರ್ಷಗಟ್ಟಲೆ ತಡ ಮಾಡುತ್ತದೆ. ಆದ್ದರಿಂದ ರಾಜ್ಯ ಸರ್ಕಾರಗಳು ಈ ಯೋಜನೆಯಡಿಯಲ್ಲಿ ಕೆಲಸ ಮಾಡಿದವರಿಗೆ ಕೂಲಿಯನ್ನು ಸಮಯಕ್ಕೆ ಸರಿಯಾಗಿ ವಿತರಿಸಲಾಗುತ್ತಿಲ್ಲ. ಕೂಲಿಯ ಬಾಕಿಯನ್ನು ತಿಂಗಳುಗಟ್ಟಲೆ ಉಳಿಸಿಕೊಳ್ಳಲಾಗಿದೆ. ಹಾಗಾಗಿ, ನಿರುದ್ಯೋಗಿಗಳಿಗೆ ಈ ಯೋಜನೆಯಡಿ ಕೆಲಸ ಕೇಳುವ ಉತ್ಸಾಹವೇ ಕುಗ್ಗುತ್ತದೆ. ಆದ್ದರಿಂದ, ನಿರುದ್ಯೋಗದ ಅಗಾಧತೆಯನ್ನು ಅಳೆಯುವ ಉದ್ದೇಶಕ್ಕಾಗಿ ಈ ಯೋಜನೆಯಡಿಯಲ್ಲಿ ಉದ್ಯೋಗದ ಮೇಲಿನ ಬೇಡಿಕೆಯ ಅಂಶವು ಒಂದು ಕಳಪೆ ಸೂಚಕವಾಗುತ್ತದೆ. ವಾಸ್ತವವಾಗಿ ಯೋಜನೆಯಡಿಯಲ್ಲಿ ಕೆಲಸ ಮಾಡಿದವರಿಗೆ ಕೊಡಬೇಕಾದ ಕೂಲಿ ಕೊಡುವಲ್ಲಿ ಕೇಂದ್ರ ಸರ್ಕಾರವು ತಡ ಮಾಡುತ್ತಿರುವುದರಿಂದಾಗಿ ಉದ್ಯೋಗ ಕೇಳಲು ಜನರು ಮುಂದೆ ಬರುತ್ತಿಲ್ಲ. ಆದರೆ, ಅದೇ ಸರ್ಕಾರವು ನಿರುದ್ಯೋಗ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳಿಕೊಳ್ಳಲು ಅವರು ಕೆಲಸ ಕೇಳಲು ಮುಂದೆ ಬಾರದ ಅಂಶವನ್ನೇ ಬಳಸುತ್ತದೆ!

ನಿರುದ್ಯೋಗದ ಪುಟ 14 ಕ್ಕೆ

ರಾಷ್ಟ್ರೀಯ ಮಹಿಳಾ ಸಂಘಟನೆಗಳ ಜಂಟಿ ಪ್ರತಿಭಟನೆಗಳು, ಸಹಿ ಸಂಗ್ರಹ ಅಭಿಯಾನ

ಬಿಜೆಪಿಯ ಮಹಿಳಾ ವಿರೋಧಿ ಮುಖವನ್ನು ಬಯಲು ಮಾಡಲು ದೇಶಾದ್ಯಂತ ಮಹಿಳೆಯರ ಸಭೆಗಳು

ನ್ಯಾಯಕ್ಕಾಗಿ ಹೋರಾಡುತ್ತಿರುವ ಮಹಿಳಾ ಕುಸ್ತಿಪಟುಗಳ ಹೋರಾಟವನ್ನು ಸಕ್ರಿಯವಾಗಿ ಬೆಂಬಲಿಸುತ್ತಿರುವ ನಾಲ್ಕು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ತಕ್ಷಣ ಬಂಧಿಸುವಂತೆ ಮತ್ತು ಮತ್ತು ಹರಿಯಾಣ ರಾಜ್ಯ ಸಚಿವ ಸಂದೀಪ್ ಸಿಂಗ್ ಅವರ ಬಂಧನ ಮತ್ತು ವಜಾಕ್ಕೆ ದೇಶದಾದ್ಯಂತ ಜಂಟಿ ಪ್ರತಿಭಟನೆ/ಧರಣಿ/ ಇತ್ಯಾದಿಗಳನ್ನು ನಡೆಸಲು ಕರೆ ನೀಡಿವೆ.

ದೇಶದ ವಿವಿಧ ಭಾಗಗಳಲ್ಲಿ ನೂರಾರು ಪ್ರತಿಭಟನೆಗಳು ನಡೆಯಲಿವೆ. ಬಿಜೆಪಿಯ ಮಹಿಳಾ ವಿರೋಧಿ ಮುಖವನ್ನು ಬಯಲು ಮಾಡಲು ಮಹಿಳೆಯರು ಗ್ರಾಮಗಳು, ಬಸ್ತಿಗಳು ಮತ್ತು ಮೊಹಲ್ಲಾಗಳಲ್ಲಿ ಸಭೆಗಳನ್ನು ನಡೆಸುತ್ತಾರೆ. ಲಕ್ಷಗಟ್ಟಲೆ ಸಹಿ ಸಂಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿಗೆ ಕಳುಹಿಸಲಾಗುವುದು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ), ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಐಡಬ್ಲ್ಯು), ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಮತ್ತು ಅಖಿಲ ಭಾರತ ಅಗ್ರಗಾಮಿ ಮಹಿಳಾ ಸಂಘಟನೆ (ಎಐಎಎಂಎಸ್) ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಮಹಿಳಾ ಕುಸ್ತಿಪಟುಗಳು ಈ ಮೊದಲು ಜನವರಿ 2023 ರಲ್ಲಿ ದೆಹಲಿಯಲ್ಲಿ ಪ್ರತಿಭಟಿಸಿದ್ದರು, ತನಿಖೆಯ ಭರವಸೆಯ ಮೇಲೆ ಪ್ರತಿಭಟನೆಯನ್ನು ಕೊನೆಗೊಳಿಸಿದರು, ಆದರೆ ಅದು ಪಾರದರ್ಶಕವಾಗಿಯಂತೂ ನಡೆದಿಲ್ಲ. ಆದ್ದರಿಂದ, ಅವರಿಗೆ ಪ್ರತಿಭಟನೆಗೆ ಹಿಂತಿರುಗುವುದನ್ನು ಬಿಟ್ಟು ಬೇರೆ ದಾರಿಯಿಲ್ಲದಾಯಿತು, ಅವರು ಪೊಲೀಸರು ತಮ್ಮ ಕರ್ತವ್ಯವನ್ನು ಮಾಡುವಂತೆ ಕೇಳಿಕೊಂಡರು ಮತ್ತು ಕುಸ್ತಿಪಟುಗಳ ಆರೋಪವನ್ನು ತನಿಖೆ ಮಾಡಿದ ಮೇಲ್ವಿಚಾರಣಾ ಸಮಿತಿಯ ವರದಿಯನ್ನು ತಮಗೆ ಲಭ್ಯವಾಗುವಂತೆ ಮಾಡಬೇಕು ಎಂದು ಕೇಳಿಕೊಂಡರು. ಸಮಿತಿಯ ವರದಿಯನ್ನು ಹಂಚಿಕೊಳ್ಳಲು ಐಒಎ ನಿರಾಕರಿಸಿದೆ, ಆದರೆ ಅದರ ಸದಸ್ಯರು ಮಹಿಳಾ ಕುಸ್ತಿಪಟುಗಳನ್ನು ಬಹಿರಂಗವಾಗಿಯೇ ಕೀಳಾಗಿ ಮಾತಾಡಿದ್ದಾರೆ, ಅವರು ದೂರುಗಳನ್ನು ರಾಜಕೀಯಕರಣಗೊಳಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ ಎಂದು ಈ ಸಂಘಟನೆಗಳು ಪ್ರಕಟಿಸಿರುವ ಜಂಟಿ ಮನವಿ ಹೇಳಿದೆ.

“ಡಬ್ಲ್ಯುಎಫ್‌ಐ ಮುಖ್ಯಸ್ಥರು, ಅಂದಿನ ಕ್ರೀಡಾ ಸಚಿವರು ಮತ್ತು ಡಬ್ಲ್ಯುಎಫ್‌ಐನಿಂದ ನೇಮಕಗೊಂಡ ಇತರ ಕೆಲವು ತರಬೇತುದಾರರಿಂದ ಲೈಂಗಿಕ ಕಿರುಕುಳದ ವರದಿಗಳು ಆಕ್ರೋಶಕಾರಿ. ಅದರ ಸದಸ್ಯರ ಭ್ರಷ್ಟಾಚಾರ ಮತ್ತು ಲೈಂಗಿಕ ದುಷ್ಕೃತ್ಯಗಳ ಬಗ್ಗೆ ಸರ್ಕಾರದ ಉನ್ನತ ಸ್ತರಗಳಿಗೆ ತಿಳಿದಿಲ್ಲವೆಂದಲ್ಲ. ದುರದೃಷ್ಟವಶಾತ್, ನ್ಯಾಯಕ್ಕಾಗಿ ಎಲ್ಲಾ ಮನವಿಗಳು ಕಿವುಡು ಕಿವಿಗೆ ಬಿದ್ದವು. ಪ್ರಸ್ತುತ ಆಡಳಿತವು ಆರೋಪಿಗಳಿಗೆ ಅವರು ಖಂಡಿತವಾಗಿಯೂ ಅರ್ಹರಲ್ಲದ ರಕ್ಷಣೆಯನ್ನು ಒದಗಿಸುತ್ತಿದೆ ಎಂದು ಹೇಳುವುದರಲ್ಲಿ ನಮಗೆ ಯಾವುದೇ ಸಂಕೋಚವಿಲ್ಲ – ಶ್ರೀ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಸಂಸತ್ತಿನಲ್ಲಿ ಆಡಳಿತಾರೂಢ ಬಿಜೆಪಿಯನ್ನು ಪ್ರತಿನಿಧಿಸುವ ಸಂಸದರಾಗಿದ್ದಾರೆ. ಅಲ್ಲದೆ, ಶ್ರೀ ಸಂದೀಪ್ ಸಿಂಗ್ ಅವರು ಹರಿಯಾಣದ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿ ಮುಂದುವರಿದಿದ್ದಾರೆ. (ಕ್ರೀಡಾ ಮತ್ತು ಇತರ ಖಾತೆಗಳೊಂದಿಗೆ ಅವರು ಸಂಪುಟ ದರ್ಜೆಯ ಸಚಿವರಾಗಿದ್ದಾರೆ; ಮಹಿಳಾ ಸಂಘಟನೆಗಳ ಸಾಕಷ್ಟು ಪ್ರತಿಭಟನೆಯ ನಂತರ, ಕ್ರೀಡಾ ಖಾತೆಯನ್ನು ಅವರಿಂದ ಹಿಂತೆಗೆದುಕೊಂಡರೂ, ಅವರು ಸಚಿವರಾಗಿ ಮುಂದುವರೆದಿದ್ದಾರೆ.). ಇದೆಲ್ಲವೂ ಸಾಲದೆಂಬಂತೆ, ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಕುಸ್ತಿಪಟುಗಳನ್ನು ಬೆದರಿಸುತ್ತಿದ್ದಾರೆ ಮತ್ತು ಬೆದರಿಕೆ ಹಾಕುತ್ತಿದ್ದಾರೆ ಎಂದು ವರದಿಯಾಗಿದೆ – ಕುಸ್ತಿಪಟುಗಳು ತಮಗೆ ಜೀವಭಯವಿದೆ ಎಂದು ಹೇಳುತ್ತಾರೆ” ಎಂದಿರುವ ಜಂಟಿ ಮನವಿ ಈ ಕೆಳಗಿನ ಒತ್ತಾಯಗಳನ್ನು ಮುಂದಿಟ್ಟಿದೆ:

- ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್‌ರನ್ನು ಇನ್ನಷ್ಟು ತಡಮಾಡದೆ ಬಂಧಿಸಬೇಕು ಮತ್ತು ಅವರನ್ನು ಎಲ್ಲಾ ರಾಜಕೀಯ ಮತ್ತು ಸರ್ಕಾರಿ ಸ್ಥಾನಗಳಿಂದ ಅಮಾನತುಗೊಳಿಸಬೇಕು.
- ಹರಿಯಾಣದ ಬಿಜೆಪಿ ಸರ್ಕಾರದಲ್ಲಿ ಸಚಿವ ಸಂದೀಪ್ ಸಿಂಗ್‌ರನ್ನು ವಜಾ ಮಾಡಬೇಕು ಮತ್ತು ಬಂಧಿಸಬೇಕು.
- ಪ್ರತಿಭಟಿಸುತ್ತಿರುವ ಕುಸ್ತಿಪಟುಗಳಿಗೆ ಭದ್ರತೆ ಒದಗಿಸಬೇಕು.
- ನ್ಯಾಯೋಚಿತ, ವೈಜ್ಞಾನಿಕ ಮತ್ತು ಸಮಯಬದ್ಧವಾದ ತನಿಖೆಯ ನಂತರ ಆರೋಪ ಪಟ್ಟಿಯೊಂದಿಗೆ ಕಾನೂನಿನ ಆಳ್ವಿಕೆಯ ಪಾರಮ್ಯವನ್ನು ಖಚಿತಪಡಿಸಬೇಕು.
- ಪ್ರತಿಭಟನಾಕಾರರು ಮತ್ತು ಪತ್ರಕರ್ತರ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಡಿಸಿಪಿ ವಿರುದ್ಧ ಕ್ರಮ ಕೈಗೊಳ್ಳಬೇಕು.
- ಅನ್ಯಾಯದ ವಿರುದ್ಧ ಪ್ರತಿಭಟಿಸುವ ಹಕ್ಕನ್ನು ಗೌರವಿಸಬೇಕು. ಈ ಪ್ರಕರಣದಲ್ಲಿ ಇದರ ಅರ್ಥವೆಂದರೆ, ಪ್ರತಿಭಟನಾ ಸ್ಥಳದಲ್ಲಿ ತಕ್ಷಣದ ವಿದ್ಯುತ್ ಸಂಪರ್ಕದ ಮರುಸ್ಥಾಪನೆ, ಜೊತೆಗೆ ಕುಡಿಯುವ ನೀರು ಮತ್ತು ಸೌಹಾರ್ದಕ್ಕೆ ಸೇರುವ ಎಲ್ಲರಿಗೂ ಭದ್ರತೆಯನ್ನು ಒದಗಿಸುವುದು ಎಂದರ್ಥ.
- ಎಲ್ಲಾ ಆರೋಪಗಳ ತನಿಖೆ ನಿವೃತ್ತ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ನಡೆಯಬೇಕು.

ದಿಲ್ಲಿ ರಾಜ್ಯ ಸರಕಾರದ ಅಧಿಕಾರಗಳನ್ನು ಕುರಿತ ತೀರ್ಪು: ಕೇಂದ್ರ ಸರಕಾರಕ್ಕೆ ಸುಪ್ರಿಂ ಕೋರ್ಟ್ ಕಪಾಳಮೋಕ್ಷ

ಸಾರ್ವಜನಿಕ ಸುವ್ಯವಸ್ಥೆ, ಪೊಲೀಸ್ ಮತ್ತು ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ರಾಷ್ಟ್ರೀಯ ರಾಜಧಾನಿಯಲ್ಲಿ ಆಡಳಿತಾತ್ಮಕ ಸೇವೆಗಳ ಮೇಲೆ ದೆಹಲಿಯ ಎನ್‌ಸಿಟಿ(ರಾಷ್ಟ್ರೀಯ ರಾಜಧಾನಿ ಪ್ರದೇಶ) ಸರ್ಕಾರವು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರವನ್ನು ಹೊಂದಿದೆ ಎಂಬ ಸುಪ್ರೀಂ ಕೋರ್ಟ್ ಸಂವಿಧಾನ ಪೀಠದ ತೀರ್ಪನ್ನು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಸ್ವಾಗತಿಸಿದೆ. ಇದು ವಿಧಾನಸಭೆ ಚುನಾವಣೆಗಳಲ್ಲೂ ಮತ್ತು ಎಂಸಿಡಿ(ದಿಲ್ಲಿ ಮಹಾನಗರ ಕಾರ್ಪೊರೇಷನ್) ಚುನಾವಣೆಗಳಲ್ಲಿ ಬಿಜೆಪಿಯನ್ನು ಪದೇ ಪದೇ ತಿರಸ್ಕರಿಸಿದರೂ ಉಪರಾಜ್ಯಪಾಲರ ಮೂಲಕ ದಿಲ್ಲಿಯ ಜನರನ್ನು ಆಳಲು ಪ್ರಯತ್ನಿಸುತ್ತಿರುವ ಕೇಂದ್ರ ಸರ್ಕಾರಕ್ಕೆ ನ್ಯಾಯಾಲಯದ ಕಪಾಳಮೋಕ್ಷವಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಈ ತೀರ್ಪು ದಿಲ್ಲಿಯ ಜನರಿಗೆ ಪೂರ್ಣ ರಾಜ್ಯದ ದರ್ಜೆಯತ್ತ ಮತ್ತು ಬಹು–ಪ್ರಾಧಿಕಾರಗಳಿಂದ ಆಡಳಿತಕ್ಕೆ ಬದಲಾಗಿ ಅವರ ಸ್ವಯಮಾಡಳಿತದ ಹಕ್ಕಿನತ್ತ ಒಂದು ಹೆಜ್ಜೆ ಕೂಡ ಆಗಿದೆ. ಉಪರಾಜ್ಯಪಾಲರ ಮೂಲಕ ಕೇಂದ್ರ ಸರ್ಕಾರದ ಅಧಿಕಾರಗಳನ್ನು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟವಾಗಿ ನಿರೂಪಿಸಿರುವುದರಿಂದ, ಎಎಪಿ ನೇತೃತ್ವದ ರಾಜ್ಯ ಸರ್ಕಾರವು ಇನ್ನು ಮುಂದೆ ದಿಲ್ಲಿಯ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವುದು ಈ ಹಂತದಲ್ಲಿ ಮುಖ್ಯವಾಗಿದೆ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿ ನೆನಪಿಸಿದೆ.

ಭಯಂಕರ ನಿರುದ್ಯೋಗದ ಸನ್ನಿವೇಶ ನವ–ಉದಾರವಾದೀ ಗಾಳಿಯಲ್ಲಿ ತೂರಿ.... ಪುಟ 13 ರಿಂದ

ಅಂಕಿಅಂಶಗಳು ಒಟ್ಟಾರೆಯಾಗಿ ದುಡಿಯುವ ಜನರ ಸರಾಸರಿ ನಿಜ ವರಮಾನದ ಅಂಕಿಅಂಶಗಳೊಂದಿಗೆ ಮತ್ತು ಸ್ವಯಂ ಉದ್ಯೋಗಿಗಳ ಸರಾಸರಿ ನಿಜ ವರಮಾನದೊಂದಿಗೆ ಸಂಬಂಧ ಹೊಂದಿವೆ ಎಂದು ಭಾವಿಸಲಾಗಿದೆ. ಏಕೆಂದರೆ ಸ್ವಯಂ–ಉದ್ಯೋಗಿಗಳ ಗುಂಪು ಸಾಮಾನ್ಯವಾಗಿ ಕಾರ್ಮಿಕರ ಮೀಸಲು ಪಡೆ ಇರುವಲ್ಲೇ ಒಟ್ಟಿಗೆ ಒಂದೇಕಡೆ ನೆಲೆಸಿರುತ್ತದೆ. ಉದ್ಯೋಗಗಳ ಕುಸಿತವು ಮೀಸಲು ಪಡೆಯ ಅನುಪಾತವನ್ನು ಹೆಚ್ಚಿಸುತ್ತದೆ. ಇದು ಸ್ವಯಂ–ಉದ್ಯೋಗಿಗಳ ವಲಯದಲ್ಲಿ ಅವರ ಸರಾಸರಿ ನಿಜ ಆದಾಯವನ್ನು ಇಳಿಕೆ ಮಾಡುತ್ತದೆ. 2022ರ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಗ್ರಾಮೀಣ ಮತ್ತು ನಗರ ಭಾರತದ ಸ್ವಯಂ–ಉದ್ಯೋಗಿಗಳ ಸರಾಸರಿ ನಿಜ ಆದಾಯವು ಲಾಕ್‌ಡೌನ್ ಸಮಯದಲ್ಲಿ ತಲುಪಿದ ಕೆಳ ಮಟ್ಟಕ್ಕಿಂತ ತುಸು ಉನ್ನತವಾಗಿಯೂ ಮತ್ತು 2019ರ ಏಪ್ರಿಲ್–ಜೂನ್ ಅವಧಿಯಲ್ಲಿ ಇದ್ದುದಕ್ಕಿಂತ ತುಸು ಕೆಳಗೂ ಇತ್ತು ಎಂಬುದನ್ನು ಸರ್ಕಾರದ್ದೇ ಕಐಈಖ ದತ್ತಾಂಶವು ತೋರಿಸುತ್ತದೆ (ಚಂದ್ರಶೇಖರ್ ಮತ್ತು ಘೋಷ್, ಮ್ಯಾಕ್ರೊಸ್ಕಾನ್). ಇದು ನಿರುದ್ಯೋಗದ ಬಗ್ಗೆ CMIE ಶೋಧನೆಯನ್ನು ದೃಢಪಡಿಸುತ್ತದೆ.

ಉದಾರೀಕರಣದ ಗೊಂಬೆ

ಭಾರತದ ನಿರುದ್ಯೋಗದ ಅಂಕಿಅಂಶಗಳು ಒಂದು ಮೂಲಭೂತ ಅಂಶವನ್ನು ಸೂಚಿಸುತ್ತವೆ. ಅದೇನೆಂದರೆ, ನವ ಉದಾರವಾದಿ ಬಂಡವಾಳಶಾಹಿಯು ನಮ್ಮ ದೇಶದಲ್ಲಿ ನಿರುದ್ಯೋಗದ ಸಮಸ್ಯೆಯನ್ನು ನಿವಾರಿಸುವ ಸಾಮಾಜಿಕ ವ್ಯವಸ್ಥೆಯಾಗುವುದು ಸಾಧ್ಯವಿಲ್ಲ ಎಂಬುದನ್ನು. "ಆರ್ಥಿಕ ಉದಾರೀಕರಣ"ದ ಪ್ರತಿಪಾದಕರು ಒಂದು ಅಲಂಕಾರದ ಗೊಂಬೆ(ಡಮ್ಮಿ)ಯನ್ನು ಭಾರತದ ಜನರಿಗೆ ಮಾರಾಟ ಮಾಡಿದ್ದರು: ಮೆಟ್ರೋಪಾಲಿಟನ್ ಬಂಡವಾಳಶಾಹಿ ದೇಶಗಳಿಂದ ಪೂರ್ವ ಮತ್ತು ಆಗ್ನೇಯ ಏಷ್ಯಾದ ಕೆಲವು ಸಣ್ಣ ಸಣ್ಣ ದೇಶಗಳಿಗೆ ಒಂದು ನಿರ್ದಿಷ್ಟ ಪ್ರಮಾಣದ ಆರ್ಥಿಕ ಚಟುವಟಿಕೆಗಳು ಹರಿದ ಪರಿಣಾಮವಾಗಿ ಸಾಕಷ್ಟು ಉದ್ಯೋಗಗಳು ಅಲ್ಲಿ ಸೃಷ್ಟಿಯಾದವು. ಆದ್ದರಿಂದ ಈ ಕಾರ್ಯತಂತ್ರವನ್ನು ಎಲ್ಲ ದೇಶಗಳಲ್ಲೂ ಯಶಸ್ವಿಯಾಗಿ ನಕಲು ಮಾಡಬಹುದು (replicate) ಎಂದು ಅವರು ವಾದಿಸಿದರು. ಅಂದರೆ, ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳ ವಿವೇಚನೆಯನ್ನು "ಮಾರುಕಟ್ಟೆ"ಗೆ ಒಪ್ಪಿಸಿದರೆ, ಮತ್ತು, ದೊಡ್ಡ ಬಂಡವಾಳಗಾರರನ್ನು ಸರ್ಕಾರ ಬೆಂಬಲಿಸುವ ಅಂಶವೊಂದನ್ನು ಬಿಟ್ಟು, ಸರ್ಕಾರವು ಆರ್ಥಿಕ ಚಟುವಟಿಕೆಗಳ ವಿಷಯದಲ್ಲಿ ವಹಿಸುವ ಇತರ ಮಧ್ಯಪ್ರವೇಶ ಪಾತ್ರದಿಂದ ಹಿಂದೆ ಸರಿದರೆ, ಭಾರತವೂ "ಸಂಪೂರ್ಣ ಉದ್ಯೋಗ"ದ ಪರಿಸ್ಥಿತಿಯನ್ನು ಸಾಧಿಸುತ್ತದೆ ಮತ್ತು ಸುಖ ಸಮೃದ್ಧಿಯ ಹಾದಿಯಲ್ಲಿರುತ್ತದೆ ಎಂಬುದಾಗಿ ಹಾಡಿ ಹೊಗಳಿದರು.

ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯು ಎಂದಿಗೂ “ಪೂರ್ಣ ಉದ್ಯೋಗ”ದ ಪರಿಸ್ಥಿತಿಯನ್ನು ಸಾಧಿಸಲಾಗದು. ಏಕೆಂದರೆ, ಅದು ಕಾರ್ಮಿಕರ ಒಂದು ಮೀಸಲು ಪಡೆಯ ಅಸ್ತಿತ್ವವಿಲ್ಲದೇ ಕಾರ್ಯನಿರ್ವಹಿಸುವುದು ಎಂದಿಗೂ ಸಾಧ್ಯವಿಲ್ಲ. ಆದರೆ, ನವ ಉದಾರವಾದದ ಅಡಿಯಲ್ಲಿ ಕಾರ್ಮಿಕ ಮೀಸಲುಗಳನ್ನು (ನಿರುದ್ಯೋಗಿಗಳನ್ನು) ಗಣನೀಯ ಪ್ರಮಾಣದಲ್ಲಿ ಬಳಸಿಕೊಳ್ಳುವ ಭರವಸೆಯನ್ನು ನೀಡಲಾಗಿತ್ತು. ಪ್ರಗತಿಪರರೂ ಸೇರಿದಂತೆ ಅನೇಕ ಮಂದಿ ಈ ಭರವಸೆಯನ್ನು ನಂಬಿ ಮೋಸಹೋದರು. ಮತ್ತು, ವಸಾಹತುಶಾಹಿಯಿಂದ ವಿಮೋಚನೆಗೊಂಡ ನಂತರ ಮೂರನೆಯ ಜಗತ್ತಿನ ದೇಶಗಳಲ್ಲಿ ಅಸ್ತಿತ್ವಕ್ಕೆ ಬಂದ ಪ್ರಭುತ್ವವು ಮೆಟ್ರೋಪಾಲಿಟನ್ ಬಂಡವಾಳ ಮತ್ತು ಸಾಮ್ರಾಜ್ಯಶಾಹಿಗೆ ಎದುರಾಗಿ ಅಳವಡಿಸಿಕೊಂಡಿದ್ದ ತುಲನಾತ್ಮಕ ಸ್ವಾಯತ್ತ ನಿಲುವನ್ನು "ಹಿಮ್ಮೆಟ್ಟಿಸುವಲ್ಲಿ" ಈ ವಾದವು ಯಶಸ್ವಿಯಾಯಿತು.

ಈ ವಾದದಲ್ಲಿ ಎರಡು ತಪ್ಪು ತಿಳುವಳಿಕೆಗಳಿವೆ: ಮೊದಲನೆಯದು, ನವ ಉದಾರವಾದಿ ನೀತಿಗಳನ್ನು ಅಳವಡಿಸಿಕೊಂಡ ನಂತರ ಮೂರನೇ ಜಗತ್ತಿನಲ್ಲಿ ಸಂಭವಿಸಿದ ವಿದ್ಯಮಾನಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ, ಮೆಟ್ರೋಪಾಲಿಟನ್ ಬಂಡವಾಳಶಾಹಿ ದೇಶಗಳಿಂದ ಹರಿದು ಬಂದ ಕೆಲವು ಚಟುವಟಿಕೆಗಳು ಅಲ್ಲಿನ ಅಗಾಧ ಕಾರ್ಮಿಕ ಮೀಸಲುಗಳನ್ನು ಬಳಸಿಕೊಳ್ಳುವುದು ಸಾಧ್ಯವಾಗಲಿಲ್ಲ. ತುಲನಾತ್ಮಕ ಅಲ್ಪ ಪ್ರಮಾಣದ ಕಾರ್ಮಿಕ ಮೀಸಲುಗಳನ್ನು ಹೊಂದಿದ್ದ ಕೆಲವು ಸಣ್ಣ ದೇಶಗಳಲ್ಲಿ ಅದು ಸಾಧ್ಯವಾಗಿರಬಹುದು. ಆದರೆ, ಅಗಾಧ ಪ್ರಮಾಣದ ಕಾರ್ಮಿಕ ಮೀಸಲುಗಳನ್ನು ಹೊಂದಿದ ಭಾರತದಂತಹ ದೇಶಗಳಲ್ಲಂತೂ ಸಾಧ್ಯವಾಗಲಿಲ್ಲ. ಎರಡನೆಯದು, ನವ ಉದಾರವಾದಿ ಬಂಡವಾಳಶಾಹಿಯು ಬಿಕ್ಕಟ್ಟಿಗೆ ಸಿಲುಕಿದಾಗ, ಬಂಡವಾಳಶಾಹಿಗೆ ಬಿಕ್ಕಟ್ಟು ಅನಿವಾರ್ಯವೂ ಹೌದು, ಆ ಬಿಕ್ಕಟ್ಟನ್ನು ಕೊನೆಗೊಳಿಸುವ ಯಾವುದೇ ಕಾರ್ಯವಿಧಾನವನ್ನೂ ಅದು ಹೊಂದಿಲ್ಲ, ಆದ್ದರಿಂದ, ನವ ಉದಾರವಾದಿ ನೀತಿಗಳನ್ನು ಅಳವಡಿಸಿಕೊಂಡ ಭಾರತದಂತಹ ದೇಶಗಳಲ್ಲಿ ದುಡಿಯುವ ಜನರು ಕೊನೆ ಇಲ್ಲದ ಯಾತನೆಗೆ ಗುರಿಯಾಗುತ್ತಾರೆ. ಈ ಪ್ರತಿಪಾದನೆಯ ಸತ್ಯವನ್ನು ಭಾರತದಲ್ಲಿ ಇಂದು ಕಾಣಬಹುದು.

ನಿರುದ್ಯೋಗ ನಿವಾರಣೆ ಎಂದರೆ ಅದು ನವ ಉದಾರವಾದಿ ಬಂಡವಾಳಶಾಹಿ ಆಳ್ವಿಕೆಯಲ್ಲಿ ಕೆಲವು "ಬದಲಾವಣೆ"ಗಳನ್ನು ಮಾಡುವ ಮೂಲಕ ಸಂಭವಿಸಬಹುದಾದ ವಿಷಯವಲ್ಲ. ನಿರುದ್ಯೋಗ ನಿವಾರಣೆ ಎಂದರೆ ಅದು ನವ ಉದಾರವಾದಿ ಬಂಡವಾಳಶಾಹಿಯಿಂದ ಸಂಪೂರ್ಣವಾಗಿ ವಿಭಿನ್ನವಾದ ಒಂದು ಸಾಮಾಜಿಕ–ಆರ್ಥಿಕ ವ್ಯವಸ್ಥೆಗೆ ಸಾಗುವ ವಿಷಯವಾಗಿದೆ. ಈ ಹೊಸ ವ್ಯವಸ್ಥೆಯು ಕಾರ್ಮಿಕರ ಮೀಸಲು ಪಡೆಯ ಅಸ್ತಿತ್ವಕ್ಕೆ ಅವಕಾಶವಿಲ್ಲದೆ ಕಾರ್ಯನಿರ್ವಹಿಸುವುದು ಮಾತ್ರವಲ್ಲದೆ, ಪ್ರಭುತ್ವವು ದುಡಿಯುವ ಜನರ ಪರವಾಗಿ ಅರ್ಥವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುವ ಅವಕಾಶವನ್ನು ಪ್ರಜ್ಞಾಪೂರ್ವಕವಾಗಿ ನೀಡುತ್ತದೆ.

‘ದಿ ಕೇರಳ ಸ್ಟೋರಿ’ ಸಿನಿಮಾ: ಕೇರಳ ಮತ್ತು ಮುಸಲ್ಮಾನರೇ ಅವರ ಗುರಿ

ಪುಟ 16 ರಿಂದ

ವಿವಸ್ತ್ರಗೊಳಿಸಿ ಹಿಂದಿನಿಂದ ಬಲಾತ್ಕಾರ ಮಾಡುವ ದೃಶ್ಯ, ಪುನರಾವರ್ತಿತ ಬಲಾತ್ಕಾರ ದೃಶ್ಯಗಳು, ತಲೆ ಅಲ್ಲಾಡಿಸುವುದು ಮತ್ತು ಕೈಯಿಂದ ಹೊಡೆಯುವುದು ಪ್ರೇಕ್ಷಕರನ್ನು ವಿಚಲಿತಗೊಳಿಸುತ್ತದೆ. ಇದನ್ನು ಗುರುತಿಸಬಲ್ಲವರಿಗೆ ಹಿನ್ನೆಲೆ ಸಂಗೀತ ಅಸಹನೀಯವಾಗುತ್ತದೆ ಮತ್ತು ವಿಶ್ವಾಸ ಇಟ್ಟು ಬಂದವರಿಗೆ ಗೊಂದಲವನ್ನುಂಟುಮಾಡುತ್ತದೆ.

ಆದರೆ ಚಿತ್ರದಲ್ಲಿನ ಇಷ್ಟೆಲ್ಲ ಹಿಂಸೆ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ್ದಲ್ಲ, ಇದು ಐಸಿಸ್ ಅನ್ನು ಮಾತ್ರ ತೋರಿಸುತ್ತದೆ ಎಂದು ಕೆಲವರು ಹೇಳಬಹುದು. ಆದರೆ ‘ದಿ ಕಾಶ್ಮೀರ ಫೈಲ್’ ನಂತೆ ಕೇರಳ ಸ್ಟೋರಿಯನ್ನೂ ನೋಡಿದರೆ, ಭಯೋತ್ಪಾಧಕನಲ್ಲದ, ಯಾವುದೇ ಗೂಢ ಉದ್ದೇಶವಿಲ್ಲದ ಮುಸಲ್ಮಾನ ವ್ಯಕ್ತಿಯನ್ನು ಸಾಮಾನ್ಯನಂತೆ ನೀವು ನೋಡಲಾಗದಿದ್ದಾಗ ಇಂತಹ ಸಮರ್ಥನೆಯು ಅಪ್ರಸ್ತುತವಾಗುತ್ತದೆ. ಅಥವಾ ಒಬ್ಬ ಮುಸಲ್ಮಾನನಾದರೆ ದೇಶಪ್ರೇಮವನ್ನು ಸಾಬೀತುಪಡಿಸುವ ಹೆಚ್ಚುವರಿ ಹೊಣೆಗಾರಿಕೆಯನ್ನು ಹೊಂದಿರುವಂತೆ ರೂಢಿಗತವಾಗಿರುವ ದೇಶದಲ್ಲಿ ಅದು ಇಸ್ಲಾಮೋಫೋಬಿಯಾಕ್ಕೆ ಇಂಧನವಾಗುತ್ತದೆ.

ಟೈಮ್ ಬಾಂಬ್ ನ ಟಿಕ್–ಟಿಕ್ ಶಬ್ದ!!

ಕೇರಳವು ಭಯೋತ್ಪಾದನೆಯಿಂದ ಯಾವಾಗ ಬೇಕಾದರೂ ಸ್ಫೋಟಗೊಳ್ಳಬಹುದಾದ ಟೈಮ್ ಬಾಂಬ್ ಎಂದು ಸಿನಿಮಾದಲ್ಲಿ ಹೇಳಲಾಗಿದೆ. ಅದಕ್ಕಾಗಿಯೇ ಸಿನಿಮಾ ಪ್ರಾರಂಭದಿಂದ ಕೊನೆಯವರೆಗೆ ಹಿನ್ನೆಲೆ ಸಂಗೀತವಾಗಿ ಟಿಕ್–ಟಿಕ್ ಶಬ್ದವನ್ನು ಸೇನ್ ಬಳಸುತ್ತಾರೆ ಎಂದು ತೋರುತ್ತದೆ. 32,000 ಅಲ್ಲ, 50,000 ಕ್ಕೂ ಹೆಚ್ಚು ಹೆಣ್ಣುಮಕ್ಕಳು ವಂಚನೆಗೊಳಗಾಗಿದ್ದಾರೆ. ವಿನಾಶದತ್ತ ಕೇರಳ ಸಾಗುತ್ತಿದೆ ಎಂದು ಹೇಳಲು, ಟೀಸರ್‌ನಲ್ಲಿ, ಉಪಶೀರ್ಷಿಕೆಗಳಲ್ಲಿ ಮತ್ತು ವಿಎಸ್ ಅವರ ಸಂಭಾಷಣೆಯಲ್ಲೂ, ಸೇನ್ ವಿಭಿನ್ನ ಅರ್ಥವನ್ನು ನೀಡಿದ್ದಾರೆ. ಇಂತಹ ಸುಳ್ಳುಗಳೇ ಚಿತ್ರದಲ್ಲಿ ಸಂಭಾಷಣೆಯಾಗಿದೆ.

ಸದಾ ಭಯದಲ್ಲಿ ಇರುವಂತೆ ಮಾಡುತ್ತದೆ

ಕೇರಳ ಸ್ಟೋರಿಯ ಸಾರ್ವಜನಿಕ ವಿಮರ್ಶೆಗಳಲ್ಲಿ, ಥಿಯೇಟರ್‌ನಿಂದ ಹೊರಬಂದ ಮಹಿಳೆಯೊಬ್ಬರು ಕ್ಯಾಮೆರಾವನ್ನು ನೋಡುತ್ತಾ, ನನಗೆ ಇಬ್ಬರು ಹೆಣ್ಣು ಮಕ್ಕಳಿರುವುದರಿಂದ ನಾನು ಚಿತ್ರ ನೋಡಲು ಬಂದಿದ್ದೇನೆ ಎಂದು ಹೇಳುತ್ತಾರೆ. ನನ್ನ ಹೆಣ್ಣು ಮಕ್ಕಳನ್ನು ಯಾವುದೇ ಕಾಗೆ ತೆಗೆದುಕೊಂಡು ಹೋಗಬಾರದು ಎಂದು ನಾನು ಜಾಗೃತೆಯಿಂದ ಇರುತ್ತೇನೆ. ಹೆಣ್ಣು ಹೆತ್ತವರೆಲ್ಲಾ ಈ ಸಿನಿಮಾ ನೋಡಬೇಕು ಎನ್ನುತ್ತಾರೆ. ಅಂತಹ ನಂಬಿಕೆಗಳನ್ನು ಆಧರಿಸಿ, ಮೃದು ಹಿಂದೂ ಧರ್ಮದಲ್ಲಿ ಮುಳುಗಿ, ತೀವ್ರ ಹಿಂದೂ ಧರ್ಮದ ಕಡೆಗೆ ತಿರುಗುವ ಚೆಂಚಲ ಮನಸ್ಥಿತಿ ಇರುವವರು, ಕಾಶ್ಮೀರ್ ಫೈಲ್ ಸಿನಿಮಾ ನೋಡಿ ಚಪ್ಪಾಳೆ ತಟ್ಟಿದವರು, ಕೇರಳದಿಂದ 32,000 ಮಂದಿ ಐಸಿಸ್ ಸೇರಿದ್ದಾರೆ ಎಂಬ ಸುದ್ದಿಯನ್ನು ವಾಟ್ಸಾಪ್ ನಲ್ಲಿ ಓದಿ ನಿಜ ಅಂದುಕೊಂಡವರು, ಇಂತಹ ಎಲ್ಲಾ ಕುಟುಂಬಗಳಲ್ಲಿ ಖಂಡಿತವಾಗಿಯೂ ಈ ಸಿನಿಮಾ ಭಯವನ್ನು ಉಂಟುಮಾಡುತ್ತದೆ.

ಕರ್ನಾಟಕದ ಚುನಾವಣೆಯಲ್ಲಿ ಬಿಜೆಪಿ ಲಾಭ ಪಡೆಯುವ ಯತ್ನ

ಕರ್ನಾಟಕದಲ್ಲಿ ಸಂಘಪವಾರದವರು ಮತ್ತೊಂದು ರೀತಿಯಲ್ಲಿ ಪ್ರಚಾರ ಮಾಡತೊಡಗಿದ್ದಾರೆ. ವಿಧಾನಸಭಾ ಚುನಾವಣೆ ಕೇವಲ ಐದು ದಿನಗಳಿರುವಾಗಲೇ ಸಿನಿಮಾ ಬಿಡುಗಡೆ ಮಾಡಿ, ಇದರಲ್ಲಿ ಚುನಾವಣಾ ಲಾಭ ಪಡೆಯಲು ಬಿಜೆಪಿ ಪ್ರಯತ್ನಿಸಿತು. ಮೇ 10 ರಂದು ನಡೆದ ವಿಧಾನಸಭಾ ಚುನಾವಣೆಗೆ ಮುನ್ನ ಬಳ್ಳಾರಿಯಲ್ಲಿ ನಡೆದ ರ್‍ಯಾಲಿಯನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ವಿವಾದಾತ್ಮಕ ಚಲನಚಿತ್ರ ‘ದಿ ಕೇರಳ ಸ್ಟೋರಿ’ ಅನ್ನು ಉಲ್ಲೇಖಿಸಿ, "ದಿ ಕೇರಳ ಸ್ಟೋರಿ’ ಚಿತ್ರವು ಭಯೋತ್ಪಾದನೆಯ ಪಿತೂರಿಯನ್ನು ಆಧರಿಸಿದೆ. ಆ ಸುಂದರ ರಾಜ್ಯದಲ್ಲಿ ಏನಾಗುತ್ತದೆ ಎಂಬುದನ್ನು ಆಧರಿಸಿದೆ. ಇದು ಭಯೋತ್ಪಾದನೆಯ ಕೊಳಕು ಸತ್ಯವನ್ನು ತೋರಿಸುತ್ತದೆ ಮತ್ತು ಭಯೋತ್ಪಾದಕರ ವಿನ್ಯಾಸವನ್ನು ಬಹಿರಂಗಪಡಿಸುತ್ತದೆ. ಭಯೋತ್ಪಾದನೆಯ ಮೇಲೆ ನಿರ್ಮಿಸಲಾದ ಮತ್ತು ಭಯೋತ್ಪಾದಕ ಪ್ರವೃತ್ತಿಯೊಂದಿಗೆ ನಿಂತಿರುವ ಚಿತ್ರವನ್ನು ಕಾಂಗ್ರೆಸ್ ವಿರೋಧಿಸುತ್ತಿದೆ. ವೋಟ್ ಬ್ಯಾಂಕ್‌ಗಾಗಿ ಕಾಂಗ್ರೆಸ್ ಭಯೋತ್ಪಾದನೆಯನ್ನು ರಕ್ಷಿಸಿದೆ’ ಎಂದು ಹೇಳಿದರು.

“ಕಾಂಗ್ರೆಸ್ ತನ್ನ ಮತ ಬ್ಯಾಂಕ್‌ಗಾಗಿ ಭಯೋತ್ಪಾದನೆಗೆ ಶರಣಾಗಿರುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ, ಅಂತಹ ಪಕ್ಷವು ಕರ್ನಾಟಕವನ್ನು ಎಂದಾದರೂ ಉಳಿಸಬಹುದೇ? ಭಯೋತ್ಪಾದನೆಯ ವಾತಾವರಣದಲ್ಲಿ ಇಲ್ಲಿನ ಉದ್ಯಮ, ಐಟಿ ಉದ್ಯಮ, ಕೃಷಿ, ವೈಭವದ ಸಂಸ್ಕೃತಿ ನಾಶವಾಗುತ್ತದೆ. ಕರ್ನಾಟಕವನ್ನು ದೇಶದ ನಂಬರ್ ಒನ್ ರಾಜ್ಯವನ್ನಾಗಿಸಲು ಭದ್ರತಾ ವ್ಯವಸ್ಥೆ, ಕಾನೂನು ಸುವ್ಯವಸ್ಥೆ ಅತ್ಯಂತ ಪ್ರಮುಖ ಅವಶ್ಯಕತೆಯಾಗಿದೆ. ಕರ್ನಾಟಕಕ್ಕೆ ಭಯೋತ್ಪಾದನೆ ಮುಕ್ತವಾಗಿರುವುದು ಅಷ್ಟೇ ಮುಖ್ಯ. ಬಿಜೆಪಿ ಯಾವಾಗಲೂ ಭಯೋತ್ಪಾದನೆ ವಿರುದ್ಧ ಕಠಿಣವಾಗಿದೆ. ಆದರೆ ಭಯೋತ್ಪಾದನೆ ಬಗ್ಗೆ ಕ್ರಮ ಕೈಗೊಂಡಾಗಲೆಲ್ಲಾ ಕಾಂಗ್ರೆಸ್‌ಗೆ ಹೊಟ್ಟೆ ನೋವು ಬರುತ್ತದೆ.” ಎಂದು ಪ್ರಧಾನಿ ಮೋದಿ ಹೇಳಿದರು.

ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸಚಿವರು, ಸಂಸದರು ಸಿನಿಮಾ ನೋಡಿ, ಅದನ್ನು ಮಾಧ್ಯಮಗಳಲ್ಲಿ ಪ್ರಚಾರ ಮಾಡಿ, ಸಿನಿಮಾ ಸಮಾಜಕ್ಕೆ ಒಂದು ಉತ್ತಮ ಮಾಹಿತಿ ಕೊಡುತ್ತದೆ ಎಂದು ಪ್ರತಿಕ್ರಿಯಿಸಿದ್ದಾರೆ. ಸಂಘಪರಿವಾರದ ಸಾಮಾಜಿಕ ಜಾಲತಾಣದ ಮಾಧ್ಯಮಗಳ ಸಿಬ್ಬಂದಿ, ಥೀಯೇಟರ್ ಗಳ ಹೊರಗೆ ಕ್ಯಾಮರಾ ಹಿಡಿದು ನಿಂತು, ಸಂಘಪರಿವಾರದ ‘ವೀಕ್ಷಕ’ರಿಂದಲೇ ಅಭಿಪ್ರಾಯ ಪಡೆದು, ಮುಸಲ್ಮಾನರ ವಿರುದ್ದ ಮತ್ತು ಕಾಂಗ್ರೆಸ್, ಜೆಡಿಎಸ್, ಕಮ್ಯುನಿಸ್ಟರು ಮತ್ತು ಕೇರಳದ ವಿರುದ್ದ ಆಕ್ರೋಶದ ಹೇಳಿಕೆಗಳನ್ನು ಕೊಡಿಸಿ ಪ್ರಚಾರ ಮಾಡತೊಡಗಿದ್ದಾರೆ. ಇವರಲ್ಲಿ ಬಹುತೇಕರು ಮಾತಿನ ನಡುವೆ ಮೋದಿ ಮತ್ತು ಬಿಜೆಪಿ ಪಕ್ಷವನ್ನು ಹೊಗಳಿ ಮಾತನಾಡುತ್ತಾರೆ. ಇವೆಲ್ಲವನ್ನೂ ನೋಡಿದಾಗ ಇದರಲ್ಲಿ ಆರ್.ಎಸ್.ಎಸ್. ನ ಪಾತ್ರ ಸ್ಪಷ್ಟವಾಗಿ ಎದ್ದು ಕಾಣುತ್ತದೆ.

ಈ ಮಧ್ಯೆ ಕೇರಳವನ್ನು ಬಲ್ಲವರು ಏನು ಮಾಡುತ್ತಾರೆ?

ಚಿತ್ರದ ಕೊನೆಯಲ್ಲಿ ಕೇರಳವನ್ನು ಐಸಿಸ್ ನೇಮಕಾತಿ ಕೇಂದ್ರವಾಗಿ ಹೊರ ಜಗತ್ತಿಗೆ ಹೇಳಲಾಗಿದೆ. ಇದು ನೈಜ ಜೀವನದ ಅನುಭವಗಳಿಂದ ಪ್ರೇರಿತವಾಗಿದೆ ಎಂದು ಹೇಳಲು, ಮತ್ತು ತಾವು ಹೇಳುವುದನ್ನು ನಂಬಿಸುವ ಪ್ರಯತ್ನದಲ್ಲಿ ಸಿನಿಮಾ ಮಂದಿ ಶ್ರಮಿಸಿದ್ದಾರೆ. ಸಿನಿಮಾದ ಉದ್ದೇಶ ಮತ್ತು ಶೇಕಡ 100 ರಷ್ಟು ದ್ವೇಷವನ್ನು ಹರಡುವ ಗುರಿಯಾಗಿರುವುದರಿಂದ ಕೇರಳ ಸ್ಟೋರಿ ನಿಧಾನವಾಗಿ ಆ ಗುರಿಯನ್ನು ಸಾಧಿಸುತ್ತದೆ. ಮತ್ತು ಸಿನಿಮಾ ಕಥೆಯ ಕುರಿತಾಗಿ ಪ್ರಧಾನಿಯಂತವರ ಸಮರ್ಥನೆಯ ಮಾತುಗಳು ಅದನ್ನು ಮತ್ತಷ್ಟು ವೇಗಗೊಳಿಸುತ್ತವೆ.

ಮಲಪ್ಪುರಂನಲ್ಲಿ ಬಾಂಬ್ ಹಾಕಿ ಆನೆ ಸತ್ತಿಲ್ಲ ಎಂದು ಸಾಬೀತುಪಡಿಸಲು ಮಲೆಯಾಳಿಗಳು ಇನ್ನೂ ವಾದ ಮಾಡಬೇಕಾಗಿದೆ. ಚರ್ಚ್ ಕಮಿಟಿ ನಡೆಸುವ ಹಿಂದೂ ಮದುವೆಗಳು ಲವ್ ಜಿಹಾದ್ ಅಲ್ಲ ಎಂದು ಅವರು ನಿರಂತರವಾಗಿ ವಾದಿಸಬೇಕಾಗುತ್ತದೆ. ಸಂಘಪರಿವಾರದ ಗುರಿಗಳಲ್ಲಿ ಒಂದು ಕೇರಳ. ಹಾಗಾಗಿ ರಕ್ಷಣೆಗೆ ಎಲ್ಲರೂ ಒಗ್ಗಟ್ಟಾಗಬೇಕಿದೆ. ಆದರೆ ಕೇರಳದ ಸೆಕ್ಯುಲರಿಸಂನ ಬುನಾದಿ ಈ ಸಿನಿಮಾದಿಂದ ಒಡೆದು ಹೋಗುವುದಿಲ್ಲ. ಹೆಚ್ಚು ಕೇರಳ ಸ್ಟೋರಿಗಳು ಮತ್ತು ಫೈಲ್‌ಗಳನ್ನು ರಚಿಸಿದರೂ, ಅದರಿಂದ ಹಾನಿಯಾಗುವುದಿಲ್ಲ. ಏಕೆಂದರೆ ನಿಜವಾದ ಧಾರ್ಮಿಕ ಸಾಮರಸ್ಯ ಸಹೋದರತ್ವದ ಭಾರತೀಯ ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುವ ಕೇರಳ ಕಥೆಗಳು ಅವರಿಗೆ ತಿಳಿದಿವೆ.

ಕೆಲವು ರಾಜ್ಯಗಳಲ್ಲಿ ನಿಷೇದ, ಒಂದೆರಡು ರಾಜ್ಯಗಳಲ್ಲಿ ತೆರಿಗೆ ವಿನಾಯಿತಿ

ಪಶ್ಚಿಮ ಬಂಗಾಳದಲ್ಲಿ ಅಲ್ಲಿನ ರಾಜ್ಯ ಸರ್ಕಾರ ‘ದಿ ಕೇರಳ ಸ್ಟೋರಿ’ ಸಿನಿಮಾ ನಿಷೇಧಿಸಿದೆ. ತಮಿಳುನಾಡಿನಲ್ಲಿ ಸಿನಿಮಾ ವಿರುದ್ದ ಪ್ರತಿಭಟನೆಗಳು ಮತ್ತು ಪ್ರೇಕ್ಷಕರ ನಿರಾಶಕ್ತಿ ಕಾರಣದಿಂದ ಥೀಯೇಟರ್ ಮಾಲೀಕರು ಸಿನಿಮಾ ಪ್ರದರ್ಶನ ಮಾಡುತ್ತಿಲ್ಲ. ಕೇರಳದಲ್ಲಿ ಎಲ್.ಡಿ.ಎಫ್. ಸರ್ಕಾರ ಚಿತ್ರವನ್ನು ವಿರೋಧಿಸಿದೆಯಾದರೂ ಪ್ರದರ್ಶನಕ್ಕೆ ತಡೆ ನೀಡಿಲ್ಲ. ಆದರೆ, ಅಲ್ಲಿನ ಜನರು ಚಿತ್ರ ವೀಕ್ಷಣೆಗೆ ಆಸಕ್ತಿ ತೋರಿಸುತ್ತಿಲ್ಲ. ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶದಲ್ಲಿ ಈ ಚಿತ್ರಕ್ಕೆ ಪ್ರದರ್ಶನ ತೆರಿಗೆ ವಿನಾಯಿತಿ ನೀಡಿತಾದರೂ, ‘ಎ’ ಸರ್ಟಿಫಿಕೆಟ್ ಪಡೆದ ಸಿನಿಮಾ ಎಂಬ ಕಾರಣಕ್ಕೆ ವಿನಾಯಿತಿ ವಾಪಸ್ ಪಡೆದಿದೆ ಎಂದು ವರದಿಯಾಗಿದೆ. ಉತ್ತರ ಪ್ರದೇಶದಲ್ಲಿ ತೆರಿಗೆ ವಿನಾಯಿತಿ ನೀಡಲಾಗಿದೆ.

ಐಸಿಸ್ ಸೇರಿರುವ ‘ಸಾವಿರಾರು’ ಮಲಯಾಳಿಗಳ ಬಗ್ಗೆ ಈಗ ಸಂಘಪರಿವಾರದ ಗ್ಯಾಂಗ್ ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುತ್ತಿವೆ. US ಇಲಾಖೆಯ ಪ್ರಕಾರ, ಒಟ್ಟು 66 ಭಾರತೀಯರು IS ಗೆ ಸೇರಿದ್ದಾರೆ. ಇದರಲ್ಲಿ ಮಲಯಾಳಿಗಳ ಪ್ರತ್ಯೇಕ ಲೆಕ್ಕವಿಲ್ಲ. ಸ್ಟಾನ್ಲಿ ಜಾನಿ ಅವರ 2018 ರ ಪುಸ್ತಕ ದಿ ISIS ಕ್ಯಾಲಿಫೇಟ್, ದಿ ಇಂಡಿಯನ್ ಕನೆಕ್ಷನ್‌ನ ಐದನೇ ಅಧ್ಯಾಯವು ಭಾರತದೊಂದಿಗೆ ISIS ನ ಸಂಪರ್ಕವನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ. ಬ್ರೂಕಿಂಗ್ಸ್ ಇಂಡಿಯಾ ಪ್ರಕಾರ, ಒಟ್ಟು 142 ಭಾರತೀಯರು IS ನೊಂದಿಗೆ ಸಂಪರ್ಕ ಹೊಂದಿದ್ದಾರೆ (ಸೇರಿಲ್ಲ, ಆದರೆ ಸಂಪರ್ಕಗಳನ್ನು ಹೊಂದಿದ್ದಾರೆ). ಅದರಲ್ಲಿ 37 ಮಲೆಯಾಳಿಗಳು. ಕೇರಳದಲ್ಲಿ ಚುನಾವಣಾ ರಾಜಕೀಯದಲ್ಲಿ ಲಾಭ ಗಳಿಸಲು ಸಂಘಪರಿವಾರದ ವಿವಿಧ ಪ್ರಯತ್ನಗಳ ಹಿನ್ನೆಲೆಯಲ್ಲಿ ಪ್ರಚಾರದ ಚಲನಚಿತ್ರಗಳು ಮತ್ತು ಮುಸ್ಲಿಂ ಖಾಸಗೀತನವನ್ನು ನೋಡಬೇಕು. "ಲವ್ ಜಿಹಾದ್" ಆರೋಪಗಳನ್ನು ತನಿಖಾ ಸಂಸ್ಥೆಗಳು, ನ್ಯಾಯಾಲಯ ಮತ್ತು ಕೇಂದ್ರ ಗೃಹ ಸಚಿವಾಲಯವೂ ತಿರಸ್ಕರಿಸಿತು. ಲವ್ ಜಿಹಾದ್ ಅಂತೇನೂ ಇಲ್ಲ ಎಂದು ಅಂದು ಕೇಂದ್ರ ಗೃಹ ಸಚಿವ ಹಾಗೂ ಈಗಿನ ಕೇಂದ್ರ ಸಚಿವ ಜಿ ಕಿಶನ್ ರೆಡ್ಡಿ ಸಂಸತ್ತಿನಲ್ಲಿ ಉತ್ತರಿಸಿದರು. ಇನ್ನು, ಕೇರಳವನ್ನು ಜಗತ್ತಿನ ಮುಂದೆ ಅವಮಾನಿಸುವ ಉದ್ದೇಶದಿಂದ ಮಾತ್ರ ಸಿನಿಮಾದಲ್ಲಿ ಈ ಸುಳ್ಳು ಆರೋಪವನ್ನು ಪ್ರಧಾನ ಕಥೆಯನ್ನಾಗಿ ಮಾಡಲಾಗಿದೆ. ಕೇರಳದಲ್ಲಿ ಧಾರ್ಮಿಕ ಸೌಹಾರ್ದ ವಾತಾವರಣವನ್ನು ಹಾಳು ಮಾಡಿ ಕೋಮುವಾದದ ವಿಷಬೀಜ ಬಿತ್ತಲು ಸಂಘಪರಿವಾರ ಯತ್ನಿಸುತ್ತಿದೆ. ಈ ಚಿತ್ರ ಕೇರಳದ ನೈಜ ಕಥೆಯನ್ನು ಪ್ರಸ್ತುತಪಡಿಸಲು ಪ್ರಯತ್ನಿಸುತ್ತಿಲ್ಲ. ಇದು ಸಾಮಾಜಿಕ ಸೂಚ್ಯಂಕಗಳು, ಭಾರತಕ್ಕೆ ಮಾದರಿಯಾದ ಮಾನವ ಅಭಿವೃದ್ಧಿ ಸಾಧನೆಗಳು, ಜಾತ್ಯತೀತತೆ, ಸಹಿಷ್ಣುತೆ ಮತ್ತು ಶಾಂತಿಯುತ ಜೀವನದ ನಿಜವಾದ ಅನುಭವವಾಗಿದೆ. 37 ಮಂದಿ ಹುಚ್ಚರ ಕೃತ್ಯಕ್ಕೆ ಇಡೀ ಕೇರಳಕ್ಕೆ ಅವಮಾನ ಮಾಡಲು ಯಾರಾದರೂ ಯತ್ನಿಸಿದರೆ ಅದಕ್ಕೆ ಅವಕಾಶ ಕೊಡಲು ಸಾಧ್ಯವೇ ಇಲ್ಲ. ಕೇರಳವು ಒಟ್ಟಾಗಿ ನಿಂತು ಅದನ್ನು ರಕ್ಷಿಸುತ್ತದೆ. ಏಕೆಂದರೆ ಮಲೆಯಾಳಿಗಳು ನೆಲದ ವಿರುದ್ಧದ ಯಾವುದೇ ದಾಳಿಯ ಮುಂದೆ ಸೋತ ಇತಿಹಾಸವಿಲ್ಲ.






ಕೃಪೆ: ಅದ್ವರ್ಯ



ಕೃಪೆ: ಸತೀಶ್ ಆಚಾರ್ಯ



ಕೃಪೆ: ಮಂಜುಗಂಗೊಳ್ಳಿ

ಕೃಪೆ: ಅದ್ವರ್ಯ

NEW No. MAG(3)/NPP/205/2021-2022
JANASHAKTHI KANNADA VARA PATRIKE MAY 15-21, 2023 Price: Rs. 10/- Date of Publication: 12 MAY 2023 RNI No. KARKAN /2006/17926 Posted on 16-05-2023
Posted at BG PSO, BG - 560026 **Posted at Periodical Rate** - Rs. 2

'ದಿ ಕೇರಳ ಸ್ಟೋರಿ' ಸಿನಿಮಾ: ಕೇರಳ ಮತ್ತು ಮುಸಲ್ಮಾನರೇ ಅವರ ಗುರಿ



ಕಾಶ್ಮೀರದ ಮುಸ್ಲೀಮರ ವಿರುದ್ದ ದ್ವೇಶ ಬಿತ್ತುವ 'ದಿ ಕಾಶ್ಮೀರ್ ಫೈಲ್' ನಂತರ ಈಗ ಕೇರಳದ ಮುಸ್ಲೀಮರ ವಿರುದ್ದ ದ್ವೇಷ ಬಿತ್ತುವ 'ದಿ ಕೇರಳ ಸ್ಟೋರಿ' ಸಿನಿಮಾ ಬಂದಿದೆ. ಕೇರಳವನ್ನು ವಶಪಡಿಸಿಕೊಳ್ಳುವ ಆರ್‌ಎಸ್‌ಎಸ್‌ನ ಷಡ್ಯಂತ್ರ 'ದಿ ಕೇರಳ ಸ್ಟೋರಿ' ಸಿನಿಮಾ ಹಿಂದೆ ಕೆಲಸ ಮಾಡುತ್ತಿದೆ. ಇದಕ್ಕಾಗಿ ವಿವಿಧ ಹಂತಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಲಾಗುತ್ತಿದೆ. ನಿಜವಾದ ಧಾರ್ಮಿಕ ಸಾಮರಸ್ಯ, ಸಹೋದರತ್ವ, ಭಾರತೀಯ ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುವ ಕೇರಳ ಜನರನ್ನು ಕಂಡರೆ ಹಿಂದುತ್ವವಾದಿಗಳಿಗೆ ಎಲ್ಲಿಲ್ಲದ ಸಂಕಟ. ಕೇರಳದ ಜನತೆಯ ಕೋಮು ಸೌಹಾರ್ದತೆಯನ್ನು ಒಡೆದು, ಅಲ್ಲಿನ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಶಕ್ತಿ ಕ್ಷೀಣಿಸುವಂತೆ ಮಾಡಿ, ಆ ಮೂಲಕ ರಾಜಕೀಯ ಅಧಿಕಾರ ಹಿಡಿಯುವ ಹಿಂದುತ್ವವಾದಿಗಳ ಮುಂದುವರಿದ ಪ್ರಯತ್ನವೇ ಈ 'ಕೇರಳ ಸ್ಟೋರಿ' ಸಿನಿಮಾ.

ವಿವೇಕ್ ರಂಜನ್ ಅಗ್ನಿಹೋತ್ರಿಯವರು ಕಾಶ್ಮೀರಿ ಪಂಡಿತರು ಕಾಶ್ಮೀರವನ್ನು ತೊರೆದ ವಿಷಯವಾಗಿ ಸಿನಿಮಾ ಮಾಡಿದಾಗ, ಚಿತ್ರದುದ್ದಕ್ಕೂ ಮೂರು ವಿಷಯಗಳನ್ನು ಗುರಿಯಾಗಿಸಲು ಪ್ರಯತ್ನಿಸಿದರು, ಒಂದು, ಕಾಶ್ಮೀರದ ಎಲ್ಲಾ ಸಮಸ್ಯೆಗಳಿಗೆ ಆರ್ಟಿಕಲ್ 370 ಕಾರಣ, ಎರಡು, ಜೆಎನ್‌ಯು ಸೇರಿದಂತೆ ವಿದ್ಯಾರ್ಥಿಗಳ ಮುಷ್ಕರಗಳನ್ನು ಭಯೋತ್ಪಾದಕರಿಂದ ಪ್ರಾಯೋಜಿಸಲಾಗುತ್ತಿದೆ., ಮೂರು, ಸಂಘಪರಿವಾರ ಮತ್ತು ಬಿಜೆಪಿ ವಿರುದ್ಧ ಆಜಾದಿ ಘೋಷಣೆಗಳು ಮತ್ತು ಕಾಶ್ಮೀರಿ ಪಂಡಿತರನ್ನು ಕೊಂದ ಭಯೋತ್ಪಾದಕರು.

ಈ ಮೂಲಕ ಸಿನಿಮಾಗಳು ಹೇಗೆ ಫ್ಯಾಸಿಸ್ಟ್ ಬಳಕೆಯ ಅಸ್ತ್ರವಾಗುತ್ತಿದೆ ಎಂಬುದನ್ನು ನಾವು ನೋಡುತ್ತೇವೆ. ದೇಶದಲ್ಲಿ ಮತೀಯವಾದ ಮತ್ತು ವಿಭಜನೆಯನ್ನು ಸೃಷ್ಟಿಸಲು ಸಿನಿಮಾವನ್ನು ಬಳಸುತ್ತಿರುವವರನ್ನು ಸಮರ್ಥಿಸುವುದು ಸರಿಯಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದನ್ನು ಈ ನೆಲವನ್ನು ಕೋಮುವಾದಗೊಳಿಸಲು, ಸುಳ್ಳುಗಳನ್ನು ಸೃಷ್ಟಿಸಲು ಮತ್ತು ಜನರನ್ನು ವಿಭಜಿಸಲು ಪರವಾನಗಿಯಾಗುವುದಿಲ್ಲ.

ಏನಿದು ಕೇರಳ ಸ್ಟೋರಿ?

ಪ್ರತಿಯೊಂದು ಚಿತ್ರಕ್ಕೂ ಒಂದು ಉದ್ದೇಶವಿರುತ್ತದೆ. ಉದ್ದೇಶಿತ ಪ್ರೇಕ್ಷಕರು ಇರುತ್ತಾರೆ. ಅದರಲ್ಲಿ ಪ್ರೇಕ್ಷಕರಿಗೆ ತಲುಪಿಸುವ ಒಂದು ಸಂದೇಶ ಇರುತ್ತದೆ. ಸುದೀಪ್ತೋ ಸೇನ್ ಅವರ 138 ನಿಮಿಷಗಳ ಸುದೀರ್ಘ ಚಲನಚಿತ್ರ 'ದಿ ಕೇರಳ ಸ್ಟೋರಿ' ಇದೆಲ್ಲದಕ್ಕೂ 'ದ್ವೇಷ' ಎಂಬ ಎರಡು ಅಕ್ಷರಗಳಲ್ಲಿ ಉತ್ತರ ಹೇಳಬಹುದು. ಆದರೆ, ಇದು ಏಕೆ ಎಂದು ನಾವು ಅರ್ಥಮಾಡಿಕೊಳ್ಳಬೇಕಷ್ಟೆ.

> **ಶಾಲಿನಿ ಐಸಿಸ್ ಗೆ ಬ್ರೈನ್ ವಾಶ್ ಆಗಿದ್ದಾಳೆ ಎಂದು ಹೇಳುವ ಈ ಚಿತ್ರ, ಎರಡು ಗಂಟೆ ಹದಿನೆಂಟು ನಿಮಿಷಗಳ ಕಾಲ ಇಸ್ಲಾಂ ಹಿಂಸಾಚಾರದ ಧರ್ಮ, ಅದರಲ್ಲಿ ಉಗ್ರವಾದವಲ್ಲದೆ ಬೇರೇನೂ ಇಲ್ಲ ಎಂಬ ನಂಬಿಕೆಯನ್ನು ಪ್ರೇಕ್ಷಕರಿಗೆ ಚುಚ್ಚುವ ಮೂಲಕ ಬ್ರೈನ್ ವಾಶ್ ಮಾಡುತ್ತಿದೆ.**

ಸಂಘಪರಿವಾರಕ್ಕಾಗಿಯೇ ಮಾಡಿದ ಚಿತ್ರ ನಿರ್ದೇಶಕ ಸುದೀಪ್ತೋ ಸೇನ್ ಅವರು 'ದಿ ಕೇರಳ ಸ್ಟೋರಿ' ಟ್ರೈಲರ್ ಬಿಡುಗಡೆ ಮಾಡಿ, ಕೇರಳದ 32 ಸಾವಿರ ಯುವತಿಯರು ಐಸಿಸ್‌ಗೆ ಹೋಗಿದ್ದಾರೆ ಎಂಬ ಸುದ್ದಿ ಹಬ್ಬಿಸಿದರು. ಇದರ ಸತ್ಯಾಸತ್ಯಾತೆಗಳ ಕುರಿತಾದ ಪ್ರಶ್ನೆಗಳು, ಸವಾಲುಗಳು ಎದುರಾದಾಗ, 32 ಸಾವಿರ ಯುವತಿಯರ ಸಂಖ್ಯೆಯನ್ನು ಮೂರಕ್ಕೆ ಇಳಿಸಿ, ತಮ್ಮ ಪ್ರಚಾರ ಮುಂದುವರಿಸಿದ್ದಾರೆ.

ಈ ಚಿತ್ರದ ನಿರ್ಮಾಪಕ ವಿಪುಲ್ ಅಮೃತ್ ಲಾಲ್ ಶಾ ಅವರು ಚಿತ್ರಕಥೆ ಬರೆದಿದ್ದಾರೆ. ಹಿಂದಿ, ತೆಲುಗು, ಮಲೆಯಾಳಂ ಮತ್ತು ತಮಿಳಿನಲ್ಲಿ ಚಿತ್ರ ಬಿಡುಗಡೆಯಾಗಿದೆ. ಶಾಲಿನಿ ಉನ್ನಿ ಕೃಷ್ಣನ್ ಅವರ ಪಾತ್ರದಲ್ಲಿ ಅದಾ ಶರ್ಮಾ ಕಾಣಿಸಿಕೊಂಡಿದ್ದಾರೆ.

ಐಸಿಸ್ ನಿಂದ ತಪ್ಪಿಸಿಕೊಂಡು ಯುಎನ್ ಕೋರ್ ತಲುಪಿದ ಶಾಲಿನಿ ಉನ್ನಿಕೃಷ್ಣನ್ ಅವರ ಕಥೆಯನ್ನು ರೇಖಾತ್ಮಕವಲ್ಲದ ಶೈಲಿಯಲ್ಲಿ, ಸಾಕ್ಷ್ಯಚಿತ್ರದಂತೆ ಕಥೆ ಹೇಳಲು ಹೊರಟಿದೆ 'ಕೇರಳ ಸ್ಟೋರಿ'. ಕೇರಳದಲ್ಲಿ ಮೂವರು ಹುಡುಗಿಯರ ಬ್ರೈನ್ ವಾಶ್ ಮಾಡಿ, ಅವರನ್ನು ಬಲೆಗೆ ಬೀಳಿಸಿ ಐಸಿಸ್ ಗೆ ಕರೆದೊಯ್ದು, ಅಲ್ಲಿ ಅವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡುವುದೇ ಸಿನಿಮಾದ ಕಥೆ. ತಪ್ಪು ತಪ್ಪಾದ ಅಂಕಿಅಂಶಗಳು, ತಪ್ಪಾದ ಅನುವಾದಗಳು, ತಪ್ಪು ಉಲ್ಲೇಖಗಳು, ಸಂಬಂಧವಿಲ್ಲದ ಅಂಕಿಅಂಶಗಳ ತಪ್ಪು ನಿರೂಪಣೆಗಳು ಚಿತ್ರದುದ್ದಕ್ಕೂ ಎದ್ದು ಕಾಣುತ್ತವೆ.

ಕುರಿಯ ತಲೆ ಕಡಿದು ರಕ್ತ ಸುರಿಯುವುದರೊಂದಿಗೆ ಆರಂಭವಾಗುವ ಚಿತ್ರದಲ್ಲಿ ಹಿಂಸೆಗೆ ವಿಶೇಷ ಸ್ಥಾನವಿದೆ. ಸಿನಿಮಾದ ಸಂದೇಶ ಏನು ಮತ್ತು ಅದು ಏನನ್ನು ಹೇಳಲು ಪ್ರಯತ್ನಿಸುತ್ತಿದೆ ಎಂಬುದನ್ನು ಈ ಆರಂಭದ ದೃಶ್ಯವೇ ಹೇಳುತ್ತದೆ. ಚಿತ್ರದ ಯಾವ ಹಂತವನ್ನು ಪ್ರೇಕ್ಷಕರಿಗೆ ಅಸಹನೀಯವಾಗುವ ರೀತಿಯಲ್ಲಿ ಬಳಸಬೇಕು ಎಂಬ ಬುದ್ಧಿವಂತಿಕೆ ನಿರ್ದೇಶಕರಿಗೆ ಇದೆ.

ಗರ್ಭಿಣಿ ಶಾಲಿನಿಯನ್ನು ಪತಿ ಪುಟ 15 ಕ್ಕೆ

'2018' ಸಿನಿಮಾ: ಇದೇ ನೋಡಿ ನಿಜವಾದ ಕೇರಳ ಸ್ಟೋರಿ ಎಂದ ಕೇರಳಿಗರು



ಟೊವಿನೋ ಥಾಮಸ್ ಅಭಿನಯದ 'ರಿಯಲ್ ಕೇರಳ ಸ್ಟೋರಿ' '2018' ಮಲಯಾಳಂ ಸಿನಿಮಾ ದಾಖಲೆಗಳನ್ನು ಮುರಿದು ಮುನ್ನುಗ್ಗುತ್ತಿದೆ. ಮತ್ತೊಂದೆಡೆ, ಕೇರಳಿಗರು The Real Kerala Story ಎಂಬ ಹ್ಯಾಸ್ ಟ್ಯಾಗ್ ನೊಂದಿಗೆ 2018 ರ ಸಿನಿಮಾಗೆ ಮೆಚ್ಚುಗೆ ವ್ಯಕ್ತಪಡಿಸತೊಡಗಿದ್ದಾರೆ. 'ದಿ ಕೇರಳ ಸ್ಟೋರಿ' ಚಿತ್ರಕ್ಕೆ ಪ್ರತ್ಯುತ್ತರವಾಗಿ 2018 ಚಿತ್ರವನ್ನು ತೋರಿಸತೊಡಗಿದ್ದಾರೆ.

"ಇಡೀ ಕೇರಳ ಮತ್ತು ಅದರ ಜನರು ದುರಂತದ ವಿರುದ್ಧ ಹೇಗೆ ಹೋರಾಡಿದರು ಎಂಬುದನ್ನು ಈ ಚಲನಚಿತ್ರವು ನಿಮಗೆ ತೋರಿಸುತ್ತದೆ. ನಾವು ಧೈರ್ಯ, ಮಾನವೀಯತೆ ಮತ್ತು ಜವಾಬ್ದಾರಿಯಿಂದ ಆ ವಿಪತ್ತನ್ನು ಹೇಗೆ ಎದುರಿಸಿದ್ದೇವೆ ಎಂಬುದನ್ನು ಇದು ನಿಮಗೆ ತೋರಿಸುತ್ತದೆ. ಇದು ನಮ್ಮ ಕೇರಳದ ನಿಜವಾದ ಕಥೆ!! #KeralaStory #TheKeralaStory #2018Movie". ನಮ್ಮ ಚೈತನ್ಯವನ್ನು ಜಗತ್ತಿಗೆ ತೋರಿಸೋಣ" ಎಂದೊಬ್ಬರು ಟ್ವಿಟ್ ಮಾಡಿದ್ದಾರೆ.

ಅದಾ ಶರ್ಮಾ ಅಭಿನಯದ 'ದಿ ಕೇರಳ ಸ್ಟೋರಿ' ಬಿಡುಗಡೆಯಾದ ದಿನವೇ, ಮತ್ತೊಂದು ಮಲಯಾಳಿ ಚಿತ್ರ '2018' ಬಿಡುಗಡೆಯಾಗಿದೆ. ಆರಂಭದಲ್ಲಿ ಈ ಚಿತ್ರಕ್ಕೆ ಕಡಿಮೆ ಪ್ರತಿಕ್ರಿಯೆ ವ್ಯಕ್ತವಾದರೂ ವಾರಾಂತ್ಯದಲ್ಲಿ ಬಲವಾದ ವಿಮರ್ಶಾತ್ಮಕ ಪ್ರತಿಕ್ರಿಯೆ ಮತ್ತು ಜನರ ಮಾತುಗಳು ಮಲಯಾಳಂ ಚಿತ್ರರಂಗದ ಸಂರಕ್ಷಕನಾಗಿ ಹೊರಹೊಮ್ಮಿದವು.

ಜೂಡ್ ಆಂಥನಿ ಜೋಸೆಫ್ ನಿರ್ದೇಶನದ ಈ ಚಲನಚಿತ್ರವು 2018 ರ ಕೇರಳ ಪ್ರವಾಹವನ್ನು ಆಧರಿಸಿದೆ. ಟೊವಿನೋ ಥಾಮಸ್, ಕುಂಚಾಕೊ ಬೋಬನ್, ಆಸಿಫ್ ಅಲಿ, ವಿನೀತ್ ಶ್ರೀನಿವಾಸನ್ ಮತ್ತು ಅಪರ್ಣಾ ಬಾಲಮುರಳಿ ಅವರ ಸಮೂಹ ನೇತೃತ್ವವನ್ನು ಒಳಗೊಂಡಿದೆ.

ಪ್ರೇಕ್ಷಕರನ್ನು ಆಕರ್ಷಿಸಲು ಹೆಣಗಾಡುತ್ತಿದ್ದ ಮಲಯಾಳಂ ಬಾಕ್ಸ್ ಆಫೀಸ್ ಅನ್ನು 2018 ಮಾಲಿವುಡ್ ಪುನರುಜ್ಜೀವನಗೊಳಿಸಿದೆ. ಇದು ಈಗ ಉದ್ಯಮದ ಅತಿದೊಡ್ಡ ಹಿಟ್‌ಗಳಲ್ಲಿ ಒಂದಾಗಿದೆ.

ವರದಿಯ ಪ್ರಕಾರ, ಚಿತ್ರವು ಕೇರಳದಲ್ಲಿ ರೂ 1.85 ಕೋಟಿ ಗಳಿಸಿತು. ಮತ್ತು ಅದರ ಆರಂಭಿಕ ವಾರಾಂತ್ಯದಲ್ಲಿ 2 ನೇ ದಿನದಲ್ಲಿ ರೂ 3.22 ಕೋಟಿ ಮತ್ತು 3 ನೇ ದಿನದಲ್ಲಿ ರೂ.4.1 ಕೋಟಿ ಗಳಿಸಿ ಅದರ 3 ದಿನದ ಒಟ್ಟು ಮೊತ್ತವನ್ನು ರೂ 9.17 ಕೋಟಿಗೆ ಗಳಿಸುವ ಮೂಲಕ ಘನ ಬೆಳವಣಿಗೆಯನ್ನು ಕಂಡಿತು.

ಅಷ್ಟೆ ಅಲ್ಲ, ಚಿತ್ರವು ಭಾನುವಾರದಂದು 4 ನೇ ದಿನದಲ್ಲಿ ಅದೇ ರೇಂಜ್‌ನಲ್ಲಿ ಸಂಗ್ರಹಿಸಿದೆ, ಅದು ತನ್ನ ಮೊದಲ ವಾರದ ದಿನ 4 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದೆ. 4 ದಿನಗಳ ಒಟ್ಟು ಮೊತ್ತ 13.17 ಕೋಟಿ ಗಳಿಸಿಕೊಂಡಿದೆ.

ಅದರ ಸಾಗರೋತ್ತರ ಬಾಕ್ಸ್ ಆಫೀಸ್ ಅನ್ನು ಗಣನೆಗೆ ತೆಗೆದುಕೊಂಡರೆ, '2018' ಚಿತ್ರ 4 ದಿನಗಳಲ್ಲಿ 32 ಕೋಟಿಗೂ ಹೆಚ್ಚು ರೂಪಾಯಿಗಳನ್ನು ಗಳಿಸಿದೆ. ಈಗ, ಚಿತ್ರದ ಬಲವಾದ ಬಾಕ್ಸ್ ಆಫೀಸ್ ಹಿಡಿತವನ್ನು ನೋಡಿದರೆ, ಇದು ಮಲಯಾಳಂ ಚಿತ್ರರಂಗದ ಇತಿಹಾಸದಲ್ಲಿ ವಿಶ್ವಾದ್ಯಂತ 100 ಕೋಟಿ ಗಳಿಸಿದ ಮೂರನೇ ಚಿತ್ರವಾಗಲಿದೆ ಎಂಬ ಭರವಸೆ ಇದೆ.

ಇಲ್ಲಿಯವರೆಗೆ, ಕೇವಲ ಎರಡು ಚಿತ್ರಗಳು ಈ ಸಾಧನೆಯನ್ನು ಸಾಧಿಸಿವೆ – ಮೋಹನ್ ಲಾಲ್ ಅಭಿನಯದ ಪುಲಿಮುರುಗನ್ (2016) ಮತ್ತು ಲೂಸಿಫರ್ (2019).

ವಿವಾದಾತ್ಮಕ 'ದಿ ಕೇರಳ ಸ್ಟೋರಿ'ಗೆ ಸಾಕಷ್ಟು ಟೀಕೆಗಳು ಬಂದಿವೆ, ಸಾಮಾಜಿಕ ಮಾಧ್ಯಮದಲ್ಲಿ ಅನೇಕ ಜನರು 2018 ಅನ್ನು "ನೈಜ" ಕೇರಳದ ಕಥೆ ಎಂದು ಕರೆಯುತ್ತಿದ್ದಾರೆ – ಪ್ರತಿಯೊಬ್ಬರೂ ಹೀರೋ ಅನ್ನು "ನೈಜ" ಕೇರಳ ಸ್ಟೋರಿ ಎಂದು ಹೇಳುತ್ತಾ, ಇತರರನ್ನು ಚಿತ್ರಮಂದಿರಗಳಲ್ಲಿ ವೀಕ್ಷಿಸಲು ಒತ್ತಾಯಿಸುತ್ತಿದ್ದಾರೆ.

ಮಲಯಾಳಂನಲ್ಲಿ ಭಾರಿ ಹಣ–ಸ್ಪಿನ್ನರ್ ಆಗಿ ಹೊರಹೊಮ್ಮಿದ ನಂತರ, 'ದಿ ರಿಯಲ್ ಕೇರಳ ಸ್ಟೋರಿ' 2018 ಚಲನಚಿತ್ರದ ಹಿಂದಿ ಆವೃತ್ತಿಯು ಮೇ 12 ರಂದು ಬಿಡುಗಡೆಯಾಗಲಿದೆ.

ಕೇರಳಿಗರು The Real Kerala Story ಎಂಬ ಹ್ಯಾಸ್ ಟ್ಯಾಗ್ ನೊಂದಿಗೆ 2018 ರ ಸಿನಿಮಾಗೆ ಮೆಚ್ಚುಗೆ ವ್ಯಕ್ತಪಡಿಸತೊಡಗಿದ್ದಾರೆ.

ವಿವೇಕ್ ರಂಜಿತ್ ಎನ್ನುವವರು "ಭರವಸೆ, ಪ್ರೀತಿ ಮತ್ತು ಒಗ್ಗಟ್ಟು ಯಾವಾಗಲೂ ದ್ವೇಷ, ಹಗೆತನ ಮತ್ತು ವಿಭಜನೆಯನ್ನು ಗೆಲ್ಲುತ್ತದೆ. #2018ಚಲನಚಿತ್ರ – ನಿಜವಾದ ಕೇರಳದ ಕಥೆ! ಇತಿಹಾಸದ ಭಾಗವಾಗಲು ಪ್ರಬಲ ಹೆಮ್ಮೆ! ಅಭಿನಂದನೆಗಳು ಜೂಡ್ ಆಂಥನಿ ಜೋಸೆಫ್ ಮತ್ತು ಇಡೀ ತಂಡ!"

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**